ಬ್ಯಾಂಕಿಂಗ್

ಶ್ರೀಮತಿ ಶಾರದಾ ಶಾಮಣ್ಣ





ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬ್ಯಾಂಕಿಂಗ್

ಶ್ರೀಮತಿ ಶಾರದಾ ಶಾಮಣ್ಣ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

BANKING : By Smt. Sharada Shamanna
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : iv + 60 Price : 25=00: **2008**

ಮುದ್ರಣದ ವರ್ಷ : ೨೦೦೮
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತೈದು ರೂಪಾಯಿಗಳು

ಪ್ರಕಟಣಾ ಸಮಿತಿ

ಮುಖಪುಟ ವಿನ್ಯಾಸ : ಚಿನ್ಮಯ

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್, ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ನಾಡು, ನುಡಿ, ಸಂಸ್ಕೃತಿಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ಶ್ರಮಿಸುತ್ತಿರುವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ೧೯೧೫ ರಿಂದ ಇಲ್ಲಿಯವರೆಗಿನ ಸುದೀರ್ಘ ಇತಿಹಾಸದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಕಾರ್ಯಕ್ಷೇತ್ರವನ್ನು ವೈವಿಧ್ಯಮಯವಾಗಿ ವಿಸ್ತರಿಸಿಕೊಂಡಿದೆ. ಅದರಲ್ಲಿ ಕನ್ನಡಿಗರಿಗೆ ಅತ್ಯುತ್ತಮ ಸಾಹಿತ್ಯವನ್ನು ಕಾಲಕಾಲಕ್ಕೆ ಒದಗಿಸಿಕೊಡುವುದೂ ಪ್ರಮುಖವಾದುದಾಗಿದೆ. ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಳ್ಳುವಂಥ ಸಾವಿರಾರು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಜನರಿಗೆ ಬೇಕಾದ ಉಪಯುಕ್ತ ಹಾಗೂ ಮೌಲಿಕ ಕೃತಿಗಳನ್ನು ಕನ್ನಡಿಗರಿಗೆ ಕೊಡಬೇಕೆನ್ನುವ ಎಚ್ಚರವನ್ನು ಪರಿಷತ್ತು ಕಾದುಕೊಂಡಿದೆ. ಕನ್ನಡ ಭಾಷೆ, ಲಿಪಿ, ಸಂಸ್ಕೃತಿ ಕುರಿತ ಗ್ರಂಥಗಳು, ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳ ಗದ್ಯಾನುವಾದಗಳು, ಕವಿಕಾವ್ಯ ವಿಚಾರ ಸಂಕಿರಣಗಳ ಪ್ರಬಂಧಗಳು, ಜೀವನ ಚರಿತ್ರೆ, ಜಾನಪದ, ಶಾಸನ, ಆರೋಗ್ಯ ವಿಜ್ಞಾನ, ಮನೋವಿಜ್ಞಾನದಂಥ ವಿಭಿನ್ನ ಪ್ರಕಾರಗಳ ಪುಸ್ತಕಗಳನ್ನು ಪ್ರಕಟಿಸುವಲ್ಲಿ ಆಸಕ್ತಿ ತೋರಿದೆ. ಬೇಡಿಕೆ ಹೆಚ್ಚಾಗಿರುವ ಮತ್ತು ಮಾರಾಟವಾದ ಪುಸ್ತಕಗಳನ್ನು ಮರುಮುದ್ರಣದ ಮೂಲಕ ಸಹೃದಯರಿಗೆ ತಲುಪಿಸುತ್ತಿದೆ.

ಈ ಪುಸ್ತಕದ ಶೀರ್ಷಿಕೆ ಬ್ಯಾಂಕಿಂಗ್ ಎಂದಿದ್ದರೂ ಇದು ಮುಖ್ಯವಾಗಿ ಕೃಷಿ ಮತ್ತು ಸಹಕಾರಕ್ಕೆ ಸಂಬಂಧಿಸಿದ ವಿಷಯಗಳನ್ನು ವಿವರಿಸಲು ಪ್ರಯತ್ನಿಸಿದೆ. ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿ ವ್ಯವಸಾಯ ಕ್ಷೇತ್ರದ ಹೆಚ್ಚಿನ ಪ್ರಗತಿಗೆ ಸಹಾಯಕವಾಗಲಿ, ಹಸಿರು ಕ್ರಾಂತಿಗೆ ಇಂಬು ನೀಡಲಿ ಎಂಬ ಉದ್ದೇಶದಿಂದಲೇ ಸರ್ಕಾರ ಸಹಕಾರಿ ಬ್ಯಾಂಕುಗಳನ್ನು ಪ್ರಾರಂಭಿಸಿದೆ. ಬ್ಯಾಂಕಿಂಗ್ ಎನ್ನುವ ಶಬ್ದ ಚಾಲನೆಗೆ ಬರುವುದಕ್ಕೆ ಎಷ್ಟೋ ಮೊದಲಿನಿಂದಲೇ ಸ್ಥಳೀಯರು ತಮ್ಮಲ್ಲಿನ ಬಂಡವಾಳವನ್ನು ಕ್ರೋಢೀಕರಿಸಿ ಸಹಕಾರಿ ಸಂಘಗಳನ್ನು ರಚಿಸಿಕೊಂಡು ರೈತ ಸಮುದಾಯದ ಏಳಿಗೆಗೆ ಪೂರಕವಾಗುವಂತೆ ಆರ್ಥಿಕ ನೆರವನ್ನು ನೀಡುತ್ತಾ ಬಂದಿರುವುದು ಬ್ಯಾಂಕಿಂಗ್ ವ್ಯವಸ್ಥೆಯೇ ಆಗಿದೆ.ಒಬ್ಬ ವ್ಯಕ್ತಿ ಅಥವಾ ಒಂದು ಸಂಸ್ಥೆ ತನ್ನಲ್ಲಿರುವ ಹಣವನ್ನು ಅಗತ್ಯವಿರುವ ಇತರರಿಗೆ ಹಂಚುವುದು, ಅದಕ್ಕಾಗಿ ನಿಗದಿಪಡಿಸಿದ ಬಡ್ಡಿಯನ್ನು ತೆಗೆದುಕೊಳ್ಳುವುದು ಬ್ಯಾಂಕಿಂಗ್ ವ್ಯವಸ್ಥೆಯ ಒಂದು ಮುಖವಾದರೆ, ವ್ಯಕ್ತಿ ತನ್ನಲ್ಲಿರುವ ಹಣ ಅಥವಾ ಒಡವೆಯನ್ನು ಪ್ರಾಮಾಣಿಕವಾದ ಸಂಸ್ಥೆಯಲ್ಲಿ ಸುರಕ್ಷಿತವಾಗಿ ಇಡುವುದು ಅದರ ಇನ್ನೊಂದು ಮುಖ. ಹೀಗೆ ಕೊಡುವುದು, ಸ್ವೀಕರಿಸುವುದು ಮತ್ತು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವುದು– ಇಂಥ ಆರ್ಥಿಕ ವ್ಯವಹಾರವನ್ನೇ ಬ್ಯಾಂಕಿಂಗ್ ಎನ್ನಬಹುದು. ಈ ಸರಪಳಿ ಸಂಬಂಧವನ್ನು ಸರಳವಾಗಿ ವಿಶ್ಲೇಷಿಸುತ್ತಾ, ಸಕಾಲದಲ್ಲಿ ಬ್ಯಾಂಕುಗಳು ಹಣದ ನೆರವನ್ನು ನೀಡುವ ಮೂಲಕ ದೇಶವನ್ನು ಸದೃಢಗೊಳಿಸಲು ಹೇಗೆ ಸಾಧ್ಯವಾಗುತ್ತದೆನ್ನುವ ವಿವರಣೆಯನ್ನು ಈ ಕೃತಿ ಒಳಗೊಂಡಿದೆ.

ಶ್ರೀಮತಿ ಶಾರದಾ ಶಾಮಣ್ಣನವರು 'ಬ್ಯಾಂಕಿಂಗ್' ಕೃತಿಯನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಈ ಕೃತಿಯ ಪ್ರಕಟಣೆಗೆ ಸಮ್ಮತಿಸಿದ ಪ್ರಕಟಣಾ ಸಮಿತಿಗೂ, ಅಚ್ಚುಕಟ್ಟಾಗಿ ಮುದ್ರಿಸಿದ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿ ವರ್ಗಕ್ಕೂ, ಈ ಕೆಲಸದಲ್ಲಿ ಸಹಕರಿಸಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಡಾ. ನಲ್ಲೂರುಪ್ರಸಾದ್ ಆರ್.ಕೆ.
ಅಧ್ಯಕ್ಷರು

ಲೇಖಕರ ಮಾತು

ಭಾರತದಲ್ಲಿ ಕೃಷಿ ಪ್ರಧಾನವಾದ ಕಸುಬು ಎನ್ನುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇದರಲ್ಲಿ ಬೆಳೆಯುವ ಬೆಳೆ ಜನರಿಗೆ ಆಹಾರವನ್ನು ಒದಗಿಸುವುದಲ್ಲದೆ ಕೈಗಾರಿಕೆಗೂ ಸಹಕಾರಿಯಾಗಿದೆ. ವ್ಯವಸಾಯವು ಒಂದು ಸಮೂಹ ವೃತ್ತಿಯಾಗಿದೆ. ಸಹಾಯ, ಸಂಪರ್ಕಗಳು ಅತೀ ಮುಖ್ಯವಾಗಿವೆ. ಉಳುಮೆ, ಬಿತ್ತನೆ, ನೀರು ಹಾಯಿಸುವುದು, ಕಳೆಕೀಳುವುದು, ಔಷಧಿ ಸಿಂಪರಣೆ, ಕುಯ್ಲು, ರಾಶಿಮಾಡುವುದು, ಸಾಗಾಣಿಕೆ, ಇವೇ ಮೊದಲಾದವುಗಳು ವ್ಯವಸಾಯದ ಮುಖ್ಯ ಮಜಲುಗಳು. ಒಗ್ಗಟ್ಟಿನಲ್ಲಿ ಬಲವಿದೆ, ಎಲ್ಲರೂ ತನಗಾಗಿ, ತಾನು ಎಲ್ಲರಿಗೂ ಎಂಬುದು ಸಹಕಾರದ ತತ್ವ. ವ್ಯವಸಾಯದಲ್ಲಿ ಸಹಕಾರವು ಎಂದಿನಿಂದಲೂ ನಡೆದು ಬಂದಿದೆ. ಅಂದರೆ ಇಬ್ಬರೂ ಅಥವಾ ಹೆಚ್ಚು ವ್ಯಕ್ತಿಗಳು ಒಂದು ಗೂಡಿ ವೈಯುಕ್ತಿಕವಾಗಿ ಸಾಧಿಸಲು ಸುಲಭ.

ಇದೇ ಸೂತ್ರವನ್ನು ಅವಲಂಬಿಸಿ ಸರ್ಕಾರದವರೂ ವ್ಯವಸಾಯದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಅನೇಕ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಿದ್ದಾರೆ. ಕೆಲವು ಕಡೆ ಸ್ಥಳೀಯರೇ ಸೇರಿಕೊಂಡು ಬಂಡವಾಳ ಹೂಡಿಕೊಂಡು ಸಹಕಾರಿ ಸಂಘಗಳನ್ನು ರಚಿಸಿಕೊಂಡು ರೈತರಿಗೆ ಆರ್ಥಿಕ ನೆರವನ್ನು ನೀಡುತ್ತಾ ಬಂದಿದ್ದಾರೆ. ಪುರಾತನ ಕಾಲದಿಂದಲೂ ಈ ಬ್ಯಾಂಕಿಂಗ್ ವ್ಯವಸ್ಥೆ ಜಾರಿಯಲ್ಲಿದ್ದಿತು. ಆಗ ಅದಕ್ಕೆ ಹೆಸರು ಬೇರೆ ಇದ್ದಿರಬಹುದು. ಬ್ಯಾಂಕಿಂಗ್ ಎಂದರೆ ಒಂದು ವ್ಯಕ್ತಿಯಾಗಲಿ ಅಥವಾ ಒಂದು ಸಂಸ್ಥೆಯಾಗಲಿ ತಾನು ಸಂಗ್ರಹಿಸಿರುವ ಹಣವನ್ನು ಅದರ ಅಗತ್ಯವಿರುವ ಇನ್ನಿತರರಿಗೆ ಹಂಚುವುದು ಅಥವಾ ಒಂದು ವ್ಯಕ್ತಿ ತನ್ನಲ್ಲಿರುವ ಹಣ, ಒಡವೆ, ಮತ್ತಿತರ ಬೆಲೆಬಾಳುವ ವಸ್ತುಗಳನ್ನು ಭದ್ರತೆಗಾಗಿ ಒಬ್ಬ ನಿಷ್ಠಾವಂತನಾದ ವ್ಯಕ್ತಿ ಅಥವಾ ಪ್ರಾಮಾಣೀಕವಾದ ಸಂಸ್ಥೆಯಲ್ಲಿ ಇಡುವುದು. ಹೀಗೆ ಕೊಡುವುದು, ಇಡುವುದು, ಇದನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಆರ್ಥಿಕ ವ್ಯವಹಾರವೇ ಬ್ಯಾಂಕು.

ಈ ಪುಸ್ತಕವು ಕೃಷಿ, ಸಹಕಾರ ಮತ್ತು ಬ್ಯಾಂಕಿಂಗ್ ವಿಷಯಗಳನ್ನೊಳಗೊಂಡಿದೆ. ಈ ಮೂರು ವಿಷಯಗಳಿಗೂ ಒಂದು ರೀತಿಯ ಸರಪಳಿಯಿದ್ದಂತಿದೆ. ಒಂದನ್ನೊಂದು ಅವಲಂಬಿಸಿವೆ. ಜನರಲ್ಲಿ ಒಗ್ಗಟ್ಟು, ಸಹಕಾರವಿದ್ದರೆ ಕೃಷಿಯು ತನ್ನ ಉತ್ಪನ್ನವನ್ನು ಅಧಿಕಗೊಳಿಸಿ ದೇಶದ ಆರ್ಥಿಕ ಸಮೃದ್ಧಿಯನ್ನು ಬೆಳೆಸಬಹುದು. ಇದಕ್ಕೆ ಸಕಾಲದಲ್ಲಿ ಬ್ಯಾಂಕುಗಳು ಹಣದ ನೆರವನ್ನು ನೀಡಿದರೆ ಭಾರತವು ಪ್ರಪಂಚದಲ್ಲೇ ಬಲಶಾಲಿಯಾದ ದೇಶವಾಗುವುದರಲ್ಲಿ ಸಂಶಯವೇ ಇಲ್ಲ. ಈ ದತ್ತಿ ನಿಧಿ ಸ್ಪರ್ಧೆಗೆ ನನ್ನ ಲೇಖನವನ್ನು ಆಯ್ಕೆ ಮಾಡಿ ಪ್ರಕಟಿಸಿದ್ದಕ್ಕೆ ನಾನು ಆಭಾರಿಯಾಗಿರುತ್ತೇನೆ.

ಬೆಂಗಳೂರು.

ಶಾರದ ಶಾಮಣ್ಣ

ಕೃಷಿ - ಬ್ಯಾಂಕಿಂಗ್ - ಸಹಕಾರ

ಪೀಠಿಕೆ

ಪುರಾತನ ಕಾಲದಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಅಸ್ತಿತ್ವದಲ್ಲಿದ್ದಿತು. ಮನು ಮತ್ತು ಕೌಟಿಲ್ಯ ಮುಂತಾದವರ ಬರವಣಿಗೆಗಳಲ್ಲಿ ಮತ್ತು ಯೇಸುಕ್ರಿಸ್ತನ ಉಪದೇಶಗಳಲ್ಲಿ ಬ್ಯಾಂಕಿಂಗ್ ಪದ್ಧತಿಯನ್ನು ಉಲ್ಲೇಖಿಸಲಾಗಿದ್ದಿತು. ಬಾಬಿಲೋನಿಯಾದಲ್ಲಿ ನಡೆಸಿದ ಭೂಶೋಧನೆಯಿಂದ ಬ್ಯಾಂಕಿಂಗ್ ಚಟುವಟಿಕೆಗಳು ಕ್ರಿಸ್ತನಿಗಿಂತ ಎಷ್ಟೋ ಮೊದಲೇ ಅಸ್ತಿತ್ವದಲ್ಲಿದ್ದವು ಎಂಬುದಾಗಿ ತಿಳಿದುಬಂದಿದೆ.

ಆದರೆ ಆಧುನಿಕ ಪದ್ಧತಿಯ ಬ್ಯಾಂಕಿಂಗ್ ವ್ಯವಸ್ಥೆ ಇತ್ತೀಚೆಗಷ್ಟೆ ಹುಟ್ಟಿಕೊಂಡಿತು. ಅದು ಔದ್ಯೋಗಿಕ ಕ್ರಾಂತಿಯ ನಂತರವೇ ಅಸ್ತಿತ್ವಕ್ಕೆ ಬಂದಿತು. ಔದ್ಯೋಗಿಕ ಕ್ರಾಂತಿಯ ನಂತರ ಕೈಗಾರಿಕೆ ಮತ್ತು ಉದ್ಯಮಗಳ ಗಾತ್ರವು ದೊಡ್ಡದಾಗಿ ಕೂಡು ಬಂಡವಾಳ ಪದ್ಧತಿಯ ವ್ಯವಹಾರ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಈ ಪದ್ಧತಿಯ ಸಂಘಟನೆಯ ಸಣ್ಣ ಆದಾಯವಿರುವ ಜನರಿಗೆ, ದೊಡ್ಡ ಕೈಗಾರಿಕೆ ಮತ್ತು ಉದ್ಯಮಗಳ ಶೇರುದಾರರಾಗಲು ಪ್ರೋತ್ಸಾಹ ನೀಡಿತು. ಆದಾಗ್ಯೂ ಕೆಲವು ವರ್ಗದ ಜನರು ಈ ರೀತಿಯ ಕೂಡು ಬಂಡವಾಳ ಸಂಸ್ಥೆಯ ಶೇರುಗಳಲ್ಲಿ ತಮ್ಮ ಹಣವನ್ನು ತೊಡಗಿಸಲು ಸಿದ್ಧವಿರಲಿಲ್ಲ, ಆದರೆ ಮರುಪಾವತಿಯ ಭರವಸೆಯೊಂದಿಗೆ ತಮ್ಮ ಹಣದ ಮೇಲೆ ಸ್ವಲ್ಪ ಬಡ್ಡಿಯನ್ನು ನೀಡಿದಲ್ಲಿ ಅವರು ತಮ್ಮ ಉಳಿತಾಯದ ಹಣವನ್ನು ತೊಡಗಿಸಲು ಆಸಕ್ತರಾಗಿದ್ದರು. ಆದ್ದರಿಂದ ಸಹಜವಾಗಿಯೇ ಅವರಿಗೆ ಒಪ್ಪಿಗೆಯಾದ ಷರತ್ತುಗಳೊಂದಿಗೆ ಜನರಿಂದ ಉಳಿತಾಯ ಹಣವನ್ನು ಸಂಗ್ರಹಿಸಿ ಅದನ್ನು ಉತ್ಪಾದನೆಯ ಉದ್ದೇಶಗಳಿಗೆ ಅವಶ್ಯವಿರುವವರಿಗೆ ಒದಗಿಸುವ ಆರ್ಥಿಕ ಸಂಸ್ಥೆಗಳ ಸ್ಥಾಪನೆಯ ಅವಶ್ಯಕತೆಯು ಉದ್ಭವವಾಯಿತು. ಅಂತೆಯೇ ಕೂಡು ಬಂಡವಾಳ ಬ್ಯಾಂಕುಗಳೆಂಬ ಬೃಹತ್ ಸಂಖ್ಯೆಯ ಆರ್ಥಿಕ ಸಂಸ್ಥೆಗಳು ಔದ್ಯೋಗಿಕ ಕ್ರಾಂತಿಯ ನಂತರ ಸ್ಥಾಪನೆಯಾದವು. ಹೀಗೆ ಬ್ಯಾಂಕುಗಳು ಇತ್ತೀಚೆಗೆ ಹೇರಳವಾಗಿ ಬೆಳೆದಿವೆ.

ಎಲ್ಲಾ ದೇಶಗಳಿಗೆ ಅನ್ವಯುವಾಗುವಂತೆ ಬ್ಯಾಂಕುಗಳನ್ನು ವರ್ಗೀಕರಿಸುವುದು ತುಂಬಾ ಕಷ್ಟ. ಏಕೆಂದರೆ ಆರ್ಥಿಕ ಪರಿಸ್ಥಿತಿಗಳು ಮತ್ತು

ಆರ್ಥಿಕ ಅವಶ್ಯಕತೆಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಬೇರೆ ಬೇರೆಯಾಗಿರುತ್ತದೆ.

ಬ್ಯಾಂಕ್ ಇತಿಹಾಸ

ಬ್ಯಾಂಕ್ ಎಂಬುದು ಒಂದು ವಿದೇಶೀ ಪದ. ಇದರ ಮೂಲ ಅರ್ಥವು ರಾಶಿ ಎಂಬುದಾಗಿದೆ. ಇಟಲಿ ಭಾಷೆಯಲ್ಲಿ ಬ್ಯಾಂಕೋ ಎಂಬ ಶಬ್ದಕ್ಕೆ ಹಣದ ಕೂಡಿ ಬೀಳುವಿಕೆ ಎಂಬುದಾಗಿದೆ. ಫ್ರೆಂಚ್ ಭಾಷೆಯ ಬ್ಯಾಂಕೋ ಎನ್ನುವ ಪದಕ್ಕೆ ಸಂಗ್ರಹ ಅಥವಾ ಶೇಖರಣೆ ಎಂದು ಅರ್ಥೈಸಬಹುದು. ಸಾಮಾನ್ಯವಾದ ಅರ್ಥದಲ್ಲಿ ಹಣದ ಕೊಡುಕೊಳ್ಳುವ ವ್ಯವಹಾರವನ್ನು ಮಾಡುವ ಸಂಸ್ಥೆಗೆ ಬ್ಯಾಂಕ್ ಎಂದು ಹೆಸರಾಗಿದೆ. ಇದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಮೊಟ್ಟ ಮೊದಲು ಇಟಲಿಯಲ್ಲಿ ಬ್ಯಾಂಕಿನ ಸ್ಥಾಪನೆಯಾಯಿತು. ಅದೇ ಮಾದರಿಯ ಮೇಲೆ ಬೇರೆ ದೇಶಗಳಲ್ಲಿಯೂ ಬ್ಯಾಂಕುಗಳು ತೆರೆಯಲ್ಪಟ್ಟವು. ಹದಿಮೂರನೆಯ ಮತ್ತು ಹದಿನಾಲ್ಕನೆಯ ಶತಮಾನಗಳಲ್ಲಿ ಹಣಕಾಸಿನ ವ್ಯವಹಾರ, ಮತ್ತು ವ್ಯಾಪಾರಗಳಲ್ಲಿ ಚೆನ್ನಾಗಿ ನುರಿತು ಯೂರೋಪಿನ ಮುಖ್ಯ ಪಟ್ಟಣಗಳಲ್ಲಿ ತಮ್ಮ ಉದ್ಯೋಗದ ಮೇಲ್ಮೆಯನ್ನು ಸ್ಥಾಪಿಸಿದರು. ಈ ವ್ಯಾಪಾರಿಗಳು ಕಂದಾಯದ ಭದ್ರತೆಯ ಮೇಲೆ ಬೇರೆ ಬೇರೆ ದೇಶದ ಅರಸರಿಗೆ ಸಾಲವನ್ನು ಕೊಡುತ್ತಿದ್ದರು ಈ ವ್ಯಾಪಾರಿಗಳು ಒಂದು ದೇಶದ ನಾಣ್ಯಗಳ ಬದಲು ಇನ್ನೊಂದು ದೇಶದ ನಾಣ್ಯಗಳನ್ನು ಕೊಡುವ ಮತ್ತು ತಮ್ಮ ಹಣವನ್ನು ಬಡ್ಡಿಯಿಂದ ಕೊಡುವ ವ್ಯವಹಾರವನ್ನು ಮಾಡುತ್ತಿದ್ದರು. ಕ್ರಮೇಣ ಲಂಡನ್ನಿನ ಚಿನ್ನ-ಬೆಳ್ಳಿಯ ವ್ಯಾಪಾರಿಗಳು ಈ ವ್ಯವಹಾರವನ್ನು ಆರಂಭಿಸಿದರಲ್ಲದೆ ಅದರ ಜೊತೆ ಚಿನ್ನ-ಬೆಳ್ಳಿ ಬಂಗಾರದ ಕೊಡುಕೊಳ್ಳುವ ಉದ್ಯಮ ಮಾಡಿ ಲಾಭವನ್ನು ಪಡೆಯಹತ್ತಿದರು.

ಇಂಗ್ಲೆಂಡಿನಲ್ಲಿ ನಡೆದದ್ದು ಹೀಗೆ, ಇಂಗ್ಲೆಂಡಿನ ವ್ಯಾಪಾರಿಗಳು ತಮ್ಮ ಹಣವನ್ನು ಸುರಕ್ಷತೆಗಾಗಿ ದೊರೆಯ ಟಂಕಸಾಲೆಯಲ್ಲಿ ಇಡುತ್ತಿದ್ದರು. ಒಮ್ಮೆ ಸರ್ಕಾರ ದೊರೆಯ ಸ್ವಂತದ ಖರ್ಚಿಗಾಗಿ ಹಣವನ್ನು ಮಂಜೂರು ಮಾಡದೇ ಹೋದದ್ದರಿಂದ ದೊರೆ ವ್ಯಾಪಾರಿಗಳ ಹಣವನ್ನು ವಶಪಡಿಸಿಕೊಂಡನು. ನಂತರ ಹೇಗೋ ವ್ಯಾಪಾರಿಗಳು ಹಣವನ್ನು ಹಿಂತಿರುಗಿಸಲಾಯಿತು. ವ್ಯಾಪಾರಿಗಳಿಗೆ ದೊರೆಯ ಮೇಲೆ ನಂಬಿಕೆ ಸಡಿಲವಾಗಿ ಅವರು ಮುಂದೆ ಮುಂದೆ ತಮ್ಮ ಹಣವನ್ನು ಚಿನಿವಾಲರಲ್ಲಿ ಇಡಲಾರಂಭಿಸಿದರು. ಏಕೆಂದರೆ

ಚಿನಿವಾಲರು ಭದ್ರವಾಗಿ ತಿಜೋರಿಗಳನ್ನು ತಮ್ಮ ಚಿನ್ನಾಭರಣಗಳಿಗಾಗಿ ಇಟ್ಟುಕೊಂಡಿದ್ದರು. ಆದ್ದರಿಂದ ಜನತೆ ತಮ್ಮ ಉಳಿಕೆಯ ಹಣ ಮತ್ತು ಆಭರಣಗಳನ್ನು ಚಿನಿವಾಲರಲ್ಲಿ ಇಡುವ ಇರಾದೆಯನ್ನು ಮಾಡಿಕೊಂಡರು. ಮತ್ತು ತಮಗೆ ಬೇಕಾದಾಗ ಹಣವನ್ನಾಗಲೀ ಆಭರಣವನ್ನಾಗಲೀ ಮರಳಿ ಪಡೆಯುತ್ತಿದ್ದರು. ಚಿನಿವಾಲರು ತಮ್ಮ ಈ ಸೇವೆಗಾಗಿ ಕೆಲವೊಂದು ಶುಲ್ಕವನ್ನು ಅವರಿಂದ ವಸೂಲು ಮಾಡುತ್ತಿದ್ದರು.

ಹೀಗೆ ಚಿನಿವಾಲರು (ಅಕ್ಕಸಾಲಿಗರು) ಅನುಭವದಿಂದ ತಮ್ಮಲ್ಲಿ ಸುರಕ್ಷತೆಗಾಗಿ ಇಟ್ಟ ಎಲ್ಲಾ ಹಣವನ್ನು ಅದನ್ನು ಇಟ್ಟವರು ಏಕಕಾಲಕ್ಕೆ ಮರಳಿ ಒಯ್ಯುವುದಿಲ್ಲ ಮತ್ತು ಒಟ್ಟು ಹಣದ ಕೆಲಭಾಗವನ್ನು ಮಾತ್ರಾ ಒಂದೊಂದು ವೇಳೆಗೆ ಮರಳಿ ಒಯ್ಯುವರು ಎಂಬುದನ್ನು ಕಂಡುಕೊಂಡರು. ಆಗ ಅವರಿಗೆ ತಮ್ಮಲ್ಲಿ ಉಳಿಯುತ್ತಿದ್ದ ಹೆಚ್ಚಿನ ಹಣದ ಸದುಪಯೋಗವನ್ನು ಏಕೆ ಪಡೆಯಬಾರದು ಎಂದು ತೋರಿತು. ಅದೂ ಅಲ್ಲದೆ ಅಕ್ಕಸಾಲಿಗರನ್ನು ಜನತೆ ಪದೇ ಪದೇ ಸಾಲ ಕೇಳುತ್ತಿದ್ದಿತು. ಆದ್ದರಿಂದ ಅಕ್ಕಸಾಲಿಗರು ತಮ್ಮಲ್ಲಿ ಭದ್ರತೆಗೆಂದು ಇಟ್ಟ ಹಣದ ಭಾಗಾಂಶವನ್ನು ಬಡ್ಡಿದರದ ಮೇಲೆ ಸಾಲ ಕೊಡಲು ಆರಂಭಿಸಿದರು. ಅದರ ಜೊತೆಗೆ ಚಿನಿವಾಲರು ತಮ್ಮಲ್ಲಿ ಠೇವಣಿ ಇಟ್ಟ ಬಗ್ಗೆ ರಸೀತಿಗಳನ್ನು ಕೊಡುತ್ತಿದ್ದರು. ಮುಂದೆ ಜನತೆ ಚಿನಿವಾಲರ ಮೇಲಿನ ವಿಶ್ವಾಸದಿಂದ ಈ ರಸೀತಿಗಳನ್ನು ಹಣದಂತೆ ಸ್ವೀಕರಿಸಲು ಪ್ರಾರಂಭ ಮಾಡಿದರು. ಈ ರೂಢಿಯು ಮುಂದೆ ಬ್ಯಾಂಕ್ ನೋಟುಗಳ ಉಗಮಕ್ಕೆ ನಾಂದಿಯಾಯಿತೆಂದು ಹೇಳಬಹುದು. ಮುಂದೆ ಜನತೆ ಠೇವಾಗಿಟ್ಟ ಹಣವನ್ನು ಲಿಖಿತ ಪತ್ರದ ಮೂಲಕ ಮರಳಿ ಪಡೆಯತೊಡಗಿದಾಗ ಚೆಕ್ಕುಗಳ ಪದ್ಧತಿಯ ಉಗಮವಾಯಿತೆನ್ನಬಹುದು. ಈ ರೀತಿಯಾಗಿ ಬ್ಯಾಂಕುಗಳ ಉತ್ಪತ್ತಿಯಾಗಿ ಅನೇಕ ಮಾರ್ಪಾಟುಗಳಾದ ನಂತರ ಈಗಿನ ಬ್ಯಾಂಕಿಂಗ್ ವ್ಯವಸ್ಥೆ ಅಸ್ತಿತ್ವದಲ್ಲಿ ಬಂದಿತು. ಹೀಗೆ ನವೀನ ಇಂಗ್ಲಿಷ್ ಬ್ಯಾಂಕಿಂಗ್ ಪದ್ಧತಿಯ ತಳಹದಿಯನ್ನು ಅಲ್ಲಿನ ಚಿನಿವಾಲರು ಹಾಕಿದರೆಂದು ಹೇಳಿದರೆ ತಪ್ಪಾಗಲಾರದು.

ಈ ಬ್ಯಾಂಕಿಂಗ್ ಪದ್ಧತಿಯು ಭಾರತಕ್ಕೇನೂ ಹೊಸದಲ್ಲ. ಹೆಸರು, ರೀತಿ, ವಿಧಾನಗಳು ಸ್ವಲ್ಪ ಬೇರೆಯದೆನಿಸಬಹುದು. ಹಿಂದೆ ಶ್ರೀಮಂತ ಜಮೀನುದಾರರು, ರೈತರಿಗೆ ಅಥವಾ ಇತರ ವೃತ್ತಿನಿರತರಿಗೆ ಹಣವನ್ನು ಸಾಲವಾಗಿ ನೀಡುತ್ತಿದ್ದರು. ಪ್ರಾಚೀನ ಕಾಲದಿಂದಲೂ ಅನೇಕ ವಿಧಗಳಲ್ಲಿ ಈ ರೀತಿಯ ಹಣಕಾಸಿನ ಲೇವಾದೇವಿಯು ಆಚರಣೆಯಲ್ಲಿದೆ. ಆದರೆ ಸಾಲದ ಹಣದ

ಮೇಲೆ ತೆರಬೇಕಾಗಿದ್ದ ಬಡ್ಡಿಯ ದರವು ಬಹು ಅಧಿಕವಾಗಿದ್ದಿತು. ಸಾಲದ ಹಣವನ್ನು ವಾಪಸು ಪಡೆಯುವ ವಿಷಯದಲ್ಲಿದ್ದ ಅನಿಶ್ಚತತೆಯೇ ಅಪರಿಮಿತ ಬಡ್ಡಿದರ ಪದ್ಧತಿಗೆ ಮುಖ್ಯ ಕಾರಣವಾಗಿತ್ತು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬಡ್ಡಿದರದ ವಿಷಯದಲ್ಲಿ ಅನುಸರಿಸಬೇಕಾದ ನೀತಿ-ನಿಬಂಧನೆಗಳನ್ನು ಕುರಿತು ವಿವರಿಸಲಾಗಿದೆ. ಅತ್ಯಂತ ಪ್ರಾಚೀನವಾದ ಮನು ಧರ್ಮ ಶಾಸ್ತ್ರದಲ್ಲಿ ನ್ಯಾಯ ಶಾಸ್ತ್ರಜ್ಞನಾದ ಮನು ಮಹರ್ಷಿಯು ಹಣವನ್ನು ಇತರರಲ್ಲಿ ಶೇಖರಿಸುವ ವಿಷಯವನ್ನು ಕುರಿತು ಈ ರೀತಿ ಉಲ್ಲೇಖಿಸಿದ್ದಾನೆ.

"ಒಬ್ಬ ಬುದ್ಧಿವಂತನಾದವನು ಸತ್ಕುಲದಲ್ಲಿ ಜನಿಸಿರುವ, ಗುಣವಂತನಾದ, ಸಾರಾಸಾರ ವಿಚಾರಗಳನ್ನರಿತ ಮತ್ತು ಶ್ರೀಮಂತರೂ, ಗೌರವಸ್ಥರೂ ಆದ ಅನೇಕ ಸಂಬಂಧಿಗಳಿರುವಂತಹವನೊಬ್ಬನ ಬಳಿ ತನ್ನ ಹಣವನ್ನು ಠೇವಣಿಯಾಗಿಡುವನು".

ಹೀಗೆ ಠೇವಣಿ ಸ್ವೀಕರಿಸುವುದು ಮತ್ತು ಸಾಲಕೊಡುವುದು ಇವು ನಮ್ಮ ದೇಶದಲ್ಲಿ ಬಹು ಹಿಂದಿನಿಂದಲೂ ರೂಢಿಯಲ್ಲಿದ್ದವು ಎಂಬುದು ಪ್ರಾಚೀನ ಗ್ರಂಥಾಧಾರಗಳಿಂದ ವಿದಿತ ಹಾಗೂ ವೇದ್ಯವಾಗುವುದು. ಒತ್ತೆ ಇಟ್ಟ ಬೆಲೆಬಾಳುವ ಮಾಲುಗಳ ಮೇಲೆ ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಜಾಮೀನುಗಳ ಮೇಲೆ ಸಾಲುಕೊಡುವುದು ವಿಸ್ತೃತವಾಗಿ ರೂಢಿಯಲ್ಲಿತ್ತು.

ಪಾಶ್ಚಾತ್ಯರ ಮಾದರಿಯನ್ನು ಅನುಸರಿಸಿ ಬ್ಯಾಂಕುಗಳು ಭಾರತದಲ್ಲಿ ಸ್ಥಾಪಿತವಾಗುವವರೆಗೂ ವ್ಯಾಪಾರಕ್ಕೆ ಬೇಕಾಗುವ ಹಣವನ್ನು ಸ್ಥಳೀಯ ಜಮೀನುದಾರರೂ, ಉತ್ತರದ ಜೈನ ಮಾರ್ವಾಡಿಗಳೂ, ಬನಿಯಾಗಳೂ, ದಕ್ಷಿಣದ ವೈಶ್ಯರೂ, ಮುಂಬಯಿ ಮತ್ತು ಗುಜರಾತಿನ ಭಟಿಯಾ ಮತ್ತು ಪಾರ್ಸಿಗಳು ಹಣವನ್ನು ಒದಗಿಸುತ್ತಿದ್ದರು. ಹೀಗೆ ಭಾರತದಲ್ಲಿ ಬ್ಯಾಂಕುಗಳು ಸ್ಥಾಪನೆಯಾಗುವ ಪೂರ್ವದಲ್ಲಿ ಸಾಹುಕಾರರ ಪ್ರಭಾವವೇ ಅಧಿಕವಾಗಿದ್ದಿತು. ಈಸ್ಟ್ ಇಂಡಿಯಾ ಕಂಪನಿ, ದಿನೇ ದಿನೇ ವೃದ್ಧಿಸುತ್ತಿರುವ ವ್ಯವಹಾರಕ್ಕೆ ಸಾಲದ ಪೂರೈಕೆ ಸಾಕಾಗಲಿಲ್ಲವಾದ್ದರಿಂದ ಇನ್ನೂ ಅನೇಕ ವಿದೇಶೀ ಬ್ಯಾಂಕುಗಳು ಕಲ್ಕತ್ತಾದಲ್ಲಿ ಪ್ರಥಮವಾಗಿ ಆರಂಭಗೊಡವು. ಅವುಗಳಿಗೆ ಹಣ ಲೇವಾದೇವಿಯದೊಂದೇ ವ್ಯಾಪಾರವಲ್ಲದೇ, ಉಡುಪುಗಳ, ದಾಸ್ತಾವೇಜುಗಳ, ಗಾಜು, ಮದ್ಯ, ಇವುಗಳ ವಹಿವಾಟನ್ನು ತೂಗಿಸಿಕೊಂಡು ಹೋಗುತ್ತಿದ್ದವು.

ರಿಜರ್ವ್ ಬ್ಯಾಂಕ್

ಭಾರತದ ಮುಖ್ಯ ಬ್ಯಾಂಕ್ ರಿಜರ್ವ್ ಬ್ಯಾಂಕ್ ಆಗಿದೆ. ಈ ಬ್ಯಾಂಕ್ ೧೯೩೫ರಲ್ಲಿ ಸ್ಥಾಪಿತವಾಯಿತು. ಇದು ಭಾರತಕ್ಕೆ ಬೇಕಾಗುವ ಕರೆನ್ಸಿ ನೋಟುಗಳನ್ನು ಒದಗಿಸುತ್ತದೆ. ಮೊದಲು ಭಾರತ ಸರ್ಕಾರವೇ ನೋಟುಗಳನ್ನೂ ನಾಣ್ಯಗಳನ್ನೂ ಮುದ್ರಿಸುತ್ತಿದ್ದಿತು. ರಿಜರ್ವ್ ಬ್ಯಾಂಕ್ ಆರಂಭವಾದಾಗ ಅದು ಷೇರುದಾರರ ಬ್ಯಾಂಕ್ ಆಗಿ ಕೆಲಸಮಾಡುತ್ತಿದ್ದಿತು. ಖಾಸಗೀ ಶೇರುದಾರರ ಬ್ಯಾಂಕ್ ಆಗಿಯೇ ಉಳಿಯಿತು. ಭಾರತವು ಸ್ವಾತಂತ್ರ್ಯವಾದ ನಂತರ ಇಂತಹ ಬ್ಯಾಂಕನ್ನು ಮುಖ್ಯವಾದ ಖಾಸಗೀ ಷೇರುದಾರರ ಆಡಳಿತದಲ್ಲಿ ಬಿಡಬಾರದೆಂದು ಸರ್ಕಾರವು ನಿರ್ಧರಿಸಿ, ಈ ಬ್ಯಾಂಕನ್ನು ರಾಷ್ಟ್ರೀಕರಣ ಮಾಡಲು ಕ್ರಮಗಳನ್ನು ಕೈಗೊಂಡಿತು. ಷೇರುದಾರ ಎಲ್ಲಾ ಷೇರುಗಳನ್ನೂ ಸರ್ಕಾರವೇ ಕೊಂಡುಕೊಂಡು ಬ್ಯಾಂಕನ್ನು ರಾಷ್ಟ್ರೀಕರಣ ಮಾಡಿಕೊಂಡಿತು.

ಭಾರತದ ರಿಜರ್ವ್ ಬ್ಯಾಂಕಿನ ಆಡಳಿತವನ್ನು ೧೫ ಜನ ಡೈರೆಕ್ಟರ್ ಇರುವ ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟರ್ ಎಂಬ ಮಂಡಳಿಯು ನಡೆಸುತ್ತದೆ.

೧. ರಿಜರ್ವ್ ಬ್ಯಾಂಕಿನ ಗೌರ್ನರ್.

೨. ಮೂರು ಜನ ಡೆಪ್ಯೂಟಿ ಗೌರ್ನರ್.

೩. ಭಾರತ ಸರ್ಕಾರದ ಹಣಕಾಸಿನ ವಿಭಾಗದಿಂದ ನಾಮಕರಣ ಮಾಡಲ್ಪಟ್ಟ ಒಬ್ಬ ಸರಕಾರೀ ಅಧಿಕಾರಿ.

೪. ದೇಶದ ಅನೇಕ ಆರ್ಥಿಕ ರಂಗಗಳನ್ನು ಪ್ರತಿನಿಧಿಸುವ ಆರು ಜನ ಡೈರೆಕ್ಟರರು ಮತ್ತು

೫. ರಿಜರ್ವ್ ಬ್ಯಾಂಕಿನ ಬೇರೆ ಬೇರೆ ಶಾಖೆಗಳ ರೀಜನಲ್ ಬೋರ್ಡ್‌ಗಳಿಂದ ನಾಮಕರಣ ಮಾಡಲ್ಪಟ್ಟ ನಾಲ್ಕು ಜನ ಡೈರೆಕ್ಟರು.

ರಿಜರ್ವ್ ಬ್ಯಾಂಕಿನ ಕಾರ್ಯಗಳು : ೧. ನೋಟು ಮುದ್ರಣದ ಗುತ್ತಿಗೆ- ಭಾರತದ ರಿಜರ್ವ್ ಬ್ಯಾಂಕ್ ಭಾರತದಲ್ಲಿ ಕರೆನ್ಸಿ ನೋಟುಗಳನ್ನು ಮುದ್ರಿಸಲು ಗುತ್ತಿಗೆ ಪಡೆದ ಏಕಮಾತ್ರ ಬ್ಯಾಂಕ್ ಆಗಿದೆ. ಅಂದರೆ ನಾಣ್ಯ ಮತ್ತು ಒಂದು ರೂಪಾಯಿಯ ನೋಟುಗಳನ್ನು ಬಿಟ್ಟು ಇತರ ಮೌಲ್ಯಗಳ ಕರೆನ್ಸಿ ನೋಟುಗಳನ್ನು ಮುದ್ರಿಸಿದೆ. ಇದಕ್ಕೆ ಪ್ರತಿಯಾಗಿ ರಿಜರ್ವ್ ಬ್ಯಾಂಕ್ ತನ್ನಲ್ಲಿರುವ ಸಾವಿರಾರು ಕೋಟಿ ರೂಪಾಯಿಗಳಷ್ಟು ಬಂಗಾರ, ಬಂಗಾರದ ಆಧಾರದ ಮೇಲೆ ನೋಟುಗಳನ್ನು ನೀಡಲಾಗುತ್ತಿದೆ.

ಭಾರತದ ರಿಜರ್ವ್ ಬ್ಯಾಂಕು ದೇಶದ ಕೇಂದ್ರೀಯ ಬ್ಯಾಂಕು. ಅದರ ಕಾರ್ಯಗಳನ್ನು ಪ್ರಾಥಮಿಕ ಕಾರ್ಯಗಳು ಮತ್ತು ಅಭಿವೃದ್ಧಿ ಕಾರ್ಯಗಳು ಎಂದು ಎರಡು ವಿಧವಾಗಿ ವಿಂಗಡಿಸಬಹುದು.

೧. ನೋಟುಗಳ ನೀಡಿಕೆ.

೨. ಸರ್ಕಾರದ ಬ್ಯಾಂಕಾಗಿ ವರ್ತಿಸುವುದು.

೩. ವಾಣಿಜ್ಯ ಬ್ಯಾಂಕುಗಳ ಸಾಲ ನೀಡಿಕೆಯ ಹತೋಟಿ.

೪. ವಾಣಿಜ್ಯ ಬ್ಯಾಂಕುಗಳಿಗೆ ಆಪತ್ತಿನಲ್ಲಿ ಸಾಲವೊದಗಿಸುವುದು.

೫. ಹಣಕಾಸು ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವುದು.

ಅಭಿವೃದ್ಧಿ ಕಾರ್ಯಗಳು

೧. ರೂಪಾಯಿಯ ಅಂತಾರಾಷ್ಟ್ರೀಯ ಮೌಲ್ಯವನ್ನು ಕಾಪಾಡಿಕೊಳ್ಳುವುದು.

೨. ಬೇಸಾಯ ಸಾಲಗಳನ್ನೊದಗಿಸುವುದು.

೩. ಹಣಕಾಸಿನ ಮತ್ತು ವಿತ್ತೀಯ ವಿಷಯ ಸಂಗ್ರಹಣೆ ಮತ್ತು ಪ್ರಕಟಣೆ.

ರಿಜರ್ವ್ ಬ್ಯಾಂಕ್ ದೇಶದ ಹಣಕಾಸಿನ ಮತ್ತು ವಿತ್ತೀಯ ಮಾಹಿತಿಗಳನ್ನು ಸಂಗ್ರಹಿಸಿ ಪ್ರಕಟಿಸುತ್ತದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಣಕಾಸಿನ ಆಗುಹೋಗುಗಳನ್ನು ವಿಶ್ಲೇಷಿಸಿ ವರದಿ ಮಾಡುತ್ತದೆ.

ರಿಜರ್ವ್ ಬ್ಯಾಂಕು ಹಣದ ಪೂರೈಕೆಯನ್ನು, ಸಾಲವನ್ನು ನಿಯಂತ್ರಿಸುತ್ತದೆ. ಈ ಮೂಲಕ ಹಣದುಬ್ಬರ ಮತ್ತು ಹಣದಿಳಿತಗಳನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತದೆ.

ರಿಜರ್ವ್ ಬ್ಯಾಂಕು ದೇಶದಲ್ಲಿ ಬೆಲೆ ಏರಿಕೆ ಹೆಚ್ಚಾದಾಗ ಸರ್ಕಾರಿ ಸಾಲಪತ್ರಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತದೆ. ಇದರಿಂದ ಹಣದ ಚಲಾವಣೆ ಕಡಿಮೆಯಾಗುತ್ತದೆ. ಬೆಲೆಗಳು ಇಳಿಯುತ್ತಿರುವಾಗ ರಿಜರ್ವ್ ಬ್ಯಾಂಕು ಸರ್ಕಾರಿ ಸಾಲಪತ್ರಗಳನ್ನು ಮುಕ್ತ ಪೇಟೆಯಲ್ಲಿ ಖರೀದಿಸುತ್ತದೆ. ಇದರಿಂದ ಚಲಾವಣೆಯಲ್ಲಿರುವ ಹಣದ ಪರಿಮಾಣ ಹೆಚ್ಚಾಗಿ ಆರ್ಥಿಕ ಸ್ಥಿತಿಯಲ್ಲಿ ಸಮತೋಲನ ಉಂಟಾಗುತ್ತದೆ.

ಎಲ್ಲಾ ಬ್ಯಾಂಕುಗಳು ತಮ್ಮ ವ್ಯವಹಾರಗಳನ್ನು ಪ್ರಾರಂಭಿಸಲು ರಿಜರ್ವ್

ಬ್ಯಾಂಕಿನಿಂದ ಅನುಮತಿ ಪಡೆಯಬೇಕು. ಹೊಸ ಹೊಸ ಶಾಖೆಗಳನ್ನು ತೆಗೆಯುವಾಗಲೂ ಸಹ ಲೈಸೆನ್ಸ್ ಪಡೆಯಬೇಕು. ರಿಜರ್ವ್ ಬ್ಯಾಂಕ್ ಲೈಸೆನ್ಸ್ ಕೊಡುವ ಮುನ್ನ ಸ್ಥಾಪಿತವಾಗಲಿರುವ ಸಂಸ್ಥೆಯ ಲೆಕ್ಕಪತ್ರಗಳನ್ನು ಪರಿಶೀಲಿಸಿ ಅವರವರ ಹಣ ಅವರವರಿಗೆ ನಿಯತವಾಗಿ ಸಲ್ಲಬೇಕಾದ ಕಾಲಕ್ಕೆ ಠೇವಣಿದಾರರ ಹಣವನ್ನು ಹಿಂತಿರುಗಿ ಕೊಡುವ ಸ್ಥಿತಿಯಲ್ಲಿ ಆ ಬ್ಯಾಂಕು ಇದೆಯೆ? ಅದರ ಕಾರ್ಯ ಕಲಾಪಗಳು ಠೇವಣಿದಾರರ ಹಿತಾಸಕ್ತಿಗೆ ಹಾನಿಯುಂಟಾಗದಂತೆ ನಡೆಯುತ್ತಿದೆಯೇ ? ಎಂಬುದನ್ನು ರಿಜರ್ವ್ ಬ್ಯಾಂಕು ಸಮರ್ಪಕವಾಗಿ ತಿಳಿದುಕೊಳ್ಳುತ್ತದೆ. ಪರದೇಶಗಳಲ್ಲಿ ಸಂಯೋಜನೆಗೊಂಡ ಬ್ಯಾಂಕುಗಳು ಇನ್ನೊಂದು ಹೆಚ್ಚಿನ ನಿರ್ಬಂಧಕ್ಕೀಡಾಗುವುವು. ಈ ವಿಷಯಗಳಲ್ಲಿ ಅಸಮರ್ಪಕತೆಯು ಕಂಡುಬಂದಲ್ಲಿ ಲೈಸೆನ್ಸ್‌ನ್ನು ರದ್ದು ಪಡಿಸಬಹುದು.

ಎಲ್ಲಾ ಬ್ಯಾಂಕುಗಳು ಹೊಸ ಶಾಖೆಯನ್ನು ತೆರೆಯಬೇಕಾದರೆ, ಇರುವ ಶಾಖಾ ಸ್ಥಳವನ್ನು ಬದಲಾಯಿಸಬೇಕಾದರೆ ರಿಜರ್ವ್ ಬ್ಯಾಂಕಿನ ಸಮ್ಮತಿ ಪಡೆಯಬೇಕು. ಆದರೆ ಈಗಾಗಲೇ ಇರುವ ಒಂದು ನಗರದಲ್ಲಿ ನಡೆಯುವ ಪ್ರದರ್ಶನ, ಸಮ್ಮೇಳನ, ಜಾತ್ರೆ, ಮೇಳ ಇವೇ ಮುಂತಾದ ಸಂದರ್ಭಗಳಲ್ಲಿ ಆ ಬ್ಯಾಂಕಿಂಗ್ ಕಂಪನಿಯು ಮತ್ತೊಂದು ಹಂಗಾಮಿ ವ್ಯವಹಾರ ಸಂದರ್ಭ ಗಳಲ್ಲಿ ಆ ಬ್ಯಾಂಕಿಂಗ್ ಕಂಪನಿಯು ಮತ್ತೊಂದು ಹಂಗಾಮಿ ವ್ಯವಹಾರ ಕ್ಷೇತ್ರವನ್ನು ಪರಮಾವಧಿ ಅಂದರೆ ಒಂದು ತಿಂಗಳ ಮಟ್ಟಿಗೆ ತೆರೆಯುವುದರ ಬಗ್ಗೆ ರಿಜರ್ವ್ ಬ್ಯಾಂಕಿನ ಸಮ್ಮತಿ ಪಡೆಯುವುದು ಅವಶ್ಯವಿಲ್ಲ.

ಅಗತ್ಯ ಕಂಡುಬಂದಾಗ ಒಂದು ಬ್ಯಾಂಕಿನ ಆಡಳಿತ ವ್ಯವಸ್ಥೆಯಲ್ಲಿ ಮಾರ್ಪಾಟು ಮಾಡುವ ಶಕ್ತಿಯೂ ರಿಜರ್ವ್ ಬ್ಯಾಂಕಿಗಿದೆ.

ರಿಜರ್ವ್ ಬ್ಯಾಂಕ್ ಹಲವು ನಿಯತಕಾಲಿಕ ಪತ್ರಿಕೆಗಳನ್ನು ಪ್ರಕಟಿಸುತ್ತದೆ. ಅವುಗಳಲ್ಲಿ ವಿವರವಾದ ಅಂಕಿ–ಅಂಶಗಳನ್ನು ಒಳಗೊಂಡ ಸಂಗತಿಗಳಿರುತ್ತವೆ. ರಿಜರ್ವ್ ಬ್ಯಾಂಕಿನ ಕಾರ್ಯಕಲಾಪದ ಎಲ್ಲಾ ಸಂಗತಿಗಳನ್ನೂ ಒಳಗೊಂಡ ವಿವರಣೆಯೂ ಸ್ಥಿತಿಗತಿಗಳ ಚಿತ್ರಣವೂ ಬ್ಯಾಂಕಿಂಗ್ ಮತ್ತು ಹಣಕಾಸಿನ ಪ್ರಪಂಚದಲ್ಲಿನ ಬೆಳವಣಿಗೆಯನ್ನು ಕುರಿತ ಸಂಗತಿಗಳೂ ಇರುವುವು. ದೇಶದಲ್ಲಿ ನಡೆಯುವ ಆರ್ಥಿಕ ಮತ್ತು ಹಣಕಾಸಿನ ಪ್ರಪಂಚದಲ್ಲಿನ ಬೆಳವಣಿಗೆಯನ್ನು ಕುರಿತ ಸಂಗತಿಗಳಿರುವುದು. ವಾರ್ಷಿಕ ವರದಿಗಳು, ಪ್ರಗತಿ, ಭಾರತದಲ್ಲಿ ಸಹಕಾರ ಚಳುವಳಿಯ ಸಮೀಕ್ಷೆ, ಹಲವಾರು ಅಂಕಿ–ಅಂಶಗಳ ಸಂಗ್ರಹಾಲಯಗಳು.

ಗ್ರಾಮಾಂತರ ಸಾಲಗಳು ಸಹಕಾರ, ವಿದೇಶೀ ವಿನಿಮಯ,

ಮುಂತಾದವುಗಳ ಸ್ಥಿತಿ, ಅವುಗಳ ಸಮಸ್ಯೆ ಕುರಿತು ಬ್ಯಾಂಕು ನಡೆಸುವ ಸಂಶೋಧನೆಗಳನ್ನು ಪ್ರಕಟಿಸುವುದು.

ದೇಶದ ಹಣಕಾಸಿನ ಮತ್ತು ಬ್ಯಾಂಕಿಂಗ್ ವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸರಕಾರಕ್ಕೆ ಅಗತ್ಯವಾದ ಅಂಕಿ-ಅಂಶಗಳನ್ನು ಒದಗಿಸುವುದು, ಮತ್ತು ಸೂಕ್ತ ಸಲಹೆ ಸೂಚನೆಗಳನ್ನು ಕೊಡುವುದು, ಈ ವಿಷಯಕ್ಕೆ ಸಂಬಂಧಿಸಿದ ಸಾಪ್ತಾಹಿಕ, ಮಾಸಿಕ, ಮತ್ತು ವಾರ್ಷಿಕ ವರದಿಗಳನ್ನು ಅದು ಪ್ರಕಟಿಸುತ್ತದೆ. ಅಲ್ಲದೇ ಕೃಷಿ ಸಾಲ ಇಲಾಖೆ, ವಿದೇಶೀ ವಿನಿಮಯ ಇಲಾಖೆ, ವಿನಿಮಯ ನಿಯಂತ್ರಣ ಇಲಾಖೆ, ಬ್ಯಾಂಕಿಂಗ್ ವ್ಯವಹಾರಗಳ ಇಲಾಖೆ, ಇವೇ ಮೊದಲಾದ ವಿವಿಧ ಇಲಾಖೆಗಳ ಮೂಲಕ ಅವುಗಳಿಗೆ ಸಂಬಂಧಿಸಿದ ವೈಜ್ಞಾನಿಕ ಅಧ್ಯಯನವನ್ನು ನಡೆಸುತ್ತದೆ. ಸಂದಾಯ ಸಲಹೆಗಳ ಸಮಿತಿ, ಬೆಲೆಗಳ ಏರಿಳಿತ, ಉತ್ಪಾದನಾ ಪ್ರವೃತ್ತಿಗಳ ಸಹಕಾರೀ ಸಂಘಗಳು ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ತಯಾರಿಸಿ ಪತ್ರಿಕೆಗಳಲ್ಲಿ ಇಲ್ಲವೆ ವಿಶೇಷ ವರದಿಗಳಲ್ಲಿ ಪ್ರಕಟಿಸುತ್ತವೆ. ಈ ಅಂಕಿ-ಅಂಶಗಳು ಸರಕಾರದ ನೀತಿ ನಿರೂಪಣೆ ಮಾಡುವವರಿಗೆ, ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ ತುಂಬಾ ಸಹಾಯಕವಾಗುವುವು. ೧೯೬೯ರ ಕಾಯಿದೆಯ ಪ್ರಕಾರ ಬ್ಯಾಂಕುಗಳ ನಿಯಂತ್ರಣ ಪೂರ್ಣ ರಿಜರ್ವ್ ಬ್ಯಾಂಕ್ ಉಳಿದ ಬ್ಯಾಂಕುಗಳ ಸಿಬ್ಬಂದಿ ಯವರಿಗೆ ತರಬೇತಿ ಸೌಲಭ್ಯವನ್ನೊದಗಿಸಲು ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಿದೆ.

ರಿಜರ್ವ್ ಬ್ಯಾಂಕಿನ ಹಣಕಾಸಿನ ನೀತಿ

ಕೇಂದ್ರ ಬ್ಯಾಂಕುಗಳ ಹಣಕಾಸಿನ ನೀತಿಯ ಉದ್ದೇಶಗಳು ಕಾಲ ಮತ್ತು ಪರಿಸ್ಥಿತಿಗಳಿಗೆ ಅನುಸರಿಸಿ ಬದಲಾಗುತ್ತಾ ಬಂದಿದೆ. ಆಂತರಿಕ ಬೆಲೆಯ ಸ್ಥಿರತೆಯನ್ನು ಮತ್ತು ಹಣದ ಬಾಹ್ಯ ವಿನಿಮಯ ಮೌಲ್ಯದ ಸ್ಥಿರತೆಯನ್ನು ಕಾಪಾಡುವುದೇ ಮುಖ್ಯ ಉದ್ದೇಶವೆಂಬುದು ಹಿಂದಿನ ಅರ್ಥಶಾಸ್ತ್ರಜ್ಞರ ಅಭಿಮತವಾಗಿದ್ದಿತು. ಆದರೆ ಈಗ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದಕ್ಕಾಗಿ ಹಣಕಾಸನ ನೀತಿ ಗರಿಷ್ಠ ಮಟ್ಟದ ಬಂಡವಾಳ ಹೂಡಿಕೆಗೆ ಸಹಾಯಕವಾಗಿರಬೇಕೆಂಬುದೇ ಇತ್ತೀಚಿನ ಅಭಿಪ್ರಾಯವಾಗಿದೆ. ಅಂದರೆ ಸಾಧನ ಸಂಪತ್ತುಗಳನ್ನು ಯೋಜಿತ ಬಂಡವಾಳ ಹೂಡಿಕೆಯ ಕ್ರಮಗಳಲ್ಲಿ ತೊಡಗಿಸಿ ಅಭಿವೃದ್ಧಿ ಮತ್ತು ಸ್ಥಿರತೆಗಳನ್ನು ಸಾಧಿಸುವುದಕ್ಕೆ ಹಣಕಾಸಿನ ನೀತಿಯು

ಅನುಕೂಲವಾಗಿರಬೇಕು. ಆರ್ಥಿಕಾಭಿವೃದ್ಧಿಗೆ ಪ್ರೋತ್ಸಾಹವೀಯಲು ಮತ್ತು ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆಯ ಅಗತ್ಯಗಳಿಗನುಸಾರವಾಗಿ ಹಣದ ಸರಬರಾಜಿನ ವಿಸ್ತರಣಾ ಕಾರ್ಯವನ್ನು ಇದು ಕೈಗೊಳ್ಳುತ್ತದೆ. ಈ ಕ್ರಮದಿಂದ ಹಣದುಬ್ಬರ ಮತ್ತು ಬೆಲೆಗಳ ಏರಿಕೆ ಸಂಭವಿಸುವುದುಂಟು. ಒಂದೇ ಸಮನಾದ ಬೆಲೆಗಳ ಏರಿಕೆ, ಉಳಿತಾಯಗಳು ಮತ್ತು ಉತ್ಪಾದನಾ ಕಾರ್ಯಗಳಲ್ಲಿ ತೊಡಗಿಸುವ ಬಂಡವಾಳ ಹೂಡಿಕೆಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ. ಅಲ್ಲದೇ ಈ ಸ್ಥಿತಿ ಹಾಗೆಯೇ ಮುಂದುವರಿದರೆ ಅಭಿವೃದ್ಧಿಯ ಕಾರ್ಯಗತಿಯ ಸ್ವರೂಪವೇ ಬದಲಾಗಬಹುದು ಹಾಗೂ ಆರ್ಥಿಕ ಪ್ರಗತಿಯೂ ಕುಂಠಿತವಾಗಬಹುದು. ಆದ್ದರಿಂದ ಬೆಲೆಗಳ ಅತಿ ಪ್ರಸರಣವನ್ನು ತಡೆಗಟ್ಟುವುದಕ್ಕಾಗಿ ರಿಜರ್ವ್ ಬ್ಯಾಂಕಿನ ಹಣಕಾಸಿನ ನೀತಿಯನ್ನು ರೂಪಿಸಲಾಗುತ್ತದೆ. ಹೀಗಾಗಿ ಹಿಡಿತವಾದ ಸಾಲದ ನೀತಿಯನ್ನು ಪಂಚವಾರ್ಷಿಕ ಯೋಜನೆಗಳ ಆರಂಭದ ಕಾಲದಿಂದ ಅನುಸರಿಸಲಾಗುತ್ತದೆ.

ರಿಜರ್ವ್ ಬ್ಯಾಂಕಿನ ಹಣಕಾಸಿನ ನೀತಿಯ ಸಾಲ ವಿಸ್ತರಣೆ ಗುರಿಯನ್ನು ತೃಪ್ತಿಕರವಾಗಿ ಸಾಧಿಸಲಾಗಿದೆ. ಅಂದರೆ ದೇಶದ ಬೆಳವಣಿಗೆಗೆ ಅಗತ್ಯವಾದ ಸಾಲವನ್ನು ಒದಗಿಸುವಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದೆ. ಕೃಷಿ, ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳು, ಸಹಕಾರ ಸಂಘ, ಮೊದಲಾದ ಕ್ಷೇತ್ರಗಳಿಗೆ ಹಣದ ಸೌಲಭ್ಯಗಳನ್ನೊದಗಿಸುವದಕ್ಕಾಗಿ ವಿವಿಧ ಸಂಸ್ಥೆಗಳನ್ನು ರಿಜರ್ವ್ ಬ್ಯಾಂಕ್ ಸ್ಥಾಪಿಸಿದೆ. ಸರಕಾರದ ಸಾಲಪತ್ರಗಳಿಗೆ ಬೆಂಬಲ ಕೊಟ್ಟು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ವಿಸ್ತರಣೆಗೆ ಅನುವು ಮಾಡಿಕೊಟ್ಟಿದೆ.

ಭಾರತದ ರಿಜರ್ವ್ ಬ್ಯಾಂಕು ಕೇಂದ್ರ ಬ್ಯಾಂಕಿನ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಅನೇಕ ಸಾಮಾನ್ಯ ಬ್ಯಾಂಕಿಂಗ್ ಕಾರ್ಯಗಳನ್ನು ನಿರ್ವಹಿಸುತ್ತದೆ. ಅಲ್ಲದೆ ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ಸುರಕ್ಷಿತತೆಯನ್ನು ಕಾಪಾಡುವ ಗುರುತರ ಹೊಣೆಯನ್ನು ರಿಜರ್ವ್ ಬ್ಯಾಂಕ್ ಹೊತ್ತುಕೊಂಡಿದೆ. ಒಟ್ಟಿನಲ್ಲಿ ರಿಜರ್ವ್ ಬ್ಯಾಂಕ್ ದೇಶದಲ್ಲಿ ಸಮಗ್ರ ಆರ್ಥಿಕ ವ್ಯವಸ್ಥೆಯ ಪ್ರಗತಿಗೆ ಸರಕಾರಗಳೊಂದಿಗೆ ಹೆಗಲಿಗೆ ಹೆಗಲು ಹಚ್ಚಿ ಶ್ರಮಿಸುತ್ತಿದೆ.

ರಿಜರ್ವ್ ಬ್ಯಾಂಕು ನಮ್ಮ ದೇಶದ ಆರ್ಥಿಕ ಪ್ರಗತಿಗೆ ಅನೇಕ ವಿಧವಾಗಿ ಸೇವೆಗಳನ್ನು ಸಲ್ಲಿಸುತ್ತಿದೆ. ಮುಖ್ಯವಾಗಿ ಸಾರ್ವತ್ರಿಕ ಬೆಲೆಗಳ ಸ್ಥಿರತೆಯನ್ನು ಕಾಪಾಡಿಕೊಂಡು ಬರುವುದರಲ್ಲಿ ಬಹಳವಾಗಿ ಶ್ರಮಿಸುತ್ತಿದೆ. ಆದಾಗಲೂ ಇತರ

ಕಾರಣಗಳಿಂದ ಬೆಲೆಗಳು ಏರುಮುಖವನ್ನು ಹೊಂದಿದೆ. ಅಲ್ಲದೆ ನಮ್ಮ ದೇಶದ ಇಡೀ ಸರಕಾರೀ ವಲಯದ ಬ್ಯಾಂಕುಗಳು ಇಂದು ನಮ್ಮ ಕೃಷಿ, ಕೈಗಾರಿಕೆ, ಸಾಗಣೆ ಮತ್ತು ವ್ಯಾಪಾರೋದ್ಯಮಗಳಿಗೆಲ್ಲಾ ಅವಶ್ಯಕವಾಗಿ ಬೇಕಾಗುವ ಸಾಲವನ್ನು ಒದಗಿಸುತ್ತದೆ. ಹೀಗೆ ನಮ್ಮ ದೇಶದ ಪ್ರಧಾನ ಬ್ಯಾಂಕು ವಿವಿಧ ರೀತಿಯಲ್ಲಿ ದೇಶದ ಆರ್ಥಿಕಾಭಿವೃದ್ಧಿಗೆ ಸಹಾಯಮಾಡುತ್ತಿದೆ. ಸರ್ವತೋಮುಖವಾದ ಆರ್ಥಿಕಾಭಿವೃದ್ಧಿಗೆ ಕೇಂದ್ರ ಬ್ಯಾಂಕಿನ ಸಹಾಯವು ಅತ್ಯಾವಶ್ಯಕವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ವಿದೇಶೀ ವಿನಿಮಯ ಬ್ಯಾಂಕುಗಳು

ಭಾರತದ ವಿದೇಶೀ ವಾಣಿಜ್ಯ ವ್ಯಾಪಾರಗಳಲ್ಲಿ ವಿದೇಶೀ ವಿನಿಮಯ ಬ್ಯಾಂಕುಗಳ ಪಾತ್ರವು ಬಹುಮುಖ್ಯವಾಗಿದೆ. ಈ ಬ್ಯಾಂಕುಗಳು ನಮ್ಮ ವಿದೇಶೀ ವ್ಯಾಪಾರಕ್ಕೆ ಅಗತ್ಯವಾದ ವಿದೇಶೀ ವಿನಿಮಯ ಹಣವನ್ನು ಒದಗಿಸುತ್ತವೆ. ಈ ಬ್ಯಾಂಕುಗಳು ಹೆಚ್ಚಾಗಿ ಈ ಕಾರ್ಯವನ್ನೇ ಮಾಡುವುದರಿಂದ, ಅವುಗಳನ್ನು ವಿದೇಶೀ ವಿನಿಮಯ ಬ್ಯಾಂಕುಗಳೆಂದು ಕರೆಯುವ ವಾಡಿಕೆಯಿದೆ.

ನಮ್ಮ ದೇಶದಲ್ಲಿ ಇಂತಹ ಬ್ಯಾಂಕುಗಳು ೨೦ ಇವೆ. ಈ ಬ್ಯಾಂಕುಗಳ ಮೂಲ ಬಂಡವಾಳವು ವಿದೇಶೀಯರಿಂದಲೇ ತೊಡಗಿಸಲ್ಪಟ್ಟಿರುತ್ತವೆ ಯಾದುದರಿಂದ ಅವುಗಳ ಮೇಲಿನ ನಿಯಂತ್ರಣ ಮತ್ತು ಕಾರ್ಯ ನಿರ್ವಹಣೆ ಕೂಡ ಹೆಚ್ಚಾಗಿ ವಿದೇಶೀ ಆಡಳಿತಗಾರರ ಕೈಯಲ್ಲಿಯೇ ಇರುತ್ತದೆ. ಭಾರತೀಯ ಅಧಿಕಾರಿಗಳ ಸಂಖ್ಯೆ ಅವುಗಳಲ್ಲಿ ಬಹಳ ಕಡಿಮೆ. ಈ ಕಾರಣದಿಂದ ಈ ಬ್ಯಾಂಕುಗಳು ನಮ್ಮ ದೇಶದ ವಿದೇಶೀ ವ್ಯಾಪಾರದಲ್ಲಿ ಬಹುಮಟ್ಟಿಗೆ ಏಕಸ್ವಾಮ್ಯವನ್ನು ಪಡೆದಿದೆಯೆಂದೇ ಹೇಳಬಹುದು. ವಿದೇಶೀ ವಿನಿಮಯ ವ್ಯಾಪಾರವನ್ನು ನಡೆಸಲು ಅತಿ ಬೃಹತ್ ಪ್ರಮಾಣದ ಬಂಡವಾಳ, ವಿದೇಶಗಳಲ್ಲಿ ಹಣಕಾಸಿನ ಲೇವಾದೇವಿ ನಡೆಸಲು ಸಾಕಷ್ಟು ವಿದೇಶೀ ವಿನಿಮಯದ ನಿಧಿ; ವಿದೇಶೀ ಬ್ಯಾಂಕರುಗಳೊಡನೆ ನಿಕಟವಾದ ಸಂಪರ್ಕ ಮತ್ತು ಇತರ ಅನುಕೂಲಗಳಿರಬೇಕು. ಇದರ ಜೊತೆಗೆ ಸಾಕಷ್ಟು ನುರಿತ ತಜ್ಞರ ಸಹಾಯವೂ ಬೇಕು. ಇವುಗಳೆಲ್ಲವನ್ನು ಒದಗಿಸಲು ಭಾರತೀಯ ಕೂಡು ಬಂಡವಾಳ ಬ್ಯಾಂಕುಗಳಿಗೆ ಸಾಧ್ಯವಾಗುತ್ತಿಲ್ಲವಾದ ಕಾರಣ, ನಾವು ವಿದೇಶೀ ವಿನಿಮಯ ಬ್ಯಾಂಕುಗಳ ಮೇಲೆ ಅವಲಂಬಿತವಾಗಬೇಕಾಗಿದೆ. ಈಗ ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿರುವ ಪ್ರಮುಖ ವಿದೇಶೀ ವಿನಿಮಯ ಬ್ಯಾಂಕುಗಳು ಯಾವುವೆಂದರೆ ಲಾಯಿಡ್ಸ್ ಬ್ಯಾಂಕ್, ಗ್ರಿಂಡ್ಲೇಸ್, ಈಸ್ಟರ್ನ್

ಬ್ಯಾಂಕ್, ಸಿಟಿ ಬ್ಯಾಂಕ್ ಆಫ್ ಇಂಡಿಯಾ, ಆಸ್ಟ್ರೇಲಿಯ, ಚೈನಾ, ಜಪಾನ್, ಅಮೆರಿಕಾ ಬ್ಯಾಂಕ್, ಓವರ್‌ಸೀಸ್ ಬ್ಯಾಂಕು ಮುಂತಾದವುಗಳು. ಇವು ಹೆಚ್ಚಾಗಿ ನಮ್ಮ ದೇಶದ ಮುಖ್ಯ ಬಂದರುಗಳಿಂದ ಕೂಡಿದ ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟಿದ್ದರೂ ಅದರ ಶಾಖೆಗಳು ಎಲ್ಲಾ ಕಡೆಗಳಲ್ಲೂ ಇವೆ.

ವಿದೇಶೀ ವಿನಿಮಯ ಬ್ಯಾಂಕುಗಳ ಸ್ಥಾಪನೆಯು ಆಯಾ ರಾಷ್ಟ್ರದ ಆರ್ಥಿಕ ಘನತೆಯನ್ನು ಹೆಚ್ಚಿಸುತ್ತದೆ.

ವಿದೇಶೀ ವಿನಿಮಯ ಬ್ಯಾಂಕುಗಳ ಕಾರ್ಯಗಳು

ನಮ್ಮ ದೇಶದ ಆಮದು-ರಫ್ತು ವ್ಯಾಪಾರಕ್ಕೆ ಬೇಕಾದ ಹಣವನ್ನು ಒದಗಿಸುವುದು. ಇದಕ್ಕಾಗಿ ಈ ಬ್ಯಾಂಕುಗಳು ವಿದೇಶೀ ಬಿಲ್ಲುಗಳನ್ನು ಖರೀದಿಸಿ ಮಾರಾಟ ಮಾಡುತ್ತದೆ. ಈ ಬಿಲ್ಲುಗಳಲ್ಲಿ ಡಿ.ಎ. ಬಿಲ್ಲುಗಳು ಮತ್ತು ಡಿ.ಪಿ. ಬಿಲ್ಲುಗಳೆಂದು ಎರಡು ವಿಧವಾಗಿದೆ. ಇದನ್ನು ಒಂದು ಉದಾಹರಣೆಯಿಂದ ವಿವರಿಸೋಣ. ಒಬ್ಬ ಭಾರತೀಯ ರಫ್ತು ವ್ಯಾಪಾರಿಯು ತನ್ನ ವಸ್ತುವನ್ನು ಇಂಗ್ಲೆಂಡು ದೇಶದವನಿಗೆ ಕಳುಹಿಸಲು ಒಪ್ಪಂದ ಮಾಡಿಕೊಂಡಿರುತ್ತಾನೆ. ಈ ವಸ್ತುವಿನ ಮೌಲ್ಯ ರೂ.೫೦೦೦/- ಎಂದು ಭಾವಿಸೋಣ. ಭಾರತೀಯ ವ್ಯಾಪಾರಿಯು ಇಂಗ್ಲೆಂಡಿನಲ್ಲಿರುವ ಗ್ರಾಹಕನಿಂದ ಅಲ್ಲಿಯ ಒಂದು ಬ್ಯಾಂಕಿನ ಜಾಮೀನು ಪತ್ರವನ್ನು (Letter of Credit) ಬೇಡುತ್ತಾನೆ. ಇಂಗ್ಲಿಷ್ ಬ್ಯಾಂಕರನು ಆ ಗ್ರಾಹಕನ ಪರವಾಗಿ ಅದನ್ನು ಕಳುಹಿಸುತ್ತಾನೆ. ಈ ಆಧಾರದ ಮೇಲೆ ಭಾರತೀಯ ವ್ಯಾಪಾರಿಯು ತನ್ನ ವಸ್ತುವಿನ ಬೆಲೆಗೆ ಸರಿಹೋಗುವಂತೆ ಒಂದು ಬಿಲ್ಲನ್ನು ಬರೆದು ಅದರ ಜೊತೆಗೆ ಇತರ ಕೆಲವು ಪತ್ರಗಳನ್ನು ಜೋಡಿಸಿ ವಿನಿಮಯ ಬ್ಯಾಂಕಿನ ಮೂಲಕ ಇಂಗ್ಲಿಷ್ ಗ್ರಾಹಕನಿಗೆ ಕಳುಹಿಸುತ್ತಾನೆ. ಇದೇ ಕಾಲದಲ್ಲಿ ಸರಕನ್ನೂ ಹಡಗಿನ ಮೂಲಕ ರಫ್ತು ಮಾಡುತ್ತಾನೆ. ಈ ಮೇಲಿನ ಬಿಲ್ಲು ಇಂಗ್ಲಿಷ್ ಬ್ಯಾಂಕಿನ ಮೂಲಕ ಅಲ್ಲಿಗೆ ತಲುಪಿದ ಕೂಡಲೇ ಆ ಬ್ಯಾಂಕು ಆ ಬಿಲ್ಲನ್ನು ಗ್ರಾಹಕನಿಗೆ ಕೊಟ್ಟು ಅದರಲ್ಲಿ ನಮೂದಿಸಿರುವ ಹಣವನ್ನು ೯೦ ದಿನಗಳೊಳಗಾಗಿ ಕೊಡುವುದಾಗಿ ಒಪ್ಪಿಗೆಯನ್ನು ಬರೆಸಿಕೊಳ್ಳುತ್ತದೆ. ಹಾಗೆ ಒಪ್ಪಿಗೆಯನ್ನಿತ್ತೊಡನೆಯೇ ಹಡಗಿನಿಂದ ಬಂದ ಸಾಮಾನನ್ನು ಬಿಡಿಸಿಕೊಳ್ಳಲು ಬೇಕಾದ ಪತ್ರಗಳನ್ನೆಲ್ಲಾ ಗ್ರಾಹಕನಿಗೆ ಕೊಟ್ಟುಬಿಡುತ್ತದೆ. ಈ ಬಿಲ್ಲನ್ನು ಡಿ.ಎ. ಬಿಲ್ಲುಗಳೆಂದು ಕರೆಯುತ್ತಾರೆ. ಅಂದರೆ Documents against payment ಈ ಬಿಲ್ಲನ್ನು ಲಂಡನ್ ಹಣದ ಪೇಟೆಯಲ್ಲಿ ಬೇಕಾದರೆ ವಟಾವ್ ಮಾಡಬಹುದು.

ಇದರಿಂದ ಭಾರತೀಯ ರಫ್ತುಗಾರನಿಗೆ ತನ್ನ ಹಣ ವಸೂಲಾಗಲು ಸ್ವಲ್ಪ ಕಾಲ ಕಾದಿರಬೇಕಾಗುತ್ತದೆ.

ಆದರೆ ಒಟ್ಟು ಭಾರತೀಯನು ವಿದೇಶೀಯನಿಂದ ಯಾವುದಾದರೂ ವಸ್ತುವನ್ನು ಕೊಂಡಾಗ ಅವನು ಕೂಡಲೇ ಅದರ ಹಣವನ್ನು ವಿದೇಶೀ ವಿನಿಮಯ ಬ್ಯಾಂಕಿನಲ್ಲಿ ಜಮಾಮಾಡಿ ನಂತರ ಅದಕ್ಕೆ ಸಂಬಂಧಿಸಿದ ಹಕ್ಕು ಪತ್ರಗಳನ್ನು ತೆಗೆದುಕೊಂಡು ಸಾಮಾನನ್ನು ಹಡಗಿನಿಂದ ಬಿಡಿಸಿಕೊಳ್ಳಬೇಕಾಗುತ್ತದೆ. ಇಂತಹ ಬಿಲ್ಲುಗಳನ್ನು ಡಿ.ಪಿ. Documents for payment ಬಿಲ್ಲುಗಳೆನ್ನುತ್ತಾರೆ. ಇದರಿಂದ ಹಣದ ವಸೂಲಿಯು ಭಾರತೀಯ ಆಮದುಗಾರನಿಂದ ತಕ್ಷಣವೇ ಆಗಿ ಅದನ್ನು ವಿದೇಶಿಯ ರಫ್ತುಗಾರನಿಗೆ ವಿನಿಮಯ ಬ್ಯಾಂಕು ತಲಪಿಸುತ್ತದೆ.

ಈ ವಿಧವಾದ ವ್ಯಾಪಾರದಿಂದಲೇ ನಮ್ಮ ವಿದೇಶೀ ವ್ಯಾಪಾರ ನಡೆಯುತ್ತದೆ. ಈ ಬ್ಯಾಂಕುಗಳು ವಿದೇಶೀ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಕಾರ್ಯಕಲಾಪಗಳನ್ನು ನಡೆಸುತ್ತವೆ. ಇದರಿಂದ ಕೆಲವು ಸಂದರ್ಭಗಳಲ್ಲಿ ಭಾರತೀಯ ವ್ಯಾಪಾರಿಗಳಿಗೆ ಬಹಳ ನಷ್ಟವಾಗುವುದೂ ಉಂಟು.

ವಿದೇಶೀ ವಿನಿಮಯ ಬ್ಯಾಂಕುಗಳು ಇತರ ವಾಣಿಜ್ಯ ಬ್ಯಾಂಕುಗಳು ಮಾಡುವ ಎಲ್ಲಾ ಕಾರ್ಯಗಳನ್ನೂ ಮಾಡುತ್ತದೆ. - ಅಂದರೆ ಸಾರ್ವಜನಿಕರಿಂದ ಠೇವಣಿಗೆಗಳನ್ನು ತೆಗೆದುಕೊಳ್ಳುವುದು, ಹುಂಡಿಯನ್ನು ಮುರಿದು ಸಾಲನೀಡುವುದು, ಇವೇ ಮುಂತಾದವುಗಳು. ಇದರಿಂದ ಒಳದೇಶದ ವಾಣಿಜ್ಯ ವ್ಯಾಪಾರಕ್ಕೂ ಹಣಕಾಸಿನ ಸೌಲಭ್ಯವು ಸಿಗುತ್ತದೆ.

ಈ ಬ್ಯಾಂಕುಗಳು ಉತ್ಪಾದನಾ ಕೇಂದ್ರಗಳಲ್ಲಿ ತಯಾರಾದ ವಸ್ತುಗಳನ್ನು ರೇವುಗಳಿಗೆ ಸಾಗಿಸಲು ಮತ್ತು ವಿದೇಶಗಳಿಂದ ಆಮದಾದ ವಸ್ತುಗಳನ್ನು ಬಂದರುಗಳಿಂದ ಒಳದೇಶದ ಪಟ್ಟಣದ ಮಾರುಕಟ್ಟೆಗಳಿಗೆ ಸಾಗಣೆ ಮಾಡಲು ಬೇಕಾಗುವ ಹಣಕಾಸನ್ನು ಸಾಲವಾಗಿ ಕೊಡುತ್ತವೆ.

ಈ ಬ್ಯಾಂಕುಗಳು ವಿದೇಶೀ ವಿನಿಮಯ ಹಣದ ವ್ಯಾಪಾರ ಮಾಡಲು ನಮ್ಮ ರಿಜರ್ವ್ ಬ್ಯಾಂಕಿನ ಅಧಿಕೃತ (Authorised) ಪ್ರತಿನಿಧಿಗಳೆಂದು ಪರಿಗಣಿಸಲ್ಪಟ್ಟಿರು ವುದರಿಂದ ವಿದೇಶೀ ವಿನಿಮಯ ಬೇಕಾದವರೆಲ್ಲರೂ ಈ ಬ್ಯಾಂಕುಗಳ ಮೂಲಕ ವ್ಯವಹರಿಸಬೇಕಾಗುತ್ತದೆ. ಈ ಕಾರ್ಯವನ್ನು ನಡೆಸಲು ಈ ಬ್ಯಾಂಕುಗಳು ರಿಜರ್ವ್ ಬ್ಯಾಂಕ್‌ನಿಂದ ಅನುಮತಿ (Licence) ಪಡೆದಿರುತ್ತವೆ.

೧. ಈ ಬ್ಯಾಂಕುಗಳು ಭಾರತೀಯ ವಾಣಿಜ್ಯ ಬ್ಯಾಂಕುಗಳು ಮಾಡುವ ಕಾರ್ಯಗಳನ್ನೆಲ್ಲಾ ಮಾಡುತ್ತಾ ಅವುಗಳಿಗೆ ತೀವ್ರವಾದ ಪೈಪೋಟಿಯನ್ನುಂಟು ಮಾಡಿ ಅವುಗಳಿಗೆ ಲಭಿಸಬೇಕಾದ ಲಾಭವನ್ನು ತಾವೇ ಗಳಿಸುತ್ತಿದೆ. ನಮ್ಮ ದೇಶೀ ಜನರ ಠೇವಣಿಗಳನ್ನು ತೆಗೆದುಕೊಂಡು ಅದನ್ನು ವಿದೇಶೀಯರ ವ್ಯಾಪಾರಕ್ಕಾಗಿ ಹೂಡಿ, ಲಾಭವನ್ನು ಗಳಿಸುವುದು ಅನ್ಯಾಯ.

೨. ಈ ಬ್ಯಾಂಕುಗಳು ತಮ್ಮ ಮೇಲೆ ವಿವರಿಸಿದ ಡಿ.ಎ. ಮತ್ತು ಡಿ.ಪಿ. ಬಿಲ್ಲುಗಳಿಂದ ಹಣವನ್ನು ವಿದೇಶೀಯರಿಗೆ ಉಪಯೋಗವಾಗುವಂತೆ ಮಾಡಿ, ಭಾರತೀಯ ವ್ಯಾಪಾರಿಗಳನ್ನು ಅಲಕ್ಷತೆಯಿಂದ ಕಾಣುತ್ತಿವೆ. ಭಾರತೀಯ ವ್ಯಾಪಾರಸ್ಥನು ತನ್ನ ಹಣಕ್ಕಾಗಿ ೯೦ ದಿನಗಳು ಕಾಯಬೇಕು. ಆದರೆ ವಿದೇಶೀ ವ್ಯಾಪಾರಸ್ಥನಿಗೆ ತಕ್ಷಣವೇ ಹಣವನ್ನು ಭಾರತೀಯನಿಂದ ಈ ಬ್ಯಾಂಕುಗಳು ವಸೂಲಿಮಾಡಿಕೊಡುತ್ತವೆ. ಭಾರತೀಯ ವ್ಯಾಪಾರಸ್ಥರಿಗೆ ಇದರಿಂದ ಬಹಳ ಹಾನಿಯಾಗುತ್ತದೆ.,

೩. ಈ ಬ್ಯಾಂಕುಗಳಲ್ಲಿ ಭಾರತೀಯರಿಗೆ ಬಾಧ್ಯತೆಯಿಂದ ಕೂಡಿದ ನೌಕರಿಗಳನ್ನು ಕೊಡುತ್ತಿಲ್ಲ. ಮತ್ತು ವಿದೇಶೀ ವಿನಿಮಯ ಕೆಲಸಕಾರ್ಯಗಳಲ್ಲಿ ಭಾರತೀಯರಿಗೆ ಶಿಕ್ಷಣ ಮತ್ತು ತರಬೇತಿಯನ್ನು ಸಹ ಕೊಡಲು ಈ ಬ್ಯಾಂಕುಗಳು ಹಿಂಜರಿಯುತ್ತವೆ.

ಪರಿಹಾರಗಳು :

ನಮ್ಮ ದೇಶದ ರಿಜರ್ವ್ ಬ್ಯಾಂಕಿನ ಪ್ರೇರೇಪಣೆ ಮತ್ತು ಉತ್ತೇಜನದಿಂದ, ಇತ್ತೀಚೆಗೆ ಕೆಲವು ಭಾರತೀಯ ಬ್ಯಾಂಕುಗಳೂ ಕೂಡ ವಿದೇಶೀ ವಿನಿಮಯ ಕಾರ್ಯಗಳನ್ನು ನಡೆಸಲು ಮುಂದೆ ಬರುತ್ತಿದೆ. ಇದಕ್ಕೆ ಬೇಕಾದ ಸೌಕರ್ಯಗಳನ್ನು ಸರ್ಕಾರವು ಒದಗಿಸುತ್ತಿದೆ.

ಇದರ ಜೊತೆಗೆ ರಿಜರ್ವ್ ಬ್ಯಾಂಕು ೧೯೪೯ರಲ್ಲಿ ಬ್ಯಾಂಕಿಂಗ್ ಕಂಪನಿಗಳ ಒಂದು ಕಾನೂನನ್ನು ಜಾರಿಗೆ ತಂದಿತು. ಅಂದಿನಿಂದ 'ವಿದೇಶೀ ವಿನಿಮಯ' ಬ್ಯಾಂಕುಗಳೂ ಕೂಡ ನಮ್ಮ ದೇಶದ ಇತರ ವಾಣಿಜ್ಯ ಬ್ಯಾಂಕುಗಳಂತೆಯೇ ತಮ್ಮ ವ್ಯವಸ್ಥೆಯನ್ನು ಕೇಂದ್ರ ಬ್ಯಾಂಕಿನ ಮೇಲ್ವಿಚಾರಣೆ ಮತ್ತು ಪರಿಶೀಲನೆಗೆ ಒಳಪಡಿಸಿವೆ. ಇದೂ ಅಲ್ಲದೆ ಭಾರತ ದೇಶದಲ್ಲಿ ಸ್ವೀಕರಿಸಿದ ಸಾರ್ವಜನಿಕ ಠೇವಣಿಗಳಲ್ಲಿ ಸ್ವಲ್ಪ ಭಾಗವನ್ನು ಪ್ರತ್ಯೇಕವಾಗಿ ಭಾರತೀಯ ವಿದೇಶೀ ವ್ಯಾಪರಕ್ಕಾಗಿಯೇ ಮೀಸಲಾಗಿಡಬೇಕೆಂಬ ನಿಬಂಧನೆಯನ್ನು

ಮಾಡಲಾಯಿತು. ಈ ಬ್ಯಾಂಕುಗಳ ಉನ್ನತ ಹುದ್ದೆಗಳಲ್ಲಿ ಕೆಲವನ್ನು ಭಾರತೀಯ ಅಧಿಕಾರಿಗಳಿಗೆ ಕೊಡಬೇಕೆಂದೂ ಮತ್ತು ಅವರಿಗೆ ಸರಿಯಾದ ತರಬೇತನ್ನು ಕೊಡಬೇಕೆಂದೂ ವಿಧಿಸಲಾಯಿತು. ಇಷ್ಟಾದರೂ ಕೂಡ ಭಾರತೀಯ ಬ್ಯಾಂಕುಗಳು ವಿದೇಶೀ ವಿನಿಮಯ ವ್ಯಾಪಾರದಲ್ಲಿ ಸಾಕಷ್ಟು ಭಾಗವಹಿಸುತ್ತಿಲ್ಲ.

ದೇಶೀಯ ಬ್ಯಾಂಕರುಗಳು (Indigenous Bankers)

ಭಾರತದಲ್ಲಿ ಬಹಳ ಪುರಾತನ ಕಾಲದಿಂದಲೂ ಮಾರವಾಡಿಗಳು, ಮುಲ್ತಾನಿಗಳು, ಜೈನರು, ಚೆಟ್ಟಿಯಾರರು ಇತ್ಯಾದಿ ಕೆಲವೊಂದು ಸಮುದಾಯಕ್ಕೆ ಸೇರಿದ ವ್ಯಕ್ತಿಗಳು ಹಣದ ಲೇವಾದೇವಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅವರು ದೇಶೀಯ ಮಾದರಿಯಲ್ಲಿ ಸಾಂಪ್ರದಾಯಿಕವಾಗಿ ಹಣದ ವ್ಯವಹಾರವನ್ನು ನಡೆಸುತ್ತಿರುವುದರಿಂದ ಅವರನ್ನು ದೇಶೀಯ ಬ್ಯಾಂಕರುಗಳೆಂದು ಕರೆಯಲಾಗುತ್ತದೆ.

ಅವರು ನಿರ್ವಹಿಸುವ ಕೆಲಸ ಕಾರ್ಯಗಳ ಆಧಾರದಲ್ಲಿ ದೇಶೀಯ ಬ್ಯಾಂಕರು ಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ, ೧. ಬ್ಯಾಂಕಿಂಗನ್ನು ಮುಖ್ಯ ವ್ಯವಹಾರವನ್ನಾಗಿ ಮತ್ತು ವ್ಯಾಪಾರವನ್ನು ಎರಡನೆಯ ಅಥವಾ ಪೂರಕ ವ್ಯವಹಾರವನ್ನಾಗಿ ನಡೆಸುವವರು, ೨. ಬ್ಯಾಂಕಿಂಗ್ ಮತ್ತು ವ್ಯಾಪಾರಗಳೆರಡನ್ನೂ ಸಮಾನವಾಗಿ ಪರಿಗಣಿಸುವವರು, ೩. ವ್ಯಾಪಾರವನ್ನು ಮುಖ್ಯ ವ್ಯವಹಾರವನ್ನಾಗಿ ಮತ್ತು ಬ್ಯಾಂಕಿಂಗನ್ನು ಪೂರಕ ವ್ಯವಹಾರವನ್ನಾಗಿ ನಡೆಸುವವರು. ಆದರೆ ಹೆಚ್ಚಿನ ದೇಶೀಯ ಬ್ಯಾಂಕರುಗಳು ಎರಡನೆಯ ವಿಭಾಗಕ್ಕೆ ಸೇರಿದವರಾಗಿದ್ದಾರೆ.

ಅವರ ಮುಖ್ಯ ಕೆಲಸಗಳೆಂದರೆ :

೧. ಅವರು ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸುತ್ತಾರೆ. ಆದರೆ ಅವರು ಮುಖ್ಯವಾಗಿ ತಮ್ಮ ಸ್ವಂತ ಹಣದ ಮೂಲಕ ವ್ಯವಹಾರವನ್ನು ನಡೆಸುವುದರಿಂದ ಅವರು ಸಾರ್ವಜನಿಕರಿಂದ ಸ್ವೀಕರಿಸುವ ಠೇವಣಿಗಳ ಪ್ರಮಾಣ ತುಂಬಾ ನಗಣ್ಯ (ಅಷ್ಟೇನೂ ಮಹತ್ವವಲ್ಲದ)ವಾಗಿರುತ್ತದೆ.

೨. ಅವರು ಕೃಷಿಕರು, ಕುಶಲಕರ್ಮಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಸಾಲವನ್ನೊದಗಿಸುತ್ತಾರೆ. ಅವರ ಮುಂಗಡ ಚಿನ್ನಾಭರಣಗಳು, ಭೂಮಿ ಮತ್ತು ಕಟ್ಟಡಗಳು ಮತ್ತು ಸಾಲಗಾರರ ವೈಯಕ್ತಿಕ ಭದ್ರತೆಗಳ

ಆಧಾರಗಳಲ್ಲಿರುತ್ತದೆ. ಅವರು ತಮ್ಮ ಮುಂಗಡಗಳ ಮೇಲೆ ತುಂಬಾ ದುಬಾರಿಯಾದ ದರದ ಬಡ್ಡಿಯನ್ನು ವಿಧಿಸುತ್ತಾರೆ.

೩. ಅವರು ಹುಂಡಿಗಳಲ್ಲಿ ದೇಶೀಯ ವಿನಿಮಯ ಪತ್ರಗಳಲ್ಲಿ ವ್ಯವಹರಿಸುತ್ತಾರೆ,

೪. ಅವರು ಚಿನ್ನ ಬೆಳ್ಳಿ ಆಭರಣ, ಗಟ್ಟಿಗಳಲ್ಲಿಯೂ ಲೇವಾದೇವಿ ಮಾಡುತ್ತಾರೆ.

೫. ಅವರು ದೊಡ್ಡ ವಾಣಿಜ್ಯ ಉದ್ಯಮಗಳ ಖರೀದಿ ಮತ್ತು ವಿತರಣಾ ಮಧ್ಯವರ್ತಿಗಳಾಗಿ ಮಾಡುವುದಲ್ಲದೆ ಹತ್ತಿ, ಆಹಾರ ಧಾನ್ಯಗಳು ಇವುಗಳ ಚಿಲ್ಲರೆ ವ್ಯಾಪಾರದಲ್ಲಿಯೂ ತೊಡಗಿರುತ್ತಾರೆ.

ದೇಶೀಯ ಬ್ಯಾಂಕರುಗಳು ತಮ್ಮ ಮುಂಗಡ ಮೇಲೆ ದುಬಾರಿ ದರದ ಬಡ್ಡಿಯುನ್ನು ವಿಧಿಸಿದರೂ, ಅವರು ಗ್ರಾಮೀಣ ಪ್ರದೇಶಗಳಲ್ಲಿ ಜನಪ್ರಿಯರಾಗಿರುತ್ತಾರೆ. ಏಕೆಂದರೆ ಅವರು ಸುಲಭವಾಗಿ ಎಲ್ಲಾ ಸಮಯಗಳಲ್ಲೂ ಲಭ್ಯವಿದ್ದು ಎಲ್ಲಾ ವಿಧಗಳ ಭದ್ರತೆಗಳನ್ನು ಸ್ವೀಕರಿಸುತ್ತಾರೆ, ಜೊತೆಗೆ ಅವರು ಸಾಲ ನೀಡುವ ವಿಧಾನವು ಸರಳವಾಗಿದೆ. ಅಕ್ಷರ ಜ್ಞಾನ ಇರದಿದ್ದರೂ ನಡೆಯುತ್ತದೆ.

ಗ್ರಾಮಾಂತರ ಬ್ಯಾಂಕುಗಳು

ಭಾರತದಲ್ಲಿ ವ್ಯವಸಾಯವು ಪ್ರಧಾನ ಕಸುಬಾದುದರಿಂದ ಅದನ್ನು ಉತ್ತಮಗೊಳಿಸಲು ಬ್ಯಾಂಕಿನಿಂದ ಅನೇಕ ರೀತಿಯಲ್ಲಿ ನೆರವು ನೀಡಲಾಗಿದೆ.

ಕೃಷಿಯನ್ನು ಆಧುನೀಕರಣಗೊಳಿಸುವ ಯತ್ನವನ್ನು ಹಿಂಬಾಲಿಸಿ ಬಂದ ಬೇಡಿಕೆಯಲ್ಲಿ ಗುಣಮಟ್ಟದ ಬದಲಾವಣೆಯನ್ನು ಗಮನಿಸಿದಾಗ ಬ್ಯಾಂಕುಗಳ ಆರ್ಥಿಕ ನೆರವಿನ ಮಹತ್ವ ಗೋಚರವಾಗುವುದು. ನೀರಾವರಿ, ವಿದ್ಯುಚ್ಛಕ್ತಿ, ರಸಗೊಬ್ಬರ, ಉತ್ತಮ ಬೀಜಗಳನ್ನು ಒದಗಿಸಿದ ಮೇಲೆ ಬೇಸಾಯಗಾರನ ಬಳಿ ಹಣವಿಲ್ಲದಿದ್ದರಿಂದ ಈ ಉತ್ಪತ್ತಿವರ್ಧಕ ವಸ್ತುಗಳನ್ನು ಹಾಗೂ ತಾಂತ್ರಿಕತೆಯನ್ನು ಹೆಚ್ಚುವರಿ ಉತ್ಪತ್ತಿಗಾಗಿ ಉಪಯೋಗಿಸಲಾರದೆ ಆತ ಸುಮ್ಮನೆ ಕುಳಿತುಕೊಳ್ಳಬೇಕಾದ ಪ್ರಮೇಯ ದುರ್ದೈವದ ಮಾತಾಗಿದೆ. ಸದ್ಯದ ಅಗತ್ಯವೆಂದರೆ ಹೊಸ ವಿಧಾನಗಳನ್ನು ಅನುಸರಿಸುವಂತೆ ಸಣ್ಣ ಬೇಸಾಯಗಾರರ ಮನವೊಲಿಸಬೇಕಲ್ಲದೆ, ವಾಸ್ತವ ಫಲಿತಾಂಶಗಳನ್ನು ತೋರಿಸಲು ಹಣಕಾಸನ್ನು

ಆತನಿಗೆ ನೀಡಬೇಕು. ಈ ಅಗತ್ಯದ ಪೂರೈಕೆಗೆ ಹಣವೊದಗಿಸಲು ಗ್ರಾಮಾಂತರ ಬ್ಯಾಂಕುಗಳ ಜಾಲವೊಂದನ್ನು ಸ್ಥಾಪಿಸುವ ಭಾರತ ಸರ್ಕಾರದ ನಿರ್ಧಾರವು ಒಂದು ಮಹತ್ವದ ಮೈಲುಗಲ್ಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿಯ ಚಿಕ್ಕ ರೈತರ ಮತ್ತು ಇತರ ದುರ್ಬಲ ವರ್ಗಗಳ ಜನರ ಸಾಲದ ಅಗತ್ಯತೆಗಳನ್ನು ಪೂರೈಸುವುದು ಈ ಗ್ರಾಮಾಂತರ ಬ್ಯಾಂಕುಗಳ ಮುಖ್ಯ ಕಾರ್ಯವಾಗಿದೆ. ಅದಕ್ಕೆ ನಿಯಮಗಳು ಇಂತಿವೆ.

ಗ್ರಾಮಾಂತರ ಬ್ಯಾಂಕುಗಳನ್ನು ಸಾಮಾನ್ಯವಾಗಿ ಹಿಂದುಳಿದ ಪ್ರದೇಶ ಅಥವಾ ಆದಿವಾಸಿಗಳ ಕ್ಷೇತ್ರ ಅಥವಾ ವಾಣಿಜ್ಯ ಮತ್ತು ಸಹಕಾರ ಬ್ಯಾಂಕುಗಳಿಂದ ಸಾಕಷ್ಟು ಸೇವೆ ಪಡೆಯದೆ ಇರುವ ಸ್ಥಳಗಳಲ್ಲಿ ಸ್ಥಾಪಿಸಲಾಗುವುದು.

ಆ ಪ್ರದೇಶವು ಸಾಲದ ಸೌಕರ್ಯದ ಭರವಸೆ ದೊರೆತರೆ ತ್ವರಿತವಾಗಿ ಅಭಿವೃದ್ಧಿಗೊಳ್ಳುವ ಸಾಮರ್ಥ್ಯ ಹೊಂದಿರಬೇಕು.

ಚಿಕ್ಕ ಬಡ ರೈತರಿಗೆ ಸಣ್ಣ-ಪುಟ್ಟ ಕುಶಲ ಕರ್ಮಿಗಳಿಗೆ ಭೂಹೀನ ಕಾರ್ಮಿಕರಿಗೆ ಗ್ರಾಮಾಂತರ ಬ್ಯಾಂಕಿನಿಂದ ಸಾಲದ ಸೌಲಭ್ಯ ದೊರೆಯುವುದು.

ಹಳ್ಳಿಗಳಲ್ಲಿರುವ ಬಹಳಷ್ಟು ಜನರು ನಿರಕ್ಷರರಾಗಿರುವುದರಿಂದ ಹಣವನ್ನು ಠೇವಣಿಯಿಡಲು ಅನುಸರಿಸಬೇಕಾದಾಗ ಕ್ರಮವನ್ನು ತಿಳಿಯಲು ಅವರಿಗೆ ಕಷ್ಟವಾಗುತ್ತದೆ. ಗ್ರಾಮಾಂತರ ಬ್ಯಾಂಕುಗಳ ಕಾರ್ಯ ಪದ್ಧತಿಯು ಸಾಧ್ಯವಾದಷ್ಟು ಸುಲಭವಾಗಿರಬೇಕೆಂದು ಸರಕಾರವು ತಿಳಿಸಿದೆ. ಬ್ಯಾಂಕಿನ ಎಲ್ಲಾ ವ್ಯವಹಾರವು ಪ್ರಾದೇಶಿಕ ಭಾಷೆಯಲ್ಲಿಯೇ ನಡೆಯಬೇಕು. ಸಾಲವನ್ನು ಕೇಳಲು ಬರುವ ಗ್ರಾಹಕರಿಗೆ ಅರ್ಜಿ ಮುಂತಾದವುಗಳನ್ನು ಬ್ಯಾಂಕಿನ ಸಿಬ್ಬಂದಿಯವರೇ ಬರೆದುಕೊಡಬೇಕು. ಇದರಿಂದ ದಳ್ಳಾಳಿ ಮತ್ತು ಇತರ ಮಧ್ಯದ ಜನರು ಆ ಗ್ರಾಹಕರನ್ನು ಯಾವುದೇ ವಿಧದಲ್ಲಿ ಪೀಡಿಸಲು ಸಾಧ್ಯವಾಗುವುದಿಲ್ಲ.

ಗ್ರಾಮೀಣ ಜನರ ಮನೋದೃಷ್ಟಿ ಮತ್ತು ವ್ಯವಹಾರದಲ್ಲಿ ಅಪೇಕ್ಷಿತ ಬದಲಾವಣೆಯನ್ನು ತರಲು ಪ್ರಯತ್ನಿಸುವುದು ಗ್ರಾಮಾಂತರ ಬ್ಯಾಂಕುಗಳ ಕೆಲಸಗಳಲ್ಲಿ ಒಂದಾಗಬೇಕು. ಗ್ರಾಮೀಣ ಜನರಿಗೆ ಉಳಿತಾಯ ಮತ್ತು ಬಂಡವಾಳ ಹೂಡಿಕೆಯ ಅಗತ್ಯತೆಯನ್ನು ಮನದಟ್ಟು ಮಾಡಿಕೊಡಬೇಕು. ಗ್ರಾಮಾಂತರ ಬ್ಯಾಂಕುಗಳು ಠೇವಣಿ ಸ್ವೀಕರಿಸುವುದು, ಸಾಲ ಕೊಡುವುದು ಈ ಕೆಲಸಕ್ಕೆ ಮಾತ್ರಾ ತಮ್ಮನ್ನು ಸೀಮಿತಿಗೊಳಿಸ ಕೂಡದು. ಗ್ರಾಮಾಂತರ

ಪ್ರದೇಶಗಳ ಸಮಗ್ರ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಅವು ಪಾಲ್ಗೊಳ್ಳಬೇಕು.

ಗ್ರಾಮಾಂತರ ಬ್ಯಾಂಕುಗಳು ಗ್ರಾಮೀಣ ಜನರಿಗೆ ಉಳಿತಾಯದ ಹಾಗೂ ಉತ್ಪಾದಕ ಬಂಡವಾಳ ಹೂಡಿಕೆಯ ಅಗತ್ಯತೆಯನ್ನು ಮನದಟ್ಟು ಮಾಡಿಕೊಡಬೇಕು. ಹಳ್ಳಿಗಳಲ್ಲಿಯ ಅನೇಕ ಬಡ ಜನರು ಸಾಮಾಜಿಕ ರೂಢಿಗಳಿಗಾಗಿ ಹಣವನ್ನು ಪೋಲು ಮಾಡಿ ಶಾಶ್ವತವಾಗಿ ಸಾಲದಲ್ಲಿ ಮುಳುಗುತ್ತಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಗ್ರಾಮೀಣ ಜನರು ಕಷ್ಟಪಟ್ಟು ಕೆಲಸಮಾಡುವುದನ್ನು ಮತ್ತು ಉತ್ಪಾದಕ ಬಂಡವಾಳ ಹೂಡಿಕೆಯನ್ನು ಅಭ್ಯಸಿಸದ ಹೊರತು, ಸಾಲದ ಮೇಲಿನ ಸರಕಾರದ ಇತ್ತೀಚಿನ ನಿರ್ಬಂಧವು ಯಾವ ಹೆಚ್ಚಿನ ರೀತಿಯಲ್ಲೂ ಸಹಾಯಕವಾಗಲಾರದು.

ಗ್ರಾಮಾಂತರ ಬ್ಯಾಂಕುಗಳು ಸ್ಥಳೀಯ ಸಮಸ್ಯೆಗಳ ಪರಿಚಯವನ್ನು ಹೊಂದಿದಂಥ ಮತ್ತು ಸಾಮಾಜಿಕ, ಆರ್ಥಿಕ ಪರಿಸರವನ್ನು ಅರಿತಂಥ ಮತ್ತು ಗ್ರಾಮೀಣ ಸಾಲದ ಕೆಲಸಕ್ಕೆ ಸಹಾಯಕವಾಗುವ ಸೂಕ್ತ ಮನೋಭಾವವುಳ್ಳಂಥ ಸಿಬ್ಬಂದಿಯನ್ನು ಆರಿಸಿಕೊಳ್ಳಬೇಕು. ಸಹಕಾರೀ ಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳ ಸಮಸ್ಯೆಗಳೊಂದಿಗೆ ಪರಿಚಯ ಮತ್ತು ಸ್ಥಳಗಳ ಬಗ್ಗೆ ಆತ್ಮೀಯ ಭಾವವನ್ನು ಹೊಂದಿರುವಂತೆ ಹಾಗೂ ವಾಣಿಜ್ಯ ಬ್ಯಾಂಕುಗಳು ವಾಣಿಜ್ಯ ವ್ಯವಸ್ಥೆ, ಠೇವಣಿಗಳನ್ನು ಆಕರ್ಷಿಸುವ ಸಾಮರ್ಥ್ಯ, ಕೇಂದ್ರೀಯ ಆರ್ಥಿಕ ಮಾರುಕಟ್ಟೆಯೊಂದಿಗಿರುವ ಸಂಪರ್ಕ ಮತ್ತು ಆಧುನಿಕ ದೃಷ್ಟಿಕೋನ ಹೊಂದಿರುವಂತೆ ಗ್ರಾಮಾಂತರ ಬ್ಯಾಂಕುಗಳ ಸಿಬ್ಬಂದಿ ಇವೆರಡು ಸ್ವಭಾವಗಳನ್ನು ಸಮನ್ವಯಗೊಳಿಸಿಕೊಳ್ಳಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಗೋಚರಿಸುವ ಮತ್ತು ಅಗೋಚರವಾದ ನಿರುದ್ಯೋಗವಿದೆ, ಉದ್ಯೋಗವಕಾಶಗಳನ್ನು ಉಂಟುಮಾಡುವ ಯೋಜನೆಗಳನ್ನು ಗ್ರಾಮಾಂತರ ಬ್ಯಾಂಕುಗಳು ಹಮ್ಮಿಕೊಳ್ಳಬೇಕು, ಹೀಗೆ ಗ್ರಾಮಾಂತರ ಬ್ಯಾಂಕುಗಳು ದೊಡ್ಡ ಮತ್ತು ಶ್ರೀಮಂತ ರೈತರಿಂದ ಕೇವಲ ಠೇವಣಿಗಳನ್ನು ಸಂಗ್ರಹಿಸುವುದಕ್ಕೆ ತಮ್ಮನ್ನು ಸೀಮಿತಗೊಳಿಸದೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಣ್ಣ ರೈತರ ಮತ್ತು ಇತರ ದುರ್ಬಲ ವರ್ಗಗಳ ಜನರ ಆದಾಯವು ಹೆಚ್ಚುವಂತೆಯೂ ಉದ್ಯೋಗಗಳು ಉಂಟಾಗುವಂತೆಯೂ ಮಾಡಬೇಕು.

ಗ್ರಾಮೀಣ ಬ್ಯಾಂಕುಗಳು


ಗ್ರಾಮಾಂತರ ಪ್ರದೇಶಗಳಿಗೆ ಎಷ್ಟು ಬಗೆಯಲ್ಲಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಿದರೂ ಸಾಲದು. ಹಳ್ಳಿಗಳಲ್ಲಿ ಉಳಿತಾಯ ಸಾಧ್ಯತೆ ಅಪಾರವಾಗಿದೆ. ಅಲ್ಲಿನ ಸಹಕಾರ ಸಂಘಗಳು ಹಳ್ಳಿಗಳಿಗೆ ಅಗತ್ಯವಾದಷ್ಟು ಪ್ರಮಾಣದಲ್ಲಿಯಾಗಲೀ ವ್ಯಾಪಕವಾಗಿಯಾಗಲೀ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಲಾಗುತ್ತಿಲ್ಲ. ವಾಣಿಜ್ಯ ಬ್ಯಾಂಕುಗಳ ಗ್ರಾಮೀಣ ಶಾಖೆಗಳನ್ನು ಅಧಿಕ ಸಂಖ್ಯೆಯಲ್ಲಿ ತೆರೆಯಲಾಯಿತು. ಅವೂ ಸಾಲದಾದವು. ಇದನ್ನು ಮನಗಂಡ ೧೯೭೨ರ ಬ್ಯಾಂಕಿಂಗ್ ಆಯೋಗವು ಗ್ರಾಮೀಣ ಬ್ಯಾಂಕುಗಳ ರಚನೆಗೆ ಶಿಫಾರಸು ಮಾಡಿದರು. ಸೂಕ್ತ ಕಂಡ ಪ್ರಾಥಮಿಕ ಸಂಘಗಳನ್ನು ಪೂರ್ಣ ಪ್ರಮಾಣದ ಬ್ಯಾಂಕುಗಳಾಗಿ ಪರಿವರ್ತಿಸಲು ಶಿಫಾರಸು ಮಾಡಿತು. ವಾಣಿಜ್ಯ ಬ್ಯಾಂಕುಗಳು ಮುತುವರ್ಜಿ ವಹಿಸಿ ಗ್ರಾಮೀಣ ಬ್ಯಾಂಕುಗಳನ್ನು ರಚಿಸಬೇಕೆಂದು ಸಲಹೆ ಮಾಡಿತು. ೧೯೭೫ರಲ್ಲಿ ಕೇಂದ್ರ ಸರ್ಕಾರದ ಈ ಶಿಫಾರಸನ್ನು ರಿಜರ್ವ್ ಬ್ಯಾಂಕ್ ಗಂಭೀರವಾಗಿ ಪರಿಗಣಿಸಿ ಅಧ್ಯಯನ ತಂಡವನ್ನು ರಚಿಸಿತು.

ಸಾಮಾನ್ಯವಾಗಿ ಪ್ರತಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು ಸಾರ್ವಜನಿಕ ಕ್ಷೇತ್ರದ ಬ್ಯಾಂಕು ಆರಂಭಿಸುತ್ತದೆ. ಬ್ಯಾಂಕು ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರಗಳೊಂದಿಗೆ ಸಮಾಲೋಚಿಸಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು ಆರಂಭಿಸುತ್ತದೆ. ಅನಂತರ ಈ ಗ್ರಾಮೀಣ ಬ್ಯಾಂಕಿಗೆ ಅದನ್ನಾರಂಭಿಸಿದ ಬ್ಯಾಂಕು ಷೇರು ಬಂಡವಾಳ ಒದಗಿಸುವುದು, ವ್ಯವಸ್ಥಾಪನಾ ಸಿಬ್ಬಂದಿಯನ್ನೊದಗಿಸುವುದು ಮುಂತಾದ ನೆರವನ್ನು ೫ ವರ್ಷಗಳವರೆಗೆ ನೀಡುತ್ತದೆ. ಹಣಕಾಸಿನ ಸೌಲಭ್ಯವನ್ನು ಒದಗಿಸಿಕೊಡುತ್ತದೆ.

ಪ್ರತಿ ಗ್ರಾಮೀಣ ಬ್ಯಾಂಕಿಗೂ ಒಂಭತ್ತು ಜನರ ನಿರ್ದೇಶಕ ಮಂಡಳಿಯಿರುತ್ತದೆ. ಅವರಲ್ಲೊಬ್ಬರು ಅಧ್ಯಕ್ಷರು. ಅಧ್ಯಕ್ಷರನ್ನು ಕೇಂದ್ರ ಸರ್ಕಾರ ನೇಮಿಸುತ್ತದೆ. ಇನ್ನು ಮೂವರು ನಿರ್ದೇಶಕರನ್ನು ಕೇಂದ್ರ ಸರ್ಕಾರವೂ, ಇಬ್ಬರನ್ನು ರಾಜ್ಯ ಸರ್ಕಾರವೂ ಉಳಿದ ಮೂವರನ್ನು ಆರಂಭಿಸಿದ ಬ್ಯಾಂಕೂ ನಾಮಕರಣದಿಂದ ನೇಮಿಸಿದೆ.

ಪ್ರತಿ ಗ್ರಾಮೀಣ ಬ್ಯಾಂಕಿಗೂ ವಾಣಿಜ್ಯ ಬ್ಯಾಂಕಿನ ಸ್ಥಾನಮಾನಗಳಿವೆ. ಅದು ಠೇವಣಿಗಳನ್ನು ಸಂಗ್ರಹಿಸಬಹುದು. ಸಣ್ಣ ರೈತರಿಗೆ, ಕೃಷಿ ಕಾರ್ಮಿಕರಿಗೆ, ಗ್ರಾಮೀಣ ಕುಶಲಕರ್ಮಿಗಳಿಗೆ, ಚಿಕ್ಕ ಪುಟ್ಟ ಉದ್ಯಮಿಗಳಿಗೆ ಮಾತ್ರಾ ಕಿರು

ಕೃಷಿ ಸಾಲಗಳು



ಅವಧಿಯ ಮತ್ತು ಮಧ್ಯಮಾವಧಿಯ ಸಾಲಗಳನ್ನು ಕೊಡಬಹುದು. ಬೇಸಾಯಕ್ಕೆ ಸಂಬಂಧಿಸಿದ ವಿಷಯಗಳಾದರೆ ಕಡಿಮೆ ದರದಲ್ಲಿ ಬಡ್ಡಿ ವಿಧಿಸಲಾಗುತ್ತದೆ.

ಗ್ರಾಮೀಣ ಬ್ಯಾಂಕುಗಳಿಗೆ ಬ್ಯಾಂಕಿಂಗ್‌ನಲ್ಲಿ ತಜ್ಞರಾದ ಸಿಬ್ಬಂದಿ ಬೇಕಷ್ಟೆ. ಇದಕ್ಕಾಗಿ ರಿಜರ್ವ್ ಬ್ಯಾಂಕು ತನ್ನ ವ್ಯವಸಾಯ ಬ್ಯಾಂಕಿಂಗ್ ಕಾಲೇಜಿನಲ್ಲಿ ಗ್ರಾಮೀಣ ಬ್ಯಾಂಕುಗಳ ಅಧ್ಯಕ್ಷರಿಗೂ, ಶಾಖಾ ಮ್ಯಾನೇಜರುಗಳಿಗೆ ತರಬೇತಿ ನೀಡುತ್ತದೆ.

ಬ್ಯಾಂಕುಗಳ ಸಾಮಾಜಿಕ ಹತೋಟಿ ಮತ್ತು ಬ್ಯಾಂಕ್ ರಾಷ್ಟ್ರೀಕರಣವು ಬ್ಯಾಂಕುಗಳ ಸಾಲನೀಡಿಕೆಯ ವಿನ್ಯಾಸದಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿತು, ಬಡವರ, ರೈತರ ಅಭಿವೃದ್ಧಿಗೆ ಬಲು ಹೆಚ್ಚಿನ ಗಮನ ಕೊಡಲಾಯಿತು.

೧. ಅಲ್ಪಾವದಿ ಸಾಲಗಳು

ಬೀಜ, ಗೊಬ್ಬರ, ಕೀಟನಾಶಕ ಮುಂತಾದವುಗಳನ್ನು ಖರೀದಿಸಲು ಕೃಷಿ ವೆಚ್ಚವನ್ನು, ಕೂಲಿಯನ್ನು ಪಾವತಿ ಮಾಡಲು ೧೮ ತಿಂಗಳ ಅವಧಿ

ಮೀರದಂತಹ ಸಾಲಗಳು ಅಲ್ಪಾವಧಿ ಸಾಲಗಳು. ಇವು ಬೆಳೆ ಸಾಲಗಳು ಎಂದು ಹೆಸರಾಗಿವೆ. ಒಂದು ಬೆಳೆ ತೆಗೆದು ಸಾಲ ತೀರಿಸುವುದು ಸಾಧ್ಯವಿರುವುದರಿಂದ ಈ ಹೆಸರು ಬಂದಿದೆ. ದೊಡ್ಡ ರೈತರು ಬಹು ವಿಧ ಬೆಳೆ ತೆಗೆಯುವ ರೈತರು ಓವರ್ ಡ್ರಾಫ್ಟ್ (ಮೀರೆಳೆತ) ಸೌಲಭ್ಯವನ್ನು ಪಡೆಯಬಹುದು. ಓವರ್ ಡ್ರಾಫ್ಟ್ ವಿಷಯವನ್ನು ಮುಂದೆ ವಿವರಿಸುತ್ತೇನೆ.

ರೈತನ ಜಮೀನಿನ ವಿಸ್ತಾರ, ಬೆಳೆ ಯಾವುದು, ಸಾಲದ ಅಗತ್ಯಗಳೇನು, ಜಮೀನಿನ ಬಗೆ ಯಾವುದು - ಮುಂತಾದ ವಿಷಯಗಳನ್ನಾಧರಿಸಿ ಸಾಲದ ಮಿತಿಯನ್ನು ನಿರ್ಧರಿಸಲಾಗುತ್ತದೆ. ಪ್ರತಿಯೊಂದು ಅರ್ಜಿಯನ್ನೂ ಪ್ರತ್ಯೇಕ ಸಮೀಕ್ಷೆಗೆ ಒಳಪಡಿಸುವುದು ಅಗತ್ಯವಾಗುತ್ತದೆ. ಸರಾಸರಿ ಸಾಲದ ಮಿತಿಯನ್ನು ಎಕರೆಗೆ ಇಂತಿಷ್ಟು ಎಂದು ನಿಗದಿ ಮಾಡಲಾಗುತ್ತದೆ. ಭೂಮಿಯ ಫಲವತ್ತು, ನೀರಾವರಿ ಸೌಲಭ್ಯ ಇವುಗಳನ್ನು ವಿಶೇಷವಾಗಿ ಪರಿಗಣಿಸಲಾಗುತ್ತದೆ.

ಈ ಸಾಲವನ್ನು ಎರಡು ಬಗೆಯಲ್ಲಿ ನೀಡಬಹುದು. ವಸ್ತುರೂಪದಲ್ಲಿ ಅಂದರೆ ಬೀಜ, ಗೊಬ್ಬರ, ಕೀಟನಾಶಕ ಮುಂತಾದವುಗಳನ್ನು ವಸ್ತುರೂಪದಲ್ಲೇ ಒದಗಿಸಬಹುದು. ಕೂಲಿ, ಉಳುಮೆಗೆ, ಊಟಕ್ಕೆ ಸಾಗಣೆಗೆ ತಗಲುವ ವೆಚ್ಚವನ್ನು ನಗದಿನ ರೂಪದಲ್ಲೇ ಕೊಡಬಹುದು.

೨. ಮಧ್ಯಮಾವಧಿ ಸಾಲ

ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ೫ ರಿಂದ ೭ ವರ್ಷಗಳಿಗೆ ನೀಡಲಾಗುವ ಸಾಲಗಳು ಮಧ್ಯಮಾವಧಿ ಸಾಲಗಳು, ಇವುಗಳನ್ನು ಹೂಡಿಕೆ ಸಾಲವೆಂದೂ ಕರೆಯುತ್ತಾರೆ. ಈ ಸಾಲಗಳನ್ನು ರೈತರಿಗೆ ಈ ಕೆಳಗಿನ ಉದ್ದೇಶಗಳಿಗಾಗಿ ಕೊಡಲಾಗುತ್ತದೆ.

೧. ಭಾವಿ, ಬೋರ್‌ವೆಲ್‌ಗಳ ನಿರ್ಮಾಣ, ಜೀರ್ಣೋದ್ಧಾರ,
೨. ಪಂಪಸೆಟ್, ಏತ, ಕಪಿಲೆಗಳ ಅಳವಡಿಕೆ,
೩. ಎತ್ತು, ಕೋಣಗಳ ಖರೀದಿ, ಗಾಡಿ ಕೊಳ್ಳುವುದು,
೪. ದನಗಳ ಕೊಟ್ಟಿಗೆ, ಗೊಬ್ಬರ ದಾಸ್ತಾನಿಗೆ ಷೆಡ್‌ಗಳ ನಿರ್ಮಾಣ,
೫. ಟ್ರಾಕ್ಟರ್, ಫವರ್ ಟಿಲ್ಲರ್ ಮುಂತಾದವುಗಳ ಖರೀದಿ
೬. ಜಮೀನು ಮಟ್ಟ ಮಾಡುವುದು, ದಂಡೆ ಕಟ್ಟುವುದು, ಬದುಗಳ ನಿರ್ಮಾಣ, ಬೇಲಿ, ಚಪ್ಪರ ಹಾಕುವುದು,

೭. ಡೈರಿ, ಮೀನು ಸಾಕಣೆ, ಕೋಳಿ ಸಾಕಣೆ, ರೇಷ್ಮೆ ಗೂಡು ಇಡುವುದು ಇತ್ಯಾದಿ.

೩. ದೀರ್ಘಾವದಿ ಸಾಲಗಳು

ಈ ಸಾಲಗಳನ್ನು ಅಭಿವೃದ್ಧಿ ಸಾಲಗಳೆಂದೂ ಕರೆಯುತ್ತಾರೆ. ಈ ಸಾಲದ ಗರಿಷ್ಠ ಅವಧಿ ೧೫ ವರ್ಷಗಳು. ಈ ಸಾಲಗಳನ್ನು ಕೆಳಕಂಡ ಉದ್ದೇಶಗಳಿಗಾಗಿ ಕೊಡಲಾಗುತ್ತದೆ.

೧. ಕಾಫಿ, ಟೀ, ದ್ರಾಕ್ಷಿ, ರಬ್ಬರ್ ಮುಂತಾದ ತೋಟದ ಖರೀದಿಗೆ ಮತ್ತು ಅಭಿವೃದ್ಧಿಗೆ.

೨. ತೆಂಗು, ಬಾಳೆ, ಮಾವು ಇವುಗಳ ಬೃಹತ್ ಪ್ರಮಾಣದ ಕೊಳ್ಳುವಿಕೆಗೆ.

೩. ಅರಣ್ಯ ಬೆಳೆಸಲು, ರಸ್ತೆ ನಿರ್ಮಾಣಕ್ಕೆ.

ಪರೋಕ್ಷ ಸಾಲಗಳು

ಗ್ರಾಮೀಣ ಬ್ಯಾಂಕುಗಳು ಈ ಕೆಳಗಿನ ಪರೋಕ್ಷ ಸಾಲಗಳನ್ನು ನೀಡುತ್ತವೆ.

೧. ಕೃಷಿ ಸಾಮಗ್ರಿ, ವಸ್ತುಗಳ ಮಾರಟಗಾರರಿಗೆ, ಸಂಗ್ರಹದಾರರಿಗೆ, ಹಂಚಿಕೆದಾರರಿಗೆ.

೨. ಕೃಷಿ ಸೇವಾ ಕೇಂದ್ರ ಸ್ಥಾಪಿಸಲು,

೩. ಶೀತಲ ಯಂತ್ರ ಸ್ಥಾಪನೆಗೆ.

೪. ಗ್ರಾಮೀಣ, ನೀರಾವರಿ ವಿದ್ಯುದೀಕರಣಕ್ಕೆ, ವಿದ್ಯುತ್ ಮಂಡಳಿಗೆ.

೫. ಬೇಸಾಯಗಾರರಿಗೆ ಸಾಲ ನೀಡಲೆಂದು ಪ್ರಾಥಮಿಕ ವ್ಯವಸಾಯ ಸಂಘಗಳಿಗೆ ಸಾಲ ಒದಗಿಸುವುದು.

ವ್ಯವಸಾಯಾಭಿವೃದ್ಧಿ ಶಾಖೆಗಳು

ವ್ಯವಸಾಯಾಕ್ಷೇತ್ರದ ವ್ಯವಹಾರಗಳು ವಿಶಿಷ್ಟ ಬಗೆಯವು, ಸಾಧಾರಣ ವಾಣಿಜ್ಯ ಶಾಖೆಗಳು ಇವನ್ನು ಸರಿಯಾಗಿ ನಿರ್ವಹಿಸಲು ಶಕ್ಯವಾಗುವುದಿಲ್ಲ. ಆದುದರಿಂದ ಸಾರ್ವಜನಿಕ ವಲಯದ ಬ್ಯಾಂಕುಗಳು ವ್ಯವಸಾಯ ಅಭಿವೃದ್ಧಿ ಶಾಖೆಗಳನ್ನು ತೆರೆದಿವೆ. ಇವು ಕೃಷಿ ಸಾಲಗಳಿಗೆಂದೇ ವಿಶಿಷ್ಟವಾಗಿ ರೂಪುಗೊಂಡ ಶಾಖೆಗಳಾಗಿವೆ. ಪ್ರತಿ ಶಾಖೆಯೂ ಎರಡು ಮೂರು ಬ್ಲಾಕ್‌ಗಳ ಮತ್ತು ಸುಮಾರು ಒಂದು ನೂರು ಹಳ್ಳಿಗಳಷ್ಟು ಪ್ರದೇಶದ ವ್ಯಾಪ್ತಿ ಹೊಂದಿರುತ್ತದೆ.

ಈ ಶಾಖೆಗಳು ಸಾಲವನ್ನು ಮಾತ್ರವಲ್ಲದೆ ಇತರ ಸಹಾಯಗಳನ್ನು ಒದಗಿಸುತ್ತದೆ. ತಾಂತ್ರಿಕ ನೆರವು, ಪಶುಚಿಕಿತ್ಸೆ, ಯಂತ್ರ ದುರಸ್ತಿ ಮುಂತಾದ ಹಲವು ಸೇವೆಗಳನ್ನೊದಗಿಸುತ್ತದೆ. ಶಾಖೆಯ ಸಿಬ್ಬಂದಿಯಲ್ಲಿ ಇವುಗಳಿಗೆ ಸಂಬಂಧಿಸಿದ ತಜ್ಞರಿರುತ್ತಾರೆ. ಈ ಶಾಖೆಗಳಿಗೆ ಮಾರ್ಗದರ್ಶನ ಮಾಡಲು ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ವಿಶೇಷ ಸೆಲ್ ಇರುತ್ತದೆ.

ಗ್ರಾಮೀಣ ಅಭಿವೃದ್ಧಿಗಾಗಿಯೇ ನಬಾರ್ಡ್ ಬ್ಯಾಂಕ್. ಅಂದರೆ ನ್ಯಾಷನಲ್ ಬ್ಯಾಂಕ್ ಆಫ್ ಅಗ್ರಿಕಲ್ಚರ್ ಮತ್ತು ಗ್ರಾಮಾಭಿವೃದ್ಧಿ. ಇದು ೧೯೮೨ನೇ ಜುಲೈ ೧೨ ರಂದು ಸ್ಥಾಪಿತವಾಯಿತು. ಇದು ದೇಶದ ವ್ಯವಸಾಯ ಮತ್ತು ಗ್ರಾಮೀಣ ಚಟುವಟಿಕೆಗಳಿಗೆ ಸಾಲ ನೀಡುವ ಸಂಬಂಧಥ ಎಲ್ಲಾ ಚಟುವಟಿಕೆಗಳ, ನೀತಿ ನಿರೂಪಣೆ, ಯೋಜಿಸುವ ಕಾರ್ಯ ನಿರ್ವಹಿಸುವ ಶೃಂಗ ಸಂಸ್ಥೆ. ಅಂದರೆ ಮೇಲ್ಮಟ್ಟದ ಬ್ಯಾಂಕ್, ಗ್ರಾಮೀಣ ಪ್ರದೇಶಗಳಲ್ಲಿ ಬೇಸಾಯ, ಉತ್ಪಾದನಾ ಚಟುವಟಿಕೆಗಳು ಮತ್ತು ಅಭಿವದ್ಧಿಗಳಿಗೆ ಸಾಲ ಒದಗಿಸುವ ಸಂಸ್ಥೆಗಳಿಗೆ ಮರು ಹಣಕಾಸು ಒದಗಿಸುವ ಸಂಸ್ಥೆಯಾಗಿದೆ. ಸಾಲ ಸಂಸ್ಥೆಗಳಿಗೆ ಮಾರ್ಗದರ್ಶನ, ನೆರವು, ಪುನರ್‌ರಚನೆ, ಪುನರ್ವಸತಿ, ಸಿಬ್ಬಂದಿ ತರಬೇತಿ ಇವನ್ನೆಲ್ಲಾ ಒದಗಿಸುವ ಸಂಸ್ಥೆಯಾಗಿದೆ. ಗ್ರಾಮೀಣ ಸಾಲಗಳನ್ನೊದಗಿಸುವ ಎಲ್ಲಾ ಸಂಸ್ಥೆಗಳೊಡನೆ ಹಾಗೂ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳೊಡನೆ,ರಿಜರ್ವ್ ಬ್ಯಾಂಕಿನೊಡನೆ, ಇತರ ರಾಷ್ಟ್ರೀಯ ಮಟ್ಟದ ಹಣಕಾಸು ಸಂಸ್ಥೆಗಳೊಡನೆ ಸಂಬಂಧವನ್ನು ಇಟ್ಟುಕೊಂಡಿರುವ ಸಂಸ್ಥೆಯಾಗಿದೆ. ನಬಾರ್ಡ್‌ಗೆ ೧೬ ಪ್ರಮುಖ ರಾಜ್ಯಗಳ ರಾಜಧಾನಿಯಲ್ಲಿ ಒಂದೊಂದು ಪ್ರಾದೇಶಿಕ ಕಚೇರಿಯೂ, ೩ ಉಪ ಕಚೇರಿಗಳೂ ಇವೆ.

ನಬಾರ್ಡ್‌ನ ಮೂಲನಿಧಿಗೆ ರಿಸರ್ವ್ ಬ್ಯಾಂಕ್ ಮೊದಲು ಸಾಲಕೊಟ್ಟು ನಂತರ ಅದರ ಕಾರ್ಯಾಚರಣೆ, ಸಾಧನೆಗಳ ಮೂಲಕ ಹಣವನ್ನು ಹಿಂದಕ್ಕೆ ಪಡೆದಿದೆ. ಕೇಂದ್ರ ಹಾಗೂ ರಾಜ್ಯಗಳ ಬೊಕ್ಕಸದಿಂದಲೂ ನಿಗದಿತ ಹಣವನ್ನು ಪಡೆದು ಮರುಪಾವತಿ ಮಾಡುತ್ತಾ ತನ್ನ ವ್ಯವಹಾರವನ್ನು ಕುದುರಿಸಿಕೊಳ್ಳುತ್ತಿದೆ. ವಿದೇಶೀ ಸಾಲವನ್ನು ಪಡೆಯಲೂ ಅಧಿಕಾರ ಹೊಂದಿದೆ.

ನಬಾರ್ಡ್ ಸಹ ಕೃಷಿ ಪ್ರಧಾನ ಚಟುವಟಿಕೆಗಳಿಗೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲವನ್ನು ನೀಡುತ್ತಿದೆ. ಜೊತೆಗೆ ಕೈಮಗ್ಗ, ನೇಕಾರರು, ಚರ್ಮ ಶಿಲ್ಪ, ಲೋಹ ಶಿಲ್ಪ, ಕಾಷ್ಟ ಶಿಲ್ಪ, ಮೊದಲಾದ ಕುಶಲ ಕರ್ಮಿಗಳಿಗೂ ನೆರವು ನೀಡುತ್ತದೆ.

ನಬಾರ್ಡ್ ಕಾರ್ಯಗಳು ನಿರ್ದೇಶಕ ಮಂಡಳಿಯಿಂದ ನಿರ್ವಹಿಸಲ್ಪಡುತ್ತದೆ. ನಿರ್ದೇಶಕ ಮಂಡಳಿಯಲ್ಲಿ ಒಬ್ಬ ಅಧ್ಯಕ್ಷರೂ, ಒಬ್ಬ ನಿರ್ವಾಹಕ ನಿರ್ದೇಶಕನೂ, ಗ್ರಾಮೀಣ ಅರ್ಥಶಾಸ್ತ್ರದಲ್ಲಿ ತಜ್ಞರಾದ ಇಬ್ಬರು ನಿರ್ದೇಶಕರೂ, ರಿಜರ್ವ್ ಬ್ಯಾಂಕ್‌ನ ನಿರ್ದೇಶಕರಲ್ಲಿ ಮೂವರು ನಿರ್ದೇಶಕರೂ, ಕೇಂದ್ರ ಸರ್ಕಾರದ ಮೂವರು ಅಧಿಕಾರೀ ನಿರ್ದೇಶಕರೂ, ರಾಜ್ಯ ಸರ್ಕಾರದ ೩ ಅಧಿಕಾರಿ ನಿರ್ದೇಶಕರೂ ಇರುತ್ತಾರೆ. ಇವರನ್ನೆಲ್ಲಾ ಕೇಂದ್ರ ಸರ್ಕಾರವು ನೇಮಿಸುತ್ತದೆ.

ಬ್ಯಾಂಕಿನಲ್ಲಿ ಖಾತೆ ತೆರೆಯಬೇಕಾದರೆ ಅನುಸರಿಸಬೇಕಾದ ನಿಯಮಗಳು

ಯಾವುದೇ ವ್ಯಕ್ತಿಯು ಬ್ಯಾಂಕಿನಲ್ಲಿ ಖಾತೆ ತೆರೆಯಬೇಕಾದರೆ ಸಂಬಂಧಪಟ್ಟ ಬ್ಯಾಂಕ್ ಸಿಬ್ಬಂದಿ ತುಂಬಾ ಜಾಗರೂಕತೆಯನ್ನು ವಹಿಸಬೇಕು. ಖಾತೆ ತೆರೆಯುವ ವ್ಯಕ್ತಿಗೂ ತನ್ನನ್ನು ಕುರಿತು ನೀಡುವ ಪರಿಚಯ ಪತ್ರ ಬಹಳ ಮುಖ್ಯವಾದುದು. ಸ್ವೀಕರಿಸುವ ಅಧಿಕಾರವನ್ನು ಸಂಪೂರ್ಣವಾಗಿ ಬ್ಯಾಂಕ್ ಹೊಂದಿದೆ.

ಬ್ಯಾಂಕ್ ಗೊತ್ತು ಪಡಿಸಿದ ಅರ್ಜಿಯನ್ನು ತುಂಬಿ ಕೊಡಬೇಕು. ಹೆಸರು, ವೃತ್ತಿ ವಿಳಾಸ ಅಲ್ಲದೆ ತನ್ನ ಮಾದರಿ ಸಹಿ (Speciman Signature) ಹಾಕಬೇಕು. ತನ್ನನ್ನು ಬ್ಯಾಂಕಿಗೆ ಪರಿಚಯಿಸಿಕೊಟ್ಟವನ ಹೆಸರು ಮತ್ತು ವೃತ್ತಿಯನ್ನು ನಮೂದಿಸಬೇಕು. ಅವನ ಹಣಕಾಸಿನ ಸ್ಥಿತಿ, ಸ್ವಭಾವ, ವೃತ್ತಿ ಇವುಗಳನ್ನು ಖಾತರಿ ಮಾಡಿಕೊಂಡೇ ಅವನ ಹೆಸರಿನಲ್ಲಿ ಬ್ಯಾಂಕು ಖಾತೆ ತೆರೆಯಲು ಒಪ್ಪಿಕೊಳ್ಳುತ್ತದೆ.

ಗ್ರಾಹಕರು ಮುಂದೆ ಹಣ ವಾಪಸು ಪಡೆಯಲು ಅಥವಾ ಇನ್ನಾವುದೇ ಸಂದರ್ಭದಲ್ಲಿ ಪತ್ರ ವ್ಯವಹಾರ ನಡೆಸುವಾಗ ಆತನ ಸಹಿಯನ್ನು ಹೋಲಿಸಿ ನೋಡುವುದಕ್ಕಾಗಿ ಈ ಮಾದರಿ ಸಹಿಗಳನ್ನು ಪಡೆಯಲಾಗುತ್ತದೆ. ಗ್ರಾಹಕನು ಚೆಕ್ಕುಗಳನ್ನು ನೀಡುವಾಗ ಅಥವಾ ಬ್ಯಾಂಕಿನೊಂದಿಗೆ ಪತ್ರವ್ಯವಹಾರ ನಡೆಸುವಾಗ, ಖಾತೆಯನ್ನು ತೆರೆಯುವಾಗ ನೀಡಲಾದ ಮಾದರಿ ಸಹಿಯ ನಮೂನೆಯಲ್ಲೇ ತನ್ನ ಸಹಿಯನ್ನು ಮಾಡಬೇಕು.

ಗ್ರಾಹಕನು ತನ್ನ ಖಾತೆಯು ತನ್ನ ಪ್ರತಿನಿಧಿಯಿಂದ ನಿರ್ವಹಿಸಲ್ಪಡಬೇಕೆಂದು ಬಯಸಿದರೆ, ಆ ಪ್ರತಿನಿಧಿಗೆ ಅವನ ಖಾತೆಯನ್ನು ನಿರ್ವಹಿಸುವ ಅಧಿಕಾರ ನೀಡುವ ಆದೇಶವನ್ನು ಲಿಖಿತ ರೂಪದಲ್ಲಿ

ಪಡೆಯಬೇಕು. ಇಂತಹ ಸಂದರ್ಭದಲ್ಲಿ ಬ್ಯಾಂಕ್ ಅಧಿಕಾರಿ ಪ್ರತಿನಿಧಿಯ ಮಾದರಿಯ ಸಹಿಯನ್ನು ಕೂಡಾ ಪಡೆಯಬೇಕು.

ಖಾತೆಯನ್ನು ತೆರೆದ ನಂತರ ಬ್ಯಾಂಕ್ ಸಿಬ್ಬಂದಿ ಗ್ರಾಹಕನಿಗೆ ಖಾತೆಯ ನಿರ್ವಹಣೆಗಾಗಿ ಒಳಪಾವತಿ ಚೀಟಿಗಳೆಂದು ಕರೆಯಲ್ಪಡುವ (Pay in slip book) ಪ್ರತಿ ಹಾಗೂ

ಚೆಕ್ಕುಗಳು

ಒಂದು ಬ್ಯಾಂಕಿನ ಗ್ರಾಹಕ ತನ್ನ ಖಾತೆಯಿಂದ ಹಣ ಪಡೆಯಲು (ಡ್ರಾ) ಅಥವಾ ಇತರರಿಗೆ ಪಾವತಿ ಮಾಡಲು ಬಳಸುವ ಸಾಧನವನ್ನು ಚೆಕ್ಕು ಎಂದು ಕರೆಯತ್ತೇವೆ. ಹಿಂದೆ ಅಕ್ಕಸಾಲಿಗನೇ ಬ್ಯಾಂಕರ್ ಆಗಿದ್ದಾಗ ಅವನ ಬಳಿ ಠೇವಣಿ ಇಟ್ಟಿದ್ದ ವ್ಯಕ್ತಿಗಳು ತಮ್ಮ ಹಣವನ್ನು ವಾಪಸ್ಸು ಪಡೆಯಲು ಒಂದು ಪತ್ರ ಬರೆದು ಕಳುಹಿಸುತ್ತಿದ್ದರು. ಆ ಪತ್ರವೇ ಇಂದಿನ ಚೆಕ್‌ನ ಮೂಲ ರೂಪ ಎಂದು ಹೇಳಬಹುದು. ೧೭೮೦ರಲ್ಲಿ ಮೊಟ್ಟ ಮೊದಲಿಗೆ ಚೆಕ್ಕು ಬಳಕೆಗೆ ಬಂದಿತು. ಇದನ್ನು ಒಬ್ಬನಿಂದ ಮತ್ತೊಬ್ಬನಿಗೆ ವರ್ಗಾಯಿಸಬಹುದು. ಚೆಕ್ಕು ಬ್ಯಾಂಕರನಿಗೆ ಗ್ರಾಹಕ ನೀಡಿದ ಲಿಖಿತ ಆದೇಶ.

ಚೆಕ್ಕಿನ ಲಕ್ಷಣಗಳು

೧. ಚೆಕ್ಕು ಒಂದು ಲಿಖಿತ ಆದೇಶವಾಗಿದೆ. ಗ್ರಾಹಕ ತಾನು ಬ್ಯಾಂಕಿನಿಂದ ಪಡೆದ ಅಚ್ಚಾದ ಚೆಕ್ಕಿನ ನಮೂನೆಯಲ್ಲೇ ಬರೆಯಬೇಕು.

೨. ಚೆಕ್ಕನ್ನು ಒಂದು ನಿಶ್ಚಿತ ಬ್ಯಾಂಕಿನ ಮೇಲೆ ಬರೆಯಬೇಕು.

೩. ಚೆಕ್ಕು ಒಂದು ಬೇಷರತ್ ಅಥವಾ ಯಾವ ಷರತ್ತನ್ನೂ ಒಳಗೊಳ್ಳದ ಆದೇಶ. ಗ್ರಾಹಕನು ದಯವಿಟ್ಟು ಹಣವನ್ನು ಕೊಡಿ ಎಂದು ಬರೆದರೂ ಅದನ್ನು ಆದೇಶ ಎಂದು ಪರಿಗಣಿಸಲಾಗುತ್ತದೆ.

೪. ಚೆಕ್ಕಿನ ಮೇಲೆ ಅದರ ರಚಕ ಅಥವಾ ಕರ್ತನ ಸಹಿ ಇರಬೇಕು. ಅವನ ಸಹಿ ಇಲ್ಲದ ಚೆಕ್ಕನ್ನು ಬ್ಯಾಂಕು ಆದರಿಸುವುದಿಲ್ಲ. ಚೆಕ್ಕಿನ ಮೇಲೆ ರಚಕನ ಸಹಿ ಅವನು ಖಾತೆ ತೆರೆಯುವಾಗ ಬ್ಯಾಂಕಿಗೆ ಕೊಟ್ಟಿರುವ ಮಾದರಿ ಸಹಿಗೆ ಅನುಗುಣ ವಾಗಿರಬೇಕು. ಹಾಗಿಲ್ಲದಿದ್ದಲ್ಲಿ ಚೆಕ್ಕು ಅನಾದರಣೆ ಯಾಗುತ್ತದೆ.

೫. ಚೆಕ್ಕಿನ ಮೇಲೆ ಬ್ಯಾಂಕು ಪಾವತಿ ಮಾಡಬೇಕಾದ ಹಣ ನಿಶ್ಚಿತವಾಗಿರಬೇಕು.

ಚೆಕ್ಕಿಗೆ ಇರುವ ಕಕ್ಷಿಗಳು (Parties to a Cheque) ಪ್ರತಿಯೊಂದು ಚೆಕ್ಕಿಗೂ ಮೂರು ಕಕ್ಷಿಗಳುಂಟು.

೧. ಚೆಕ್ಕಿನ ಕರ್ತೃ ಅಥವಾ ರಚಕ (Drawer) ಇವನು ಬ್ಯಾಂಕಿನ ಗ್ರಾಹಕ ಅಥವಾ ಅವನ ಪರವಾಗಿ ಚೆಕ್ಕು ಬರೆಯಲು ಅವನಿಂದ ಅಧಿಕಾರ ಪಡೆದವನು.

೨. ಸ್ವೀಕರ್ತ (Drawee) ಸ್ವೀಕರ್ತ ಪಾವತಿದಾರ ಬ್ಯಾಂಕು ಅಂದರೆ ಹಣ ಪಾವತಿಮಾಡಲು ಯಾವ ಬ್ಯಾಂಕಿಗೆ ಆದೇಶಮಾಡಲಾಗಿದೆಯೋ ಆ ಬ್ಯಾಂಕು.

೩. ಪ್ರಾಪ್ತಿಕರ್ತ (Payee) ಯಾರಿಗೆ ಹಣ ಪಾವತಿ ಮಾಡಬೇಕೆಂದು ಚೆಕ್ಕಿನಲ್ಲಿ ಬರೆಯಲಾಗಿದೆಯೋ ಆತ ಪ್ರಾಪ್ತಿಕರ್ತ.

ಚೆಕ್ಕುಗಳ ಉಪಯೋಗಿಸುವುದರಿಂದ ಆಗುವ ಅನುಕೂಲತೆಗಳು:

೧. ಚೆಕ್ಕಿನ ಮೂಲಕ ಬೇರೆಯವರಿಗೆ ಕೊಡಬೇಕಾಗಿರುವ ಹಣದ ಪಾವತಿ ಮಾಡುವುದು ಬಹಳ ಉಪಯುಕ್ತ ಹಾಗೂ ಸುರಕ್ಷಿತವಾಗಿದೆ. ಹಣವನ್ನು ಸ್ವತಃ ಎಣಿಕೆ ಮಾಡಿ ಕೊಡುವ ಪ್ರಸಂಗವಿಲ್ಲ. ನಗದನ್ನು ಹೊರುವ ಅಗತ್ಯವಿಲ್ಲ. ಚೆಕ್ಕುಗಳ ಸಾಗಣೆ ತುಂಬಾ ಸುಲಭ. ಚೆಕ್ಕುಗಳ ಲೆಕ್ಕ ಸರಳ. ಚೆಕ್ಕುಗಳ ಮೂಲಕ ಹಣ ಪಾವತಿ ಮಾಡುವವರಿಗೆ ಪ್ರತ್ಯೇಕ ಜಮಾಖರ್ಚಿನ ಲೆಕ್ಕಗಳನ್ನಿಟ್ಟು ಕೊಳ್ಳಬೇಕಾಗಿಲ್ಲ. ಏಕೆಂದರೆ ಪಾವತಿದಾರನು ಬ್ಯಾಂಕರನು ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿದ ತಕ್ಷಣವೇ ಅದರ ವಿವರಗಳನ್ನು ದಾಖಲು ಮಾಡಿಕೊಳ್ಳುವನು. ಹಾಗೂ ಹಣವನ್ನು ಪಾವತಿ ಮಾಡಿದ ವಿಷಯವನ್ನು ಬೇಕಾದಲ್ಲಿ ರುಜುವಾತು ಮಾಡಬಲ್ಲನು.

೨. ಒಂದು ವೇಳೆ ಹಣಪಾವತಿ ಮಾಡಿದ್ದು ತಪ್ಪು ಎನಿಸಿದರೆ ಅಥವಾ ಆ ಚೆಕ್ ಹಾಳೆ ಕಳೆದುಹೋದರೆ ಚೆಕ್ಕು ಪಾವತಿದಾರನು ಬ್ಯಾಂಕರನ ಮುಂದೆ ಹಾಜರಾಗುವ ಮುನ್ನ ಅದರ ಕ್ರಮ ಸಂಖ್ಯೆಯನ್ನು ತಿಳಿಸಿ ಅದನ್ನು ಆದರಿಸಬಾರದೆಂದು ಬ್ಯಾಂಕಿಗೆ ಸೂಚನೆ ನೀಡಬಹುದು. ಇದಕ್ಕೆ ಪ್ರತ್ಯಾಜ್ಞೆ ಎನ್ನುತ್ತಾರೆ.

೩. ಚೆಕ್ಕಿನ ಹಣವು ಅನ್ಯವ್ಯಕ್ತಿ (Wrong person)ಗೆ ಸಂದಾಯ ವಾಗಬಾರದಂತೆ ಅದನ್ನು (Cross) ಮಾಡಬಹುದು.

ಳ. ಪ್ರವಾಸೀ ಚೆಕ್ಕುಗಳನ್ನು ನಾವು ಸಂಚರಿಸುವ ಕಡೆಗಳಲ್ಲಿ ಎಲ್ಲಾ ನಾವು ಅದನ್ನು ಒಯ್ಯಬಹುದು. ಸುರಕ್ಷಾ ಕ್ರಮದಿಂದ ಇದು ಅತಿ ಕ್ಷೇಮ. (Travellers Cheque)ನಮಗೆ ಯಾವ ಊರಿನಲ್ಲಿ ಬೇಕೋ ಅಲ್ಲಿ ನಮ್ಮ ಬ್ಯಾಂಕಿನ ಶಾಖೆಯಲ್ಲಿ ಹಣವನ್ನು ನಗದೀಕರಿಸಿಕೊಳ್ಳಬಹುದು.

ಚೆಕ್ಕುಗಳು ವಿಧಿಮಾನ್ಯ ನೋಟುಗಳ ಹಾಗೆ ಸಮಾಜದಲ್ಲಿ ಅತ್ಯಂತ ವಿಸ್ತೃತ ರೀತಿಯಲ್ಲಿ ಓಡಾಡಲು ಬರುವಂತಿಲ್ಲ. ಇಂಗ್ಲೆಂಡಿನಲ್ಲಿ ನೋಟುಗಳಂತೆ ಚೆಕ್ಕುಗಳ ಪ್ರಸಾರವು ಅಧಿಕವಾಗಿರುವುದರಿಂದ ಬಹುತರವಾಗಿ ಎಲ್ಲಾ ಲೇವಾದೇವಿಯು ಅವುಗಳ ಮುಖಾಂತರವಾಗಿಯೇ ಬಗೆಹರಿಯುವುವು. ಇತ್ತೀಚಿನ ವರುಷಗಳಲ್ಲಿ ನಮ್ಮ ದೇಶದಲ್ಲಿಯೂ ಸಹ ವಿವಿಧ ವ್ಯವಹಾರ ಕ್ಷೇತ್ರದಲ್ಲಿ ಚೆಕ್ಕುಗಳ ಬಳಕೆಯು ಕ್ರಮೇಣ ಹೆಚ್ಚುತ್ತಲಿರುವುದು ಪ್ರೋತ್ಸಾಹಕಾರಕ ಸಂಗತಿಯಾಗಿದೆ. ಇದಕ್ಕೆ ಮುಖ್ಯ ಕಾರಣಗಳು ಯಾವುವೆಂದರೆ, ಪ್ರತಿಯೊಂದು ಬ್ಯಾಂಕೂ ತನ್ನ ಶಾಖೆಯನ್ನು ವಿಸ್ತರಿಸಿಕೊಂಡಿರುವುದರಿಂದಲೂ, ಚೆಕ್ಕುಗಳ ಮೂಲಕ ಹಣಪಾವತಿ ಮಾಡುವಂತೆ ವಿಶೇಷ ಪ್ರಚಾರ ಮಾಡಿರುವುದರಿಂದಲೂ, ಪ್ರತಿಯೊಂದು ಸಂಸ್ಥೆಯ ಲೆಕ್ಕ ಪರಿಶೋಧಕರು (Aditors) ಚೆಕ್ ಮೂಲಕವೇ ವ್ಯವಹರಿಸುವಂತೆ ಆದೇಶ ನೀಡುವುದರಿಂದಲೂ, ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಕೈಗೊಂಡ ಹಲವು ಕ್ರಮಗಳಿಂದಾಗಿ ಬ್ಯಾಂಕುಗಳಲ್ಲಿ ಜನರಿಗಿರಬೇಕಾದ ದೃಢನಂಬಿಕೆ ಹಾಗೂ ವಿಶ್ವಾಸ ಹೆಚ್ಚಿದರಿಂದ, ಶೀಘ್ರವಾಗಿ ಚೆಕ್ಕುಗಳ ಹಣ ಪಾವತಿಯಾಗುತ್ತ ಲಿರುವುದರಿಂದ ಈಗ ಎಲ್ಲರೂ ಚೆಕ್ಕುಗಳನ್ನೇ ಬಳಸುತ್ತಿದ್ದಾರೆ.

ಚೆಕ್ಕುಗಳ ಮೇಲಿನ ಬರವಣಿಗೆಯಲ್ಲಿ ಅಕ್ಷರಗಳು, ಮೊತ್ತ, ದಿನಾಂಕ ಸ್ಫುಟವಾಗಿರಬೇಕು. ಒಂದು ಚೆಕ್ಕು ಪುಸ್ತಕವು ಹಲವಾರು ಸಾಮಾನ್ಯವಾಗಿ ೧೦ ರಿಂದ ೧೦೦ ಮುದ್ರಿತ ಖಾಲಿ ಚೆಕ್ಕು ಹಾಳೆಗಳ ನಮೂನೆಯನ್ನು ಒಳಗೊಂಡಿರುತ್ತದೆ. ಗ್ರಾಹಕನು ಈ ಚೆಕ್ಕುಗಳ ನಮೂನೆಗಳನ್ನು ಬ್ಯಾಂಕಿನಿಂದ ಹಣವನ್ನು ಹಿಂತೆಗೆದುಕೊಳ್ಳುವಾಗ ಬಳಸುತ್ತಾನೆ. ಒಂದು ಚೆಕ್ಕು ಪುಸ್ತಕವು ಖಾಲಿಯಾದಾಗ ಒಂದು ಹೊಸ ಪುಸ್ತಕಕ್ಕಾಗಿ ಕೇಳಿಕೆಯನ್ನು ಸಲ್ಲಿಸಬಹುದು. ವಂಚನೆಯನ್ನು ತಡೆಯಲು ಮತ್ತು ಏಕರೂಪತೆಯನ್ನು ಕಾಪಾಡಲು ಪ್ರತಿಯೊಂದು ಬ್ಯಾಂಕೂ ತನ್ನದೇ ಆದ ವಿನ್ಯಾಸದಲ್ಲಿ ಚೆಕ್ಕು ಪುಸ್ತಕಗಳನ್ನು ರಚಿಸಿಕೊಂಡಿರುತ್ತದೆ. ಪ್ರತಿ ಹಾಗೂ ನಕಲು (Duplicate)ಗಳನ್ನೊಳಗೊಂಡಿರುವ ಖಾಲಿ ಮುದ್ರಿತ ಚೀಟಿಗಳ ಪುಸ್ತಕವಿರುತ್ತದೆ. ಗ್ರಾಹಕನು ಬ್ಯಾಂಕಿನಲ್ಲಿ ಹಣವನ್ನು ಠೇವಣಿಯಾಗಿ

ಇಡುವಾಗ ಆತನು ಒಳಪಾವತಿ ಚೀಟಿಗಳನ್ನು ತುಂಬಿ ಹಣವನ್ನು ಬ್ಯಾಂಕಿನ ನಗದು ಕೌಂಟರಿನಲ್ಲಿ ಹಾಜರು ಪಡಿಸಬೇಕಾಗುತ್ತದೆ. ಹಣವನ್ನು ಎಣಿಸಿ ಒಳಪಾವತಿ ಚೀಟಿಯಲ್ಲಿ ನಮೂದಿಸಲಾದ ಮೊತ್ತದೊಂದಿಗೆ, ನೋಟುಗಳ ಅಥವಾ ನಾಣ್ಯಗಳ ಮೌಲ್ಯದೊಂದಿಗೆ (Denomination) ಗೆ ಹೋಲಿಸಿ ಕ್ಯಾಷಿಯರನು ಚೀಟಿಯನ್ನು, ನಕಲು ಪ್ರತಿ, ಹಾಗೂ ಎರಡಕ್ಕೂ ಸಹಿ ಹಾಕುತ್ತಾನೆ. ನಂತರ ನಕಲು ಚೀಟಿಯನ್ನು ಗ್ರಾಹಕನಿಗೂ ಅಸಲು ಚೀಟಿಯನ್ನು ತನ್ನ ಲೆಕ್ಕ ಪತ್ರಗಳ ದಫ್ತರಕ್ಕೂ ಲಗತ್ತಿಸಿ ಇಟ್ಟುಕೊಳ್ಳುತ್ತಾನೆ. ಬ್ಯಾಂಕ್ ಕೊಟ್ಟ ನಕಲು ಚೀಟಿಯೇ ಗ್ರಾಹಕ ಕೊಟ್ಟ ಹಣಕ್ಕೆ ರಸೀತಿಯಾಗಿ ಉಳಿಯುತ್ತದೆ. ಒಂದು ವೇಳೆ ಗ್ರಾಹಕನು ನಗದು ಮತ್ತು ಚೆಕ್ಕುಗಳೆರಡನ್ನೂ ಬ್ಯಾಂಕಿನಲ್ಲಿ ಠೇವಣಿಯಾಗಿಟ್ಟರೆ ಆತನು ಒಂದು ನಗದಿಗೆ, ಇನ್ನೊಂದು ಚೆಕ್ಕಿಗೆ, ಹೀಗೆ ಎರಡು ಪ್ರತ್ಯೇಕ ಚೀಟಿಗಳನ್ನು ತುಂಬಬೇಕಾಗುತ್ತದೆ. ಚೆಕ್ಕುಪುಸ್ತಕ - ಪ್ರತಿಯೊಂದು ಬ್ಯಾಂಕೂ ತಾನೇ ಮುದ್ರಿಸಿದ ಚೆಕ್ಕು ಪುಸ್ತಕವನ್ನು ಹೊಂದಿರುತ್ತದೆ. ಗ್ರಾಹಕನು ಈ ಚೆಕ್ಕಿನ ಹಾಳೆಗಳನ್ನು ತಾನು ಹಣ ಹಿಂತೆಗೆದುಕೊಳ್ಳಲು ಬಳಸುತ್ತಾನೆ. ಒಂದು ಪುಸ್ತಕದಲ್ಲಿ ಸಾಮಾನ್ಯವಾಗಿ ೧೦ ರಿಂದ ೨೫ ಹಾಳೆಗಳಿರುತ್ತವೆ.

ಪಾಸ್ ಪುಸ್ತಕ : ಪಾಸ್ ಬುಕ್ ಎಂದರೆ ಬ್ಯಾಂಕಿನ ಪುಸ್ತಕದಲ್ಲಿರುವಂತೆ ಗ್ರಾಹಕನ ಖಾತೆಯ ಒಂದು ಪ್ರತಿಯಾಗಿದೆ. ಅದು ನಿಯತಕಾಲಿಕವಾಗಿ ಬ್ಯಾಂಕ್ ಮತ್ತು ಗ್ರಾಹಕರ ನಡುವೆ ಚಲಿಸುತ್ತಿರುತ್ತದೆ. ಗ್ರಾಹಕನ ಉಪಯೋಗಕ್ಕಾಗಿ ಬ್ಯಾಂಕರನು ಅದನ್ನು ಬರೆಯುತ್ತಾನೆ. ಅದು ಅದರಲ್ಲಿ ಮಾಡಲಾದ ದಾಖಲೆಗಳು ಸರಿಯಾಗಿವೆಯೋ ಇಲ್ಲವೊ ಎಂಬುದನ್ನು ಪರಿಶೀಲಿಸಿ ಏನಾದರೂ ತಪ್ಪುಗಳಿದ್ದಲ್ಲಿ ಅದನ್ನು ಬ್ಯಾಂಕರನ ಗಮನಕ್ಕೆ ತರಲಾಗುವುದು.

ಇತ್ತೀಚಿನ ದಿನಗಳಲ್ಲಿ ಭಾರತದ ಹೆಚ್ಚಿನ ಬ್ಯಾಂಕುಗಳು ಪಾಸ್ ಪುಸ್ತಕ ವನ್ನೊದಗಿಸುವ ಬದಲಾಗಿ ಬಿಡಿಯಾದ ಹಾಳೆಯಲ್ಲಿ ನಿಯತಕಾಲಿಕವಾಗಿ ಗ್ರಾಹಕರಿಗೆ ಬ್ಯಾಂಕು ವ್ಯವಹಾರಗಳ ಒಂದು ಹೇಳಿಕೆ ಪಟ್ಟಿಯನ್ನು ಒದಗಿಸುತ್ತಾರೆ. ಈ ಹೇಳಿಕೆ ಪಟ್ಟಿಯನ್ನು ಗ್ರಾಹಕನು ತಮ್ಮ ಲೆಕ್ಕ ಪತ್ರಗಳ ಉಲ್ಲೇಖಕ್ಕಾಗಿ ದಫ್ತರವಾಗಿಡಬಹುದು.

ಸಾಲಗಳ ನೀಡಿಕೆ : ಸಾಲ ಖಾತೆಯೊಂದನ್ನು ತೆರೆದು ಅದರ ಮೂಲಕ ಬ್ಯಾಂಕೊಂದು ಸಾಲ ಪಡೆಯುವವನಿಗೆ ಮುಂಗಡವನ್ನು ನೀಡುವ ವ್ಯವಸ್ಥೆಯೇ ಸಾಲ. ವ್ಯಕ್ತಿಯೊಬ್ಬನಿಗೆ ಸಾಲವನ್ನು ನೀಡಿದಾಗ, ಆತನ ಹೆಸರಿನಲ್ಲಿ ತೆರೆಯಲಾದ

ಸಾಲದ ಖಾತೆಯಲ್ಲಿ ಖರ್ಚಾಗಿ ತೋರಿಸಿ, ನಂತರ ಸಾಲ ಮೊತ್ತವನ್ನು ಆತನಿಗೆ ನಗದು ರೂಪದಲ್ಲಿ ಅಥವಾ ಆತನ ಚಾಲ್ತಿ ಖಾತೆಗೆ ಜಮಾ ಮಾಡಲಾಗುತ್ತದೆ. ಸಾಲದ ಮೊತ್ತವನ್ನು ಏಕಗಂಟಿನಲ್ಲಿ ನೀಡುವ ಹಾಗೆಯೇ ಸಾಲದ ಮರುಪಾವತಿಯನ್ನು ಕೂಡಾ ಸಾಮಾನ್ಯವಾಗಿ ಏಕಗಂಟಿನಲ್ಲಿ ಮಾಡಲಾಗುತ್ತದೆ. ಕೆಲವೊಮ್ಮೆ ಸಾಲವನ್ನು ಒಂದಕ್ಕಿಂತ ಹೆಚ್ಚು ವರ್ಷಗಳ ಅವಧಿಗೆ ನೀಡಬಹುದು. ಅಂತಹ ಸಾಲಗಳನ್ನು ಅವಧಿ ಸಾಲ ಎನ್ನುವರು. ಸಾಲವನ್ನು ಒಂದರಿಂದ ಏಳು ವರ್ಷಗಳ ಅವಧಿಯವರೆಗೆ ನೀಡಿದರೆ ಅದನ್ನು ಮಧ್ಯಮಾವಧಿ ಸಾಲವೆನಿಸುತ್ತದೆ. ಒಂದು ಸಾಲವನ್ನು ಸಹ ಆಧಾರ ಸಾಲಪತ್ರಗಳ ಅಥವಾ ವೈಯಕ್ತಿಕ ಆಧಾರದ ಮೇಲೆ ನೀಡಲಾಗುತ್ತದೆ. ಒಂದು ಸಾಲದ ವಿಷಯದಲ್ಲಿ ಸಾಲ ಮಂಜೂರುಗೊಳಿಸಿದ ಸಂಪೂರ್ಣ ಮೊತ್ತಕ್ಕೆ ಕಾಲಕಾಲಕ್ಕೆ ಬಡ್ಡಿಯನ್ನು ವಿಧಿಸಲಾಗುತ್ತದೆ. ಮತ್ತು ಖಾತೆಯಿಂದ ನಿಜವಾಗಿ ಹಿಂತೆಗೆದ ಮೊತ್ತವನ್ನು ಪರಿಗಣಿಸಲಾಗುವುದಿಲ್ಲ. ಸಾಲಗಳ ಮೇಲೆ ವಿಧಿಸಲಾಗುವ ಬಡ್ಡಿಯ ಓವರ್ ಡ್ರಾಫ್ಟ್ (ಮೀರೆಳೆತ) ಮತ್ತು ನಗದು ಉದ್ದರಿಗಳ ಮೇಲೆ ವಿಧಿಸಲಾಗುವ ಬಡ್ಡಿಗಿಂತ ಸ್ವಲ್ಪ ಕಡಿಮೆಯಾಗಿರುತ್ತದೆ. ಸಾಮಾನ್ಯವಾಗಿ ಒಬ್ಬ ಬ್ಯಾಂಕರನು ಎರಡು ಕಾರಣಗಳಿಗಾಗಿ ಸಾಲ ರೂಪದ ಮುಂಗಡವನ್ನು ನೀಡಬಯಸುತ್ತಾನೆ. ಮೊದಲನೆಯದಾಗಿ ಸಾಲವಾಗಿ ನೀಡಿದ ಪೂರ್ಣ ಮೊತ್ತದ ಮೇಲೆ ಆತನು ಬಡ್ಡಿಯನ್ನು ವಿಧಿಸಬಹುದು. ಎರಡನೆಯದಾಗಿ ಒಂದು ಸಾಲದ ವಿಷಯದಲ್ಲಿ ಮಾಡಬೇಕಾದ ಲೆಕ್ಕ ಪತ್ರ ಕೆಲಸಗಳೂ ತುಂಬಾ ಕಡಿಮೆ. ಏಕೆಂದರೆ ಸಾಲ ನೀಡಿಕೆ ಮತ್ತು ಮರುಪಾವತಿಯನ್ನು ಏಕ ಗಂಟಿನಲ್ಲಿ ಮಾಡಲಾಗುತ್ತದೆ. ಆದರೆ ಸಾಲ ಪಡೆಯುವವನಿಗೆ ಈ ವಿಧದ ಮುಂಗಡವು ಅಷ್ಟು ಒಳ್ಳೆಯದಲ್ಲ ಏಕೆಂದರೆ ಆತನು ಸಾಲ ಮಂಜೂರಾದ ಸಂಪೂರ್ಣ ಮೊತ್ತಕ್ಕೆ ಬಡ್ಡಿಯನ್ನು ನೀಡಬೇಕಾಗುತ್ತದೆ.

ಸಾಲಗಳ ನೀಡಿಕೆಯು ಬ್ಯಾಂಕುಗಳ ಮುಖ್ಯ ವ್ಯವಹಾರವಾಗಿದೆ. ಬ್ಯಾಂಕುಗಳ ಬಹುಭಾಗವನ್ನು ಸಾಲ ನೀಡಿಕೆಗಾಗಿ ಉಪಯೋಗಿಸಲಾಗುತ್ತಿದೆ. ಏಕೆಂದರೆ ಅವುಗಳು ಅತ್ಯಂತ ಲಾಭದಾಯಕವಾದ ಮೂಲಗಳಾಗಿವೆ.

ಓವರ್ ಡ್ರಾಫ್ಟ್‌ಗಳು (ಮೀರೆಳೆತ)

ಒಬ್ಬ ಚಾಲ್ತಿ ಖಾತೆದಾರನು ತನ್ನ ಖಾತೆಯಲ್ಲಿರುವ ಹಣಕ್ಕಿಂತ ಹೆಚ್ಚಿನ ಹಣವನ್ನು ಹಿಂತೆಗೆಯಲು ಬ್ಯಾಂಕು ಕಲ್ಪಿಸಿರುವ ಒಂದು ಸೌಕರ್ಯವೇ ಓವರ್ ಡ್ರಾಫ್ಟ್. ಒಂದು ಓವರ್ ಡ್ರಾಫ್ಟ್ ಸೌಕರ್ಯವನ್ನು ಗಿರಾಕಿಯೊಬ್ಬನು

ಸಾಂದರ್ಭಿಕವಾಗಿ ಮತ್ತು ತಾತ್ಕಾಲಿಕ ಹಣಕಾಸಿನ ಸಹಾಯಕ್ಕಾಗಿ ಮಾತ್ರಾ ಉಪಯೋಗಿಸಬಹುದು. ಅಂದರೆ ಬಂದು ಒಪ್ಪಿದ ಅವಧಿಗಾಗಿ ಈ ಸೌಕರ್ಯವನ್ನು ಸರಾಗವಾಗಿ ಗಿರಾಕಿಗಳು ಉಪಯೋಗಿಸಿಕೊಳ್ಳುತ್ತಾರೆ. ಅವಧಿಯು ಮುಗಿದ ನಂತರ ಗಿರಾಕಿಯು ತನ್ನ ಓವರ್ ಡ್ರಾಫ್ಟ್‌ನ್ನು ತುಂಬಿ ಕೊಡಬೇಕಾಗುತ್ತದೆ. ಓವರ್ ಡ್ರಾಫ್ಟ್‌ನ್ನೂ ಸಹ ಆಧಾರ ಅಥವಾ ವೈಯಕ್ತಿಕ ಮೌಲ್ಯದ ಮೇಲೆ ನೀಡಲಾಗುತ್ತದೆ. ಓವರ್ ಡ್ರಾಫ್ಟ್‌ನ ಮೊತ್ತದ ಮೇಲೆ ಮಾತ್ರಾ ಬಡ್ಡಿಯನ್ನು ವಿಧಿಸಲಾಗುವುದರಿಂದ ಇದು ಸಾಲ ಪಡೆದ ಗಿರಾಕಿಗಳಿಗೆ ತುಂಬಾ ಪ್ರಯೋಜನಕಾರಿ. ಆದರೆ ಬ್ಯಾಂಕಿನ ದೃಷ್ಟಿಯಿಂದ ಇದು ಅಷ್ಟೊಂದು ಪ್ರಯೋಜನಕಾರಿಯಲ್ಲ. ಏಕೆಂದರೆ ಬ್ಯಾಂಕುಗಳು ಕೇವಲ ಓವರ್ ಡ್ರಾಫ್ಟ್ ಮೊತ್ತದ ಮೇಲೆ ಬಡ್ಡಿಯನ್ನು ವಿಧಿಸಬಹುದು ಮತ್ತು ಓವರ್ ಡ್ರಾಫ್ಟ್ ಮಿತಿಯ ಸಂಪೂರ್ಣ ಮೊತ್ತವನ್ನು ತಮ್ಮಲ್ಲಿ ಸಿದ್ಧವಾಗಿಟ್ಟು ಕೊಳ್ಳಬೇಕು. ಆದ್ದರಿಂದ ಬ್ಯಾಂಕರನ ಆಸಕ್ತಿಯನ್ನು ಒಂದು ಶುಲ್ಕವನ್ನು ವಿಧಿಸುವ ಅಧಿಕಾರವಿದೆ.

ನಗದು ಉದ್ದರಿಗಳು : ನಗದು ಉದ್ದರಿ ಎಂಬುದು ಒಂದು ನಿಶ್ಚಿತ ಮಿತಿಯವರೆಗೆ ನಗದು ಉದ್ದರಿ ಎಂಬ ಖಾತೆಯೆಂಬ ಒಂದು ಪ್ರತ್ಯೇಕ ಖಾತೆಯ ಅಡಿಯಲ್ಲಿ ಒಬ್ಬ ವ್ಯಕ್ತಿಯು ಪಡೆಯಬಹುದಾದ ಆರ್ಥಿಕ ಸಹಾಯವೇ ನಗದು ಉದ್ದರಿ. ಇದಕ್ಕೆ ಚಾಲ್ತಿ ಖಾತೆಯ ಆವಶ್ಯಕತೆ ಇರುವುದಿಲ್ಲ. ನಗದು ಉದ್ದರಿಯಲ್ಲಿ ಸಾಲ ಪಡೆಯುವವನು ಸಾಲದ ಮೊತ್ತವನ್ನು ಏಕಗಂಟಿನಲ್ಲಿ ಹಿಂತೆಗೆಯಬೇಕಾಗಿಲ್ಲ. ಆತನು ಬೇಕಾದಂತೆ ಕಂತುಗಳಲ್ಲಿ ಹಿಂತೆಗೆಯಬಹುದು. ಮುಂದೆ ತನ್ನ ಕೈಯಲ್ಲಿರುವ ಉಳಿತಾಯದ ಹಣವನ್ನು ಕೂಡಾ ಆತನು ಈ ಖಾತೆಯಲ್ಲಿ ಠೇವಣಿಯಾಗಿಡಬಹುದು. ಹೀಗೆ ನಗದು ಉದ್ದರಿ ಖಾತೆಯು ಒಂದು ಚಾಲ್ತಿ ಖಾತೆಯಂತೆ ನಿರ್ವಹಿಸಲ್ಪಟ್ಟು ಹಣದ ಠೇವಣಿ ಮತ್ತು ಹಿಂತೆಗೆತಗಳೆರಡಕ್ಕೂ ಅವಕಾಶ ಕಲ್ಪಿಸುತ್ತದೆ.

ಭಾರತದಲ್ಲಿ ಕೂಡಾ, ವಾಣಿಜ್ಯ ಬ್ಯಾಂಕುಗಳು ಶೇಕಡ ೭೦% ಮುಂಗಡಗಳನ್ನು ನಗದು ಉದ್ದರಿಯ ರೂಪದಲ್ಲಿ ನೀಡುತ್ತವೆ. ನಗದು ಉದ್ದರಿಯ ಈ ಜನಪ್ರಿಯತೆಗೆ ಎರಡು ಕಾರಣಗಳಿವೆ. ಮೊದಲನೆಯದಾಗಿ ಬಂದು ನಗದು ಉದ್ದರಿಯಲ್ಲಿ ಸಾಲ ಪಡೆದವನು ನಗದು ಉದ್ದರಿಯ ಒಟ್ಟು ಮೊತ್ತದ ಮೇಲೆ ಬಡ್ಡಿಯನ್ನು ಪಾವತಿಸಬೇಕಾಗಿಲ್ಲ. ಆದರೆ ಕೇವಲ ಆತನು ಉಪಯೋಗಿಸಿದ ಮೊತ್ತದ ಮೇಲೆ ಉಪಯೋಗಿದ ನಿಜವಾದ ಅವಧಿಗೆ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ. ಎರಡನೆಯದಾಗಿ ಇದೊಂದು ದೀರ್ಘಾವಧಿ ಆರ್ಥಿಕ

ಸಹಾಯವಾಗಿದೆ. ಇದು ಬ್ಯಾಂಕರನಿಗೆ ಮಾತ್ರಾ ಅಪ್ರಯೋಜನಕಾರಿಯಾಗಿದೆ. ಏಕೆಂದರೆ ಆತನು ಸಾಲ ಪಡೆದವನು, ಹಿಂತೆಗೆದ ಮೊತ್ತದ ಮೇಲೆ ಮಾತ್ರಾ ಬಡ್ಡಿಯನ್ನು ವಿಧಿಸಬಹುದು ಮತ್ತು ಮಂಜೂರು ಮಾಡಿದ ನಗದು ಉದ್ದರಿಯ ಸಂಪೂರ್ಣ ಮೊತ್ತವನ್ನು ಆತನು ತನ್ನಲ್ಲಿ ಸಿದ್ಧವಾಗಿಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ಬ್ಯಾಂಕರನಿಗೆ ಆದಾಯದಲ್ಲಿ ಉಂಟಾಗುವ ನಷ್ಟ ಪರಿಹಾರಕ್ಕಾಗಿ ಓವರ್ ಡ್ರ್ಯಾಫ್ಟ್‌ನಲ್ಲಿರುವಂತೆಯೇ ಉಪಯೋಗಿಸಲ್ಪಡದ ನಗದು ಉದ್ದರಿಯ ಭಾಗದ ಮೇಲೆ ಶುಲ್ಕವನ್ನು ವಿಧಿಸುವ ಅಧಿಕಾರವಿರುತ್ತದೆ.

ಹುಂಡಿಗಳ ವಟಾವಣೆ : ಒಬ್ಬ ಅರ್ಹ ಗಿರಾಕಿಯಿಂದ ಒಂದು ಬ್ಯಾಂಕು ೬೦ ಅಥವಾ ೯೦ ದಿನಗಳ ಅವಧಿಯ ವಿನಿಮಯ ಪತ್ರವೊಂದನ್ನು ಪಡೆದು ಆತನಿಗೆ ಅಥವಾ ಆತನ ಚಾಲ್ತಿ ಖಾತೆಗೆ ಆ ವಿನಿಮಯ ಪತ್ರ ಅಥವಾ ಹುಂಡಿಯ ಮೌಲ್ಯವನ್ನು ಪಾವತಿಸುವ ಒಂದು ವ್ಯವಸ್ಥೆಯೇ ಹುಂಡಿಗಳ ಮುರಿದುಕೊಳ್ಳುವಿಕೆ. ಹುಂಡಿಯ ಸಮ್ಮತಿದಾರನಿಂದ ಹುಂಡಿಯು ಮುಖಬೆಲೆಯನ್ನು ಪಡೆಯುತ್ತದೆ. ಒಂದು ವೇಳೆ ಸಮ್ಮತಿದಾರನಿಂದ ಹುಂಡಿಯು ಅಮಾನ್ಯವಾದರೆ ಬ್ಯಾಂಕು ಹುಂಡಿಯ ಮೊತ್ತವನ್ನು ಮುರಿಸಿಕೊಂಡಾತನಿಂದ ವಸೂಲಿ ಮಾಡುತ್ತದೆ. ಈ ರೀತಿಯ ಸಹಾಯವನ್ನು ಸಾಮಾನ್ಯವಾಗಿ ಒಂದು ಒಪ್ಪಿದ ಮಿತಿಯವರೆಗೆ ನೀಡಲಾಗುತ್ತದೆ. ಮುರಿಸಿಕೊಂಡ ಹುಂಡಿಯ ಸರಕುಗಳ ಅಧಿಕಾರ ಪತ್ರದೊಂದಿಗಿರುವ ಹುಂಡಿಯಾಗಿರಬಹುದು ಅಥವಾ ಒಂದು ಶುದ್ಧ ಹುಂಡಿಯಾಗಿರಬಹುದು. ಈ ಆರ್ಥಿಕ ಸಹಾಯಕ್ಕೆ ವಿಧಿಸಲಾಗುವ ಬಡ್ಡಿಯನ್ನು ಸೋಡಿ ಎನ್ನುವರು. ಮತ್ತು ಇದನ್ನು ಹುಂಡಿಯ ಬಾಕಿ ಉಳಿದಿರುವ ಅವಧಿಯ ಮೇಲೆ ಮುಖಬೆಲೆಯ ಮೇಲೆ ವಿಧಿಸಲಾಗುತ್ತದೆ. ಒಂದು ಸಾಲದ ಮೇಲಿನ ಬಡ್ಡಿಯನ್ನು ಬ್ಯಾಂಕರನು ಒಂದು ನಿರ್ದಿಷ್ಟ ಅವಧಿಯು ಮುಗಿದ ನಂತರ ವಸೂಲು ಮಾಡುತ್ತಾನೆ. ಆದರೆ ಹುಂಡಿಗಳ ವಟಾವಣೆಯ ವಿಷಯದಲ್ಲಿ ಬಡ್ಡಿ ಅಥವಾ ಸೋಡಿಯನ್ನು ಹುಂಡಿಗಳ ವಟಾವಣೆಯ ಸಂದರ್ಭದಲ್ಲಿಯೇ ವಸೂಲು ಮಾಡಲಾಗುತ್ತದೆ.

ಬ್ಯಾಂಕ್ ಮತ್ತು ಗ್ರಾಹಕನ ಸಂಬಂಧ


ಗ್ರಾಹಕನೆಂದರೆ ಆಯಾ ಬ್ಯಾಂಕಿನೊಡನೆ ವ್ಯವಹರಿಸುವ ವ್ಯಕ್ತಿ ಎಂದರ್ಥ. ಸಾಮಾನ್ಯವಾಗಿ ಒಂದು ಬ್ಯಾಂಕಿನಲ್ಲಿ ಖಾತೆಯಿರುವ ವ್ಯಕ್ತಿ ಆ ಬ್ಯಾಂಕಿನ ಗ್ರಾಹಕ ಎಂಬುದಾಗಿ ಪರಿಗಣಿಸಲ್ಪಡುತ್ತಾನೆ. ಆದರೆ ಒಬ್ಬ ವ್ಯಕ್ತಿ ಬ್ಯಾಂಕಿನಲ್ಲಿ ಖಾತೆಯನ್ನು

ತೆರೆದ ತಕ್ಷಣ ಅವನನ್ನು ಗ್ರಾಹಕ ಎಂದು ಕರೆಯಿಸಿಕೊಳ್ಳುವಂತಿಲ್ಲ. ಹಾಗೆ ಕರೆಯಿಸಿಕೊಳ್ಳಬೇಕಾದರೆ ಬ್ಯಾಂಕರನೊಡನೆ ಸ್ವಲ್ಪ ಕಾಲವಾದರೂ ಹಣದ ವ್ಯವಹಾರ ನಡೆಸಿರಬೇಕು. ಆದರೆ ಕೆಲವು ಅರ್ಥಶಾಸ್ತ್ರಜ್ಞರ ಪ್ರಕಾರ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವವನ ವ್ಯವಹಾರ ಸಂಬಂಧದ ಕಾಲವು ಎಷ್ಟೇ ಇರಲಿ ಅದು ಗೌಣ. ಆದರೆ ಬ್ಯಾಂಕಿನ ಸಿಬ್ಬಂದಿ ಒಬ್ಬ ವ್ಯಕ್ತಿಯ ಹಣವನ್ನು ಠೇವಣಿಯಾಗಿ ಪಡೆದು ಆತನು ಚೆಕ್ಕುಗಳನ್ನು ಬರೆದಾಗ, ಆತನ ಖಾತೆಯಲ್ಲಿ ಶಿಲ್ಕು ಹಣವಿರುವವರಿಗೆ ಅಂತಹ ಖಾತೆಯನ್ನು ಅವನ ಹೆಸರಿನಲ್ಲಿ ತೆರೆದ ತಕ್ಷಣ ಆತನು ಬ್ಯಾಂಕಿನ ಗ್ರಾಹಕನೆಂದು ತಿಳಿಯಲ್ಪಡುವನು. ಬ್ಯಾಂಕ್ ಖಾತೆಗೆ ಮೊದಲನೆ ಚೆಕ್ಕಿನ ಹಣ ಜಮಾ ಆದ ತಕ್ಷಣ ಮತ್ತು ವಸೂಲಿಯ ಬಗೆಗೆ ಅದು ಬ್ಯಾಂಕರನಿಂದ ಸ್ವೀಕರಿಸಲ್ಪಟ್ಟ ತಕ್ಷಣ ಬ್ಯಾಂಕರ್ ಮತ್ತು ಗ್ರಾಹಕನ ಸಂಬಂಧ ಆರಂಭವಾಗುತ್ತದೆ.

ಬ್ಯಾಂಕರನು ತನ್ನ ಗ್ರಾಹಕನಾಗಬಯಸುವ ವ್ಯಕ್ತಿಯ ಪ್ರಾಮಾಣಿಕತೆಯ ಕುರಿತು ಯೋಗ್ಯ ಪ್ರಸ್ತಾಪಮಾಡಿ ಅರ್ಹ ವ್ಯಕ್ತಿಯಿಂದ ಅಂದರೆ ತನ್ನ ಮತ್ತೋರ್ವ ಗ್ರಾಹಕನಿಂದ ಅವನ ಪರಿಚಯ ಪಡೆದೇ ಅವನ ಹೆಸರಿನಲ್ಲಿ ಖಾತೆಯಿಂದ ತೆರೆಯುತ್ತಾನೆ. ಒಬ್ಬ ವ್ಯಕ್ತಿ ಯಾವ ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುತ್ತಾನೋ ಆತನು ಆ ಬ್ಯಾಂಕಿನ ಗ್ರಾಹಕವರ್ಗದಲ್ಲಿ ಸೇರ್ಪಡೆಯಾಗುತ್ತಾನೆ.

ಬ್ಯಾಂಕಿನ ಪ್ರಧಾನ ಕಾರ್ಯಭಾರ ಠೇವಣಿ ಸ್ವೀಕಾರ ಮತ್ತು ಬಡ್ಡಿಗಾಗಿ ಹಣವನ್ನು ಎರವಲಾಗಿ ಕೊಡುವುದು ಅಥವಾ ಬಂಡವಾಳ ಹೂಡಿಕೆ, ಉತ್ಪಾದಕ ಚಟುವಟಿಕೆಗಳಿಗಾಗಿ ಸೂಕ್ತ ಭದ್ರತೆಯ ಮೇಲೆ ಗ್ರಾಹಕರಿಗೆ ಹಣಕಾಸಿನ ನೆರವು ನೀಡುವುದು, ಬಂಡವಾಳ ಹೂಡಿಕೆ ಇವು ಬ್ಯಾಂಕಿಂಗ್ ವ್ಯವಹಾರ ಸ್ವರೂಪದ ಪ್ರಧಾನ ಕಾರ್ಯಗಳು. ಇದರ ಜೊತೆಗೆ ಪೂರಕ ಕಾರ್ಯಗಳು ಯಾವುವೆಂದರೆ ಬೆಲೆಬಾಳುವ ಒಡವೆ ವಸ್ತುಗಳನ್ನು ರಕ್ಷಣೆಗಾಗಿ ಲಾಕರ್‌ಗಳಲ್ಲಿ, ತನ್ನ ವಿಮಾಕಂತಿನ ಸಲುವಳಿ ಮಾಡುವುದು.

ಹಣಕಾಸು ಸಂಸ್ಥೆಗಳು


ಭಾರತೀಯ ರಿಸರ್ವ್ ಬ್ಯಾಂಕ್
ವಾಣಿಜ್ಯ ಬ್ಯಾಂಕುಗಳು
ಸಹಕಾರ ಸಂಘಗಳು
ಇತರ ಸಂಸ್ಥೆಗಳು
ಖಾಸಗೀ ಕ್ಷೇತ್ರ
ಸಾರ್ವಜನಿಕ ಕ್ಷೇತ್ರ
ಗ್ರಾಮ ಷೆಡ್ಯೂಲ್ ಬ್ಯಾಂಕುಗಳು
ಷೆಡ್ಯೂಲ್ ಬ್ಯಾಂಕುಗಳು
ವಿದೇಶೀ ಬ್ಯಾಂಕುಗಳು
ಭಾರತೀಯ ಸ್ಟೇಟ್ ಬ್ಯಾಂಕ್
ಸಹಾಯಕ ಬ್ಯಾಂಕುಗಳು
ರಾಷ್ಟ್ರೀಕೃತ ಬ್ಯಾಂಕುಗಳು
ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು
ರಾಜ್ಯ ಭೂ ಬ್ಯಾಂಕ್
ಜಿಲ್ಲಾ ಭೂ ಅಭಿವೃದ್ಧಿ ಬ್ಯಾಂಕುಗಳು
ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು
ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್
ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು
ಪ್ರಾಥಮಿಕ ವ್ಯವಸಾಯ ಸಾಲ ಬ್ಯಾಂಕು
ರೈತ ಸೇವಾ ಸಂಘಗಳು
ನಗರಾಂತರ ಸಹಕಾರ ಬ್ಯಾಂಕ್ ಅರ್ಬನ್ ಬ್ಯಾಂಕುಗಳು
ಖಾಸಗಿ ಚೀಟಿ, ನಿಧಿ, ಖರೀದಿ ಸಂಸ್ಥೆಗಳು ಹೂಡಿಕೆ ಕಂಪನಿಗಳು ಸ್ಟಾಕ್ ಎಕ್ಸ್‌ಚೇಂಜ್
ಸರ್ಕಾರೀ ರಾಷ್ಟ್ರೀಯ ಉಳಿತಾಯ ಯೋಜನಾ ನಿಗಮ, ಅಂಚೆ ಉಳಿತಾಯ ಬ್ಯಾಂಕ್‌ಗಳು, ಪ್ರಾವಿಡೆಂಟ್ ಫಂಡುಗಳು

ಬ್ಯಾಂಕಿನಿಂದ ಪ್ರಯೋಜನಗಳು

೧. ವ್ಯಕ್ತಿಯ ಉಳಿತಾಯದ ಹಣವು ಸುರಕ್ಷಿತವಾಗಿ ಬ್ಯಾಂಕಿನಲ್ಲಿರುತ್ತದೆ.

೨. ತಾನು ಇಟ್ಟ ಹಣಕ್ಕಾಗಿ ಬಡ್ಡಿಯನ್ನು ಪಡೆಯಬಹುದು.

೩. ಆತನು ನಗದು ವ್ಯವಹಾರವಿಲ್ಲದೆ ಚೆಕ್ಕುಗಳ ಮೂಲಕ ಪಾವತಿಯನ್ನು ಮಾಡಬಹುದು.

೪. ಆತನು ಸಾಲ, ಮೀರೆಳೆತ (ಓವರ್ ಡ್ರಾಫ್ಟ್) ನಗದು ಉದ್ದರಿ, ಅಥವಾ ಹುಂಡಿ, ವಟಾವಣೆಗಳ ಮೂಲಕ ತನ್ನ ಬ್ಯಾಂಕಿನಿಂದ ಮುಂಗಡವನ್ನು ಪಡೆಯಬಹುದು.

೫. ಚೆಕ್ಕುಗಳು ಹಣ ಸಂದಾಯದ ಪಾವತಿ ಸಾಕ್ಷಿಗಳಾಗಿ ವರ್ತಿಸುತ್ತವೆ.

೬. ಗ್ರಾಹಕನು ಚೆಕ್ಕುಗಳು, ಹುಂಡಿಗಳು, ವಚನಪತ್ರಗಳು, ಬಡ್ಡಿ ಮತ್ತು ಲಾಭಾಂಶ ಇತ್ಯಾದಿಗಳನ್ನು ವಸೂಲಿ ಮಾಡಲು ಬ್ಯಾಂಕಿನ ಸೇವೆಯನ್ನು ಪಡೆಯಬಹುದು.

೭. ಹೂಡಿಕೆಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಆತನು ಬ್ಯಾಂಕಿನ ಸಲಹೆಗಳನ್ನು ಪಡೆಯಬಹುದು.

೮. ಆತನು ತನ್ನ ಬ್ಯಾಂಕಿನಿಂದ ಡ್ರಾಫ್ಟ್ (ಕರಡು ಪ್ರತಿ) ಅಂಚೆ ವರ್ಗಾವಣೆಗಳು, ತಂತಿ ವರ್ಗಾವಣೆಗಳು ಇತ್ಯಾದಿ ರವಾನಾ ಸೌಕರ್ಯಗಳನ್ನು ಪಡೆಯಬಹುದು.

೯. ಗ್ರಾಹಕನು ತನ್ನ ಬ್ಯಾಂಕನ್ನು ನಿರ್ವಾಹಕನಾಗಿ ಮತ್ತು ಪ್ರತಿನಿಧಿಯಾಗಿ ನೇಮಿಸಿಕೊಳ್ಳಬಹುದು.

೧೦. ಆದಾಯ ತೆರಿಗೆ ಪ್ರಾಧಿಕಾರಗಳೊಂದಿಗಿನ ಪತ್ರವ್ಯವಹಾರಕ್ಕಾಗಿ ಮತ್ತು ಪಾಸ್ ಪೋರ್ಟ್ ಹಾಗೂ ಪ್ರಮಾಣದ ಟೀಕೀಟುಗಳನ್ನು ಪಡೆಯುವುದಕ್ಕೆ ಬ್ಯಾಂಕಿನ ಸೇವೆಯನ್ನು ಪಡೆದುಕೊಳ್ಳಬಹುದು.

೧೧. ಆತನು ತನ್ನ ಬೆಲೆಬಾಳುವ ವಸ್ತುಗಳನ್ನು ತನ್ನ ಬ್ಯಾಂಕಿನ ಭದ್ರತಾ ಕೋಶದಲ್ಲಿ ಠೇವಣಿಯಾಗಿಡಬಹುದು.

೧೨. ಬ್ಯಾಂಕಿನಿಂದ ಸಾಲವನ್ನು ಪಡೆದು ತನ್ನ ವ್ಯಾಪಾರೋದ್ಯಮವನ್ನು ಯಶಸ್ವಿಯಾಗಿ ನಡೆಸಬಹುದು.

ಸುರಕ್ಷಿತ ಮುಂಗಡಗಳು

ಸಾಮಾನ್ಯವಾಗಿ ಸಾಲವನ್ನು ಕೇಳಬಯಸುವವನು ತೀರಾ ಆಶಾವಾದಿಯಾಗಿರುವನು. ಹಣ ದೊರಕಿಸುವ ಕಾಲಕ್ಕೆ ಆತನು ನಿಶ್ಚಯಿಸಿದ ಧ್ಯೇಯ ಧೋರಣೆಗಳು ಹಣಸಿಕ್ಕ ಕೂಡಲೇ ಬದಲಾಗಬಹುದು. ಬ್ಯಾಂಕರನು ಸೂಚಿಸಿದ ಎಲ್ಲಾ ಷರತ್ತುಗಳಿಗೆ ಮೊದಲು ಒಪ್ಪಿಕೊಂಡು ನಂತರ ಆ ಷರತ್ತುಗಳನ್ವಯ ಅವನು ನಡೆಯದೇ ಇರಬಹುದು. ಆದುದರಿಂದ ಬ್ಯಾಂಕರನು ಆತನು ಎಷ್ಟರ ತನ್ನ ವಚನವನ್ನು ಪಾಲಿಸಲು ಸಮರ್ಥ ಎಂಬುದನ್ನು ನಿಶ್ಚಯಿಸಿಕೊಳ್ಳುವುದು ಆವಶ್ಯಕ. ಇದನ್ನು ನಿಶ್ಚಯಿಸುವ ಕಾಲಕ್ಕೆ ಆ ಮನುಷ್ಯನು ಯಾವ ಬಗೆಯ ವ್ಯವಹಾರ, ವ್ಯವಸಾಯದಲ್ಲಿ ನಿರತನಾಗಿರುವನು, ಆತನ ಉತ್ಪನ್ನ ಎಷ್ಟು, ಆತನಿಗೆ ಇತರ ಏನಾದರೂ ಸಂಪನ್ಮೂಲಗಳು ಇರುವುವೋ ಎಂಬುದರ ಬಗ್ಗೆ ಬ್ಯಾಂಕರನು ವಿಚಾರಿಸದೆ ಇರುವಂತಿಲ್ಲ. ಗ್ರಾಹಕನ ಚಾರಿತ್ರ್ಯ ಹಾಗೂ ಪ್ರಾಮಾಣಿಕತನವೂ ಬ್ಯಾಂಕರನ ಸಾಲ ನೀಡಿಕೆಯಲ್ಲಿಯ ಗಮನಾರ್ಹ ಅಂಶಗಳು. ಕೊಟ್ಟ ಸಾಲವು ಕರಾರಿನನ್ವಯ ಸುರಕ್ಷಿತವಾಗಿ ಮರಳಿ ಬರಬೇಕು ಎಂಬುದೇ ಬ್ಯಾಂಕಿಂಗ್ ಉದ್ಯಮದ ಸದೃಢತೆಯ ಮೂಲ ಸಿದ್ಧಾಂತ. ವ್ಯವಸಾಯ, ವ್ಯಾಪಾರ, ಉದ್ದಿಮೆ ಅಥವಾ ಯಾವುದೇ ವೃತ್ತಿಯಲ್ಲಿ ನಿರತನಾಗಿರುವ ಅಥವಾ ನಿರತನಾಗಬಯಸುವ ಮತ್ತು ಸಾಧನ ಸಂಪತ್ತು ಹೊಂದಿರುವ ವ್ಯಕ್ತಿಗಳಿಗೆ ಬ್ಯಾಂಕರನು ಸಾಲವನ್ನು ನೀಡುತ್ತಾನೆ. ನೀಡಿದ ಸಾಲದ ಸುರಕ್ಷತೆಯನ್ನು ನಿರ್ಣಯಿಸುವ ಅಂಶವು ಸಾಲದ ಮೊತ್ತವನ್ನು ಮರುಪಾವತಿ ಮಾಡುವ ಸಾಲಗಾರನ ಸಾಮರ್ಥ್ಯವನ್ನು ಅವಲಂಬಿಸಿದೆ.

ಉಳಿತಾಯ ಠೇವಣಿ ಖಾತೆಗಳು (ಸೇವಿಂಗ್ಸ್ ಬ್ಯಾಂಕ್ ಅಕೌಂಟ್ಸ್)

ಬ್ಯಾಂಕ್ ಎಂದರೆ ಉಳಿತಾಯ ಖಾತೆಯ ಪರಿಚಯವೇ ಜನರಿಗೆ ಹೆಚ್ಚಾಗಿದೆ. ಫಿಕ್ಸೆಡ್ ಡಿಪಾಸಿಟ್‌ನಲ್ಲಿ ಹಣವನ್ನು ಇಟ್ಟರೆ ಬೇಕೆಂದಾಗ ತೆಗೆಯಲು ಸಾಧ್ಯವಿರುವುದಿಲ್ಲವಾದ್ದರಿಂದ ಉಳಿತಾಯ ಠೇವಣಿ ಖಾತೆಗಳೇ ಹೆಚ್ಚು ಪ್ರಚಲಿತ. ಅಲ್ಲದೆ ಚಾಲ್ತಿ ಖಾತೆ (Current account) ತೆರೆಯಲು ಪ್ರಥಮ ಅಥವಾ ಪ್ರಾರಂಭಿಕ ಠೇವಣಿ ಇಡಲು ಸಾಕಷ್ಟು ಹಣವಿಲ್ಲದಿರಬಹುದಾದ್ದರಿಂದಲೂ ಸಾಮಾನ್ಯ ಜನರಿಗೆ ಉಳಿತಾಯ ಠೇವಣಿ ಖಾತೆಯೇ ಹೆಚ್ಚು ಉಪಯುಕ್ತವು. ಇವುಗಳ ಮೇಲಿರುವ ನಿಯಮಗಳಾದರೂ ಈ ಖಾತೆಯನ್ನಿಡಲು ಹೆಚ್ಚು ಅನುಕೂಲವಾಗಿದೆ. ಹತ್ತಿಪ್ಪತ್ತು ರೂಪಾಯಿಗಳನ್ನು ಉಳಿಸುವ ಸಾಮಾನ್ಯವ್ಯಕ್ತಿಯು ಈ ಖಾತೆಯನ್ನು ಇಡಬಹುದು.

ಇತ್ತೀಚಿನ ವರುಷಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸುತ್ತಿರುವ ಬ್ಯಾಂಕಿಂಗ್ ಸೌಲಭ್ಯಗಳ ವಿಸ್ತರಣೆ, ವಿದ್ಯಾರ್ಥಿಗಳಲ್ಲಿ ಮತ್ತು ಶ್ರೀಸಾಮಾನ್ಯರಲ್ಲಿ ವೃದ್ಧಿಸುತ್ತಿರುವ ಬ್ಯಾಂಕಿಂಗ್ ಪ್ರವೃತ್ತಿ ಇವುಗಳಿಂದಾಗಿ ಬ್ಯಾಂಕುಗಳಲ್ಲಿ ಉಳಿತಾಯ ಠೇವಣಿಗಳ ಮೊತ್ತ ಅಧಿಕವಾಗುತ್ತ ಬಂದಿದೆ. ನಾವು ಖರ್ಚು ಮಾಡುವ ಹಣದ ಮೇಲೆ ಹತೋಟಿಯನ್ನು ಹೊಂದಿರದಿದ್ದರೆ ಎಷ್ಟೋ ವೇಳೆ ಉಳಿತಾಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಮತ್ತು ಸೂಕ್ತ ಕಾಲದಲ್ಲಿ ಸಂಯಮದಿಂದ ಮಿತವ್ಯಯ ಮಾಡಿದರೆ ಮಾತ್ರ ಉಳಿತಾಯ ಸಾಧ್ಯ ಎಂಬ ನಿತ್ಯ ತತ್ವದ ಅರಿವು ಸಾಮಾನ್ಯ ಜನರಲ್ಲೂ ಮೂಡುತ್ತಿರುವುದಕ್ಕೆ ಉಳಿತಾಯ ಖಾತೆಯ ಜನಪ್ರಿಯತೆಯೇ ನಿದರ್ಶನ.

ಸಾಮಾನ್ಯ ಜನರಲ್ಲಿ ಉಳಿತಾಯ ಅಭ್ಯಾಸವನ್ನು ಪ್ರೋತ್ಸಾಹಿಸುವುದು ಉಳಿತಾಯ ಠೇವಣಿಯ ಉದ್ದೇಶ. ಎಲ್ಲಾ ವಾಣಿಜ್ಯ ಬ್ಯಾಂಕುಗಳೂ ಉಳಿತಾಯ ಠೇವಣಿಯನ್ನು ಸ್ವೀಕರಿಸುತ್ತದೆ. ಕೇವಲ ಐದು ಅಥವಾ ಹತ್ತು ರೂಪಾಯಿಗಳನ್ನು ಕೊಟ್ಟು ಠೇವಣಿ ಖಾತೆಯನ್ನು ತೆರೆಯಬಹುದು. ಒಂದು ಬ್ಯಾಂಕಿನಲ್ಲಿ ಒಂದು ವ್ಯಕ್ತಿಯ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ಇಡಲಾಗದು. ಅಲ್ಪ ಪ್ರಮಾಣದ ಹಣವನ್ನೂ ಸಹ ಜಮಾ ಕಟ್ಟುತ್ತಾ ಹೋಗಲು ಸೇವಿಂಗ್ಸ್ ಬ್ಯಾಂಕಿನಲ್ಲಿ ಅವಕಾಶವಿದೆ. ಉಳಿತಾಯ ಠೇವಣಿದಾರನಿಗೂ ಚೆಕ್ಕುಗಳನ್ನು ಬರೆಯುವ ಸೌಲಭ್ಯಗಳನ್ನು ಗ್ರಾಹಕನು ಆವಶ್ಯಕ ಮೊಬಲಗನ್ನು ಜಮಾಮಾಡಿ ತನ್ನ ಹೆಸರಿನಲ್ಲಿ ಉಳಿತಾಯ, ಚಾಲ್ತಿ ಅಥವಾ ಠೇವಣಿ ಖಾತೆಯನ್ನು ತೆರೆಯಬೇಕು.

ಒಬ್ಬಾತನು ಬ್ಯಾಂಕಿಂಗ್ ವ್ಯವಹಾರಗಳಲ್ಲದೆ ಬೇರೆ ಯಾವ ಕಾರ್ಯಗಳಿಗಾಗಲೀ ಬ್ಯಾಂಕಿಗೆ ಎಷ್ಟೇ ಸಲ ಭೇಟಿಕೊಟ್ಟರೂ ಆತನು ಗ್ರಾಹಕನಾಗಲಾರನು. ಕೇವಲ ವ್ಯಕ್ತಿಯಷ್ಟೇ ಅಲ್ಲದೆ ಪಾಲುದಾರಿಕೆ ಸಂಸ್ಥೆ, ಸಂಘ-ಸಂಸ್ಥೆ, ಸಹಕಾರೀ ಸಂಘ, ವಾಣಿಜ್ಯ ಸಂಸ್ಥೆಗಳೂ ಸಹ ಬ್ಯಾಂಕಿನ ಗ್ರಾಹಕರಾಗಬಹುದು. ಗ್ರಾಹಕ ಎನ್ನುವ ಶಬ್ದ ಬ್ಯಾಂಕಿಗೂ ಅನ್ವಯವಾಗುತ್ತದೆ. ಒಂದು ಬ್ಯಾಂಕು ಮತ್ತೊಂದು ಬ್ಯಾಂಕಿನಲ್ಲಿ ಖಾತೆ ಇಟ್ಟಾಗ ಆ ಬ್ಯಾಂಕು ಖಾತೆ ಇಟ್ಟ ಬ್ಯಾಂಕಿನ ಗ್ರಾಹಕವಾಗುವುದು.

ಸೌಲಭ್ಯಗಳನ್ನು ಬ್ಯಾಂಕುಗಳು ನೀಡಿವೆ. ಅಂದರೆ ಚಾಲ್ತಿ ಖಾತೆಯಲ್ಲಿರು ವಂತೆಯೇ ಈ ಖಾತೆಯಲ್ಲಿಯೂ ಸಹ ಚೆಕ್ಕು ಪುಸ್ತಕವನ್ನು ಕೊಡುವ ಪದ್ಧತಿಯನ್ನು

ಎಲ್ಲಾ ಬ್ಯಾಂಕುಗಳು ಜಾರಿಗೆ ತಂದಿವೆ. ಆದರೆ ಉಳಿತಾಯ ಠೇವಣಿದಾರನಿಗೆ ಓವರ್ ಡ್ರಾಫ್ಟ್ (ಮೀರೆಳೆತ)ದ ಸೌಲಭ್ಯವಿಲ್ಲ. ಆದರೆ ಗ್ರಾಹಕನಾಗಿ ತನ್ನ ಬ್ಯಾಂಕ್‌ನಿಂದ ಪಡೆಯುವ ಎಲ್ಲಾ ಸೌಲಭ್ಯ - ಸೇವೆಗಳನ್ನು ಉಳಿತಾಯ ಠೇವಣಿದಾರನು ಪಡೆಯಬಹುದು. ಉಳಿತಾಯ ಠೇವಣಿಖಾತೆಯಲ್ಲಿರುವ ಹಣವನ್ನು ತೆಗೆಯಲಿಕ್ಕೆ ಕೆಲವು ನಿರ್ಬಂಧಗಳಿರುವ ಮೂಲಕ ಮನಬಂದಂತೆ ಖರ್ಚುಮಾಡಲು ಸಾಧ್ಯವಾಗುವುದಿಲ್ಲ. ಹೀಗೆ ಕೂಡಿಟ್ಟ ಹಣವು ವಿಮೆಯ ಕಂತನ್ನು ತುಂಬುವುದಕ್ಕಾಗಲೀ, ಆಪತ್ಕಾಲಕ್ಕಾಗಿಯಾಗಲೀ ಉಪಯೋಗಕ್ಕೆ ಬರುತ್ತದೆ, ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಇಡಬಹುದಾದ ಠೇವಣಿಯ ಗರಿಷ್ಠ ಮೊತ್ತಕ್ಕೆ ಮಿತಿಯಿಲ್ಲ. ಐದು ರೂಪಾಯಿಗಳಿಂದ ಹಿಡಿದು ಎಷ್ಟು ಬೇಕಾದರೂ ಅಷ್ಟು ಖಾತೆಯಲ್ಲಿ ಠೇವಣಿಯಾಗಿಡಬಹುದು.

ಉಳಿತಾಯ ಠೇವಣಿಯ ಮೇಲೆ ಬಡ್ಡಿ ನೀಡಲಾಗುತ್ತದೆ. ಆದರೆ ಫಿಕ್ಸೆಡ್ ಠೇವಣಿಯ ದರಕ್ಕಿಂತ ಕಡಿಮೆ. ಒಂದು ಗೊತ್ತಾದ ಅವಧಿಯವರೆಗೆ ಫಿಕ್ಸೆಡ್ ಡಿಪಾಸಿಟ್ ಹಣವನ್ನು ಠೇವಣಿದಾರ ವಾಪಸು ಪಡೆಯುವುದಿಲ್ಲವೆಂಬ ಭರವಸೆ ಇರುವುದರಿಂದ ಬ್ಯಾಂಕು ಈ ಹಣವನ್ನು ದೀರ್ಘ ಅವಧಿಯಲ್ಲಿ ಹೂಡಿಕೆ ಮಾಡಿ ಹೆಚ್ಚು ಲಾಭ ಗಳಿಸಬಹುದು. ಆದರೆ ಉಳಿತಾಯ ಠೇವಣಿ ಖಾತೆಯಲ್ಲಿದ್ದ ಹಣವನ್ನು ಠೇವಣಿದಾರನು ಮಧ್ಯದಲ್ಲಿ ಅವಶ್ಯವೆನಿಸಿದಾಗ ಡ್ರಾ ಮಾಡಬಹುದು. ಹೀಗಾಗಿ ಬ್ಯಾಂಕು ಉಳಿತಾಯ ಠೇವಣಿ ಖಾತೆಗಳಲ್ಲಿ ಒಟ್ಟು ಗೂಡಿದ ಉಳಿದ ಕೆಲವು ಭಾಗವನ್ನು ನಿಗದಿಯಾಗಿ ಮೀಸಲಾಗಿ ಅಥವಾ ಸಂಚಿತಿ (Reserve) ಆಗಿ ಇಟ್ಟಿರಬೇಕಾದ ಆವಶ್ಯಕತೆ ಇರುತ್ತದೆ. ಹೀಗಾಗಿ ಉಳಿತಾಯ ಠೇವಣಿಯ ಮೇಲೆ ಬ್ಯಾಂಕು ನೀಡುವ ಬಡ್ಡಿ ದರ ಫಿಕ್ಸೆಡ್ ಠೇವಣಿಯ ಮೇಲೆ ನೀಡುವ ಬಡ್ಡಿ ದರಕ್ಕಿಂತ ಕಡಿಮೆ ಇರುತ್ತದೆ. ಉಳಿತಾಯ ಖಾತೆಯಲ್ಲಿರುವ ಠೇವಣಿಯ ಮೇಲೆ ಬ್ಯಾಂಕುಗಳು ಕೊಡಬೇಕಾದ ಬಡ್ಡಿದರವನ್ನು ರಿಸರ್ವ್ ಬ್ಯಾಂಕು ಆಗಾಗ್ಗೆ ಗೊತ್ತುಪಡಿಸುತ್ತದೆ. ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಇಡಬಹುದಾದ ಗರಿಷ್ಠ ಮೊತ್ತಕ್ಕೆ ಇತಿಮಿತಿಯಿಲ್ಲ.

ಆವರ್ತಕ ಅಥವಾ ಸಂಚಿತ ಠೇವಣಿ ಖಾತೆಗಳು - Recuring Deposit or Cumulative Deposit Account

ಇತ್ತೀಚಿನ ವರುಷಗಳಲ್ಲಿ ಬ್ಯಾಂಕುಗಳು ಆವರ್ತಕ ಅಥವಾ ಸಂಚಿತ ಠೇವಣಿ ಖಾತೆಗಳನ್ನು ಆರಂಭಿಸಿವೆ. ಈ ಬಗೆಯ ಖಾತೆ ಸೇವಿಂಗ್ಸ್ ಬ್ಯಾಂಕ್ ಖಾತೆಗಿಂತ ಭಿನ್ನವಾಗಿರುತ್ತದೆ. ಜನರಲ್ಲಿ ನಿಯಮಿತ ರೂಪದಿಂದ, ಕಡ್ಡಾಯದಿಂದ

ಉಳಿತಾಯ ಮಾಡುವ ಪ್ರವೃತ್ತಿಯನ್ನು ಹೆಚ್ಚಿಸುವುದೇ ಇಂತಹ ಖಾತೆಯ ಮಹೋದ್ದೇಶ. ಸಂಚಿತ ಠೇವಣಿಯ, ಠೇವಣಿದಾರರ ಮಕ್ಕಳ ಮದುವೆ, ಮುಪ್ಪಿನ ಬದುಕು ಮತ್ತು ಮಕ್ಕಳ ಉದ್ಯೋಗ, ಜೀವನದ ಆರಂಭ-ಇಂಥ ಪ್ರಸಂಗಗಳಿಗೆ ಅತ್ಯುಪಯುಕ್ತವಾದ ಒಂದು ಪೂರ್ವ ಸಿದ್ಧತೆಯಾಗಿದೆ.

ಸಂಚಿತ ಠೇವಣಿಗಳ ವಾಯಿದೆ ಸಾಮಾನ್ಯವಾಗಿ ಒಂದರಿಂದ ಹತ್ತು ವರುಷಗಳ ತನಕ ಇರಬಹುದಾಗಿದೆ. ಪ್ರತಿ ತಿಂಗಳೂ ಒಂದು ನಿಯಮಿತ ಸಂಖ್ಯೆಯ ಮೊತ್ತವನ್ನು ಠೇವಣಿದಾರ ಕಟ್ಟಬೇಕು. ಈ ಠೇವಣಿಯ ಅವಧಿ ಮತ್ತು ಪ್ರತಿ ಕಂತಿನಲ್ಲಿ ಕಟ್ಟುವ ಮೊತ್ತವನ್ನು ಖಾತೆ ತೆರೆಯುವ ಮೊದಲೇ ನಿರ್ದಿಷ್ಟ ಪಡಿಸಬೇಕು.

ಕ್ರಮವಾಗಿ ಕಂತುಗಳನ್ನು ಕಟ್ಟುತ್ತಾ ಬಂದರೆ ಅವಧಿಯ ಕೊನೆಯಲ್ಲಿ ಠೇವಣಿದಾರನು ಮರಳಿ ಮೊತ್ತವನ್ನು ಕೊನೆಯ ಕಂತನ್ನು ಕಟ್ಟುವ ಒಂದು ತಿಂಗಳ ಬಳಿಕವೇ ಪಡೆಯಬೇಕೆಂಬುದು ವಾಡಿಕೆ.

ಅವಧಿ ಪೂರ್ಣವಾಗುವ ಮೊದಲೇ ಠೇವಣಿದಾರನು ತನ್ನ ಖಾತೆಯಲ್ಲಿರುವ ಮೊತ್ತವನ್ನು ಮರಳಿ ಪಡೆಯಲು ಬಯಸಿದಲ್ಲಿ ಆತನು ಬ್ಯಾಂಕು ನಿರ್ಧರಿಸಿದ ಅವಧಿಯ ಮುನ್ಸೂಚನೆಯನ್ನು ಬ್ಯಾಂಕಿಗೆ ನೀಡಬೇಕು.

ಠೇವಣಿದಾರನು ಮೃತಪಟ್ಟಲ್ಲಿ ಆತನ ವಾರಸುದಾರ (ಉತ್ತರಾಧಿಕಾರಿ)ನಿಗೆ ಠೇವಣಿ ಬ್ಯಾಂಕಿನಲ್ಲಿದ್ದಷ್ಟು ಅವಧಿಯಲ್ಲಿ ಸೂಚಿಸಿದ ರೀತಿಯಲ್ಲಿ ಬಡ್ಡಿಯನ್ನು ಠೇವಣಿಯೊಂದಿಗೆ ನೀಡಲಾಗುವುದು.

ಈ ಠೇವಣಿಯನ್ನು ಚಿಕ್ಕ ಮಕ್ಕಳ ಹೆಸರಿನಲ್ಲೂ ಕೂಡ ತೊಡಗಿಸಬಹುದು. ಅಂತಹ ಸಂದರ್ಭದಲ್ಲಿ ಮಕ್ಕಳ ರಕ್ಷಕರು ಪ್ರತಿನಿಧಿಗಳಾಗಿರಬೇಕು.

ಚಾಲ್ತಿ ಠೇವಣಿ ಖಾತೆ (Current Account). ಈ ಖಾತೆಯನ್ನು ತೆರೆಯುವುದರಿಂದ ಪ್ರತಿನಿತ್ಯವೂ ಹಣವನ್ನು ಪಡೆಯುವಂತಹ ಮತ್ತು ಬಟವಾಡೆ ಮಾಡುವಂತಹ ವ್ಯಾಪಾರಸ್ಥರಿಗೆ ಹಾಗೂ ಉತ್ಪಾದಕರಿಗೆ ಬಹಳ ಅನುಕೂಲವಾಗುತ್ತದೆ. ಇಂತಹ ಖಾತೆಯಲ್ಲಿರುವ ಹಣವನ್ನು ಮುನ್ಸೂಚನೆಯಿಲ್ಲದೆ ಅಥವಾ ಪೂರ್ವಭಾವಿ ತಿಳುವಳಿಕೆ ಕೊಡದೆ ಠೇವಣಿ ಇಟ್ಟ ಹಣವನ್ನು ಠೇವಣಿದಾರನು ಯಾವುದೇ ವೇಳೆಯಲ್ಲಿ ಬ್ಯಾಂಕಿನಿಂದ ಹಿಂತೆಗೆದುಕೊಳ್ಳಬಹುದು. ಹಣವನ್ನು ಜಮಾ ಮಾಡುವ ಮತ್ತು ಹಿಂತೆಗೆದುಕೊಳ್ಳುವ ಪುನರಾವರ್ತಿ ಸಂಖ್ಯೆಗೆ ಯಾವುದೇ ರೀತಿಯ ಮಿತಿ

ಇರುವುದಿಲ್ಲ. ಚಾಲ್ತಿ ಠೇವಣಿ ಖಾತೆ ಸಾಮಾನ್ಯವಾಗಿ ಉದ್ಯಮಿಗಳಿಗೆ ಬಹಳ ಅನುಕೂಲಕರ. ಅವರು ತಮಗೆ ಬಂದ ಹಣ, ಚೆಕ್ಕು ಮುಂತಾದವನ್ನೆಲ್ಲಾ ಬ್ಯಾಂಕಿಗೆ ಕಟ್ಟುತ್ತಾರೆ, ತಮಗೆ ಹಣ ಬೇಕಾದಾಗ ಬ್ಯಾಂಕಿನಿಂದ ಡ್ರಾ ಮಾಡುತ್ತಾರೆ. ಅವರಿಗೆ ಬ್ಯಾಂಕು ಒಂದು ಹಣದ ಪೆಟ್ಟಿಗೆ ಇದ್ದಹಾಗೆ. ಕೆಲವೊಮ್ಮೆ ಜಮಾ ಇರುವ ಹಣಕ್ಕಿಂತ ಮೀರಿಯೂ ಹಣವನ್ನು ಡ್ರಾ ಮಾಡಬಹುದು. ಇದನ್ನು ಓವರ್ ಡ್ರಾಫ್ಟ್ ಎನ್ನುತ್ತಾರೆ.

ಠೇವಣಿದಾರ ಕೇಳಿದ ಕೂಡಲೇ ಅವನಿಗೆ ಬ್ಯಾಂಕು ವಾಪಸು ಕೊಡಬೇಕಾದುದು ಚಾಲ್ತಿ ಠೇವಣಿ. ಈ ಬಗೆಯ ಠೇವಣಿ ಇಡುವವನೆ ಕಾನೂನು ದೃಷ್ಟಿಯಲ್ಲಿ ನಿಜವಾದ ಗ್ರಾಹಕ. ಈ ಬಗೆಯ ಠೇವಣಿಗಳನ್ನು ಸ್ವೀಕರಿಸದ ಸಂಸ್ಥೆ ವಾಣಿಜ್ಯ ಬ್ಯಾಂಕ್ ಎನಿಸಿಕೊಳ್ಳುವುದಿಲ್ಲ. ಗ್ರಾಹಕ ಠೇವಣಿಯಾಗಿ ಬ್ಯಾಂಕಿನಲ್ಲಿ ಇಟ್ಟ ಹಣದಲ್ಲಿ ಎಷ್ಟನ್ನಾದರೂ ಎಂದಾದರೂ ಆತ ಡ್ರಾ ಮಾಡಬಹುದು. ಹಿಂದೆಯೇ ತಿಳಿಸಿದಂತೆ ಇದಕ್ಕೆ ಪೂರ್ವಭಾವಿಯಾಗಿ ಬ್ಯಾಂಕಿಗೆ ಆತ ಯಾವ ತಿಳುವಳಿಕೆಯನ್ನೂ ನೀಡಬೇಕಾದುದಿಲ್ಲ. ಗ್ರಾಹಕನ ಖಾತೆಯಲ್ಲಿ ಬ್ಯಾಲೆನ್ಸ್ ಇರುವವರೆಗೂ ಅವನ ಬರೆಯುವ ಚೆಕ್ಕುಗಳಿಗೆ ಬ್ಯಾಂಕು ಹಣ ಕೊಡಲೇ ಬೇಕು. ಚೆಕ್ಕೆಂಬುದು ಹಣ ಕೊಡಲು ಬ್ಯಾಂಕಿಗೆ ಠೇವಣಿದಾರ ನೀಡುವ ಆದೇಶ. ಚಾಲ್ತಿ ಠೇವಣಿ ಖಾತೆಯೆಂಬುದು ಒಂದು ಬಗೆಯ ಧಾರಾಕಾರವಾದ ಖಾತೆ. ಚಾಲ್ತಿ ಠೇವಣಿಖಾತೆಯಿಟ್ಟವನು ಬ್ಯಾಂಕಿನಲ್ಲಿ ತನ್ನ ಖಾತೆಯಲ್ಲಿ ಕನಿಷ್ಠ ಪಕ್ಷ ಇಂತಿಷ್ಟು ಶಿಲ್ಕು ಬಿಡಬೇಕೆಂದು ನಿಯಮವಿರುವುದುಂಟು. ಗ್ರಾಹಕ ತನಗೆ ಇತರರಿಂದ ಬರುವ ಚೆಕ್ಕುಗಳನ್ನೆಲ್ಲಾ ಸಾಮಾನ್ಯವಾಗಿ ತನ್ನ ಬ್ಯಾಂಕಿಗೆ ಅವುಗಳ ವಸೂಲಿಗಾಗಿ ಸಲ್ಲಿಸುತ್ತಾನೆ. ಬ್ಯಾಂಕು ಅವನ್ನು ವಸೂಲು ಮಾಡಿ ಅವುಗಳ ಮೊಬಲಗುಗಳನ್ನು ಗ್ರಾಹಕನ ಚಾಲ್ತಿ ಠೇವಣಿ ಖಾತೆಗೆ ಜಮಾಮಾಡುತ್ತದೆ.

ಬ್ಯಾಂಕು ಖಾತೆ ತೆರೆಯುವುದರ ಪ್ರಯೋಜನಗಳು

೧. ಜನರು ತಮ್ಮ ನಗನಾಣ್ಯ ಬೆಲೆ ಬಾಳುವ ಸಾಮಾನುಗಳು, ಕಾಗದ ಪತ್ರಗಳು ಇವುಗಳನ್ನು ಬ್ಯಾಂಕಿನಲ್ಲಿ ಭದ್ರವಾಗಿ ಇಡಬಹುದು.

೨. ಬೇಕಾದಾಗ ಅವರು ಹಣವನ್ನು ವಾಪಸು ಪಡೆಯುವುದು ಅಥವಾ ಇತರರಿಗೆ ಹಣ ಪಾವತಿ ಮಾಡುವುದು ಸುಲಭ ಸಾಧ್ಯವಾಗುವಂತೆ ಬ್ಯಾಂಕು ಅವರಿಗೆ ಚೆಕ್ಕು ಪುಸ್ತಕಗಳನ್ನು ನೀಡುತ್ತದೆ. ಹಣವನ್ನು ಒಯ್ಯುವುದೂ, ಕೊಡುವುದೂ ಈ ಚೆಕ್‌ನಿಂದಾಗಿ ಸರಳೀಕೃತಗೊಂಡಿದೆ.

೩. ಪ್ರವಾಸ ಹೋಗುವಾಗಲೂ ನಗದು ಹಣವನ್ನು ತೆಗೆದುಕೊಳ್ಳದೆ ಪ್ರವಾಸೀ ಚೆಕ್ ಮೂಲಕ ವ್ಯವಹರಿಸಿಕೊಳ್ಳಬಹುದು.

೪. ಓವರ್ ಡ್ರಾಫ್ಟ್, ನಗದಿ, ಉದ್ದರಿ ಸಾಲ ಮುಂತಾದ ರೂಪಗಳಲ್ಲಿ ಗ್ರಾಹಕರು ಬ್ಯಾಂಕಿನಿಂದ ಸೂಕ್ತ ಭದ್ರತೆ ಕೊಟ್ಟು ಮುಂಗಡ ಪಡೆಯಬಹುದು.

೫. ಹಣದ ತೊಡಗಣೆ, ಸೆಕ್ಯುರಿಟಿ ಷೇರುಗಳ ಮಾರಾಟ, ಕೊಳ್ಳುವಿಕೆ ಮುಂತಾದ ಹಣಕ್ಕೆ ಸಂಬಂಧಿಸಿದಂತಹ ಎಲ್ಲಾ ವ್ಯವಹಾರಗಳಲ್ಲೂ ಗ್ರಾಹಕರಿಗೆ ಅದು ಸೂಕ್ತ ಮತ್ತು ಸಮರ್ಪಕ ಸಲಹೆ ನೀಡುವುದಲ್ಲದೆ ಅವರ ಪರವಾಗಿ ತಾನೇ ಈ ವಹಿವಾಟುಗಳನ್ನು ನಡೆಸಿಯೂ ಕೊಡುತ್ತದೆ.

೬. ಗ್ರಾಹಕನಿಗೆ ಬಂದ ಹುಂಡಿ ಪತ್ರ, ಸಾಲಪತ್ರಗಳ ಬಡ್ಡಿ, ಚೆಕ್ಕು, ಲಾಭಾಂಶ ಮುಂತಾದವನ್ನು ಬ್ಯಾಂಕ್ ವಸೂಲಿಮಾಡುತ್ತದಲ್ಲದೆ ಅವನ ಪರವಾಗಿ ವಂತಿಗೆ, ವಿಮಾ ಕಂತು ಮುಂತಾದುವನ್ನು ಪಾವತಿ ಮಾಡುತ್ತದೆ.

೭. ಬ್ಯಾಂಕು ತನ್ನ ಗ್ರಾಹಕರ ಖಾತೆ ಇಡುವುದರಿಂದ ಗ್ರಾಹಕರಿಗೆ ಬರುವ ಎಲ್ಲಾ ಆದಾಯ, ಗ್ರಾಹಕ ಕೊಡುವ ಮೊಬಲಗು ಇವುಗಳಲ್ಲೆಲ್ಲಾ ನಿಖರವಾಗಿ, ಅಧಿಕೃತವಾಗಿ ದಾಖಲಾಗುತ್ತದೆ.

೮. ಬ್ಯಾಂಕು ತನ್ನ ಗ್ರಾಹಕರ ವ್ಯಾಪಾರನೀತಿ, ಅವರ ವ್ಯವಹಾರ, ಸ್ವಭಾವ, ಮುಂತಾದವುಗಳ ಬಗ್ಗೆ ಶಿಫಾರಸು ಪತ್ರ ನೀಡುವುದರಿಂದ ಇತರರೊಂದಿಗೆ ಅವರ ವ್ಯವಹಾರ, ಸಂಪರ್ಕ ಬೆಳೆಯುಲು ಅನುಕೂಲವಾಗುತ್ತದೆ.

ಬ್ಯಾಂಕುಗಳ ರಾಷ್ಟ್ರೀಕರಣ

ಬ್ಯಾಂಕುಗಳ ಮೇಲೆ ಸಾಮಾಜಿಕ ನಿಯಂತ್ರಣವನ್ನನುಸರಿಸಿದ ಉದ್ದೇಶಗಳ ಸಾಧನೆಯನ್ನು ತ್ವರಿತಗೊಳಿಸಲು ೧೯೬೯ರ ಜುಲೈ ೧೯ನೆಯ ದಿನಾಂಕದಂದು ವಿಶೇಷಾಜ್ಞೆಯ ಮೇರೆಗೆ ೫೦ ಕೋಟಿ ರೂಪಾಯಿಗಳಿಗೆ ಮಿಕ್ಕಿ ಠೇವಣಿ ಇದ್ದ ಹದಿನಾಲ್ಕು ವಾಣಿಜ್ಯ ಬ್ಯಾಂಕುಗಳನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಅವುಗಳು ಯಾವುವೆಂದರೆ

೧. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

೨. ಬ್ಯಾಂಕ್ ಆಫ್ ಇಂಡಿಯಾ

೩. ಪಂಜಾಬ್ ನ್ಯಾಷನಲ್ ಬ್ಯಾಂಕ್
೪. ಬ್ಯಾಂಕ್ ಆಫ್ ಬರೋಡಾ
೫. ಯುನೈಟೈಡ್ ಬ್ಯಾಂಕ್ ಆಫ್ ಇಂಡಿಯಾ
೬. ಕೆನರಾ ಬ್ಯಾಂಕ್
೭. ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್
೮. ದೇನಾ ಬ್ಯಾಂಕ್
೯. ಸಿಂಡಿಕೇಟ್ ಬ್ಯಾಂಕ್
೧೦. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
೧೧. ಅಲಹಾಬಾದ್ ಬ್ಯಾಂಕ್
೧೨. ಇಂಡಿಯನ್ ಬ್ಯಾಂಕ್
೧೩. ಬ್ಯಾಂಕ್ ಆಫ್ ಮಹಾರಾಷ್ಟ್ರ ಮತ್ತು
೧೪. ಇಂಡಿಯನ್ ಓವರ್ ಸೀಸ್ ಬ್ಯಾಂಕ್

ಈ ಮೇಲಿನ ಎಲ್ಲಾ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿಕೊಂಡಿದ್ದರ ಉದ್ದೇಶವೇನೆಂದರೆ, ಪ್ರಥಮ ಮತ್ತು ದ್ವಿತೀಯ ವಿಶ್ವ ಯುದ್ಧಗಳ ಮಧ್ಯಂತರ ಕಾಲದಲ್ಲಿ ಮತ್ತು ಅನಂತರ ಭಾರತೀಯ ಬ್ಯಾಂಕುಗಳ ಬೆಳವಣಿಗೆ ತೀವ್ರತರವಾಗಿತ್ತು. ದೇಶದ ಬ್ಯಾಂಕಿಂಗ್ ಉದ್ಯಮದ ಈ ತ್ವರಿತಾಭಿವೃದ್ಧಿ ಶ್ಲಾಘನೀಯವಾಗಿದ್ದರೂ ಅದು ಅನೇಕ ದೋಷಗಳನ್ನು ಒಳಗೊಂಡಿದ್ದಿತು. ಅಲ್ಪ ಬಂಡವಾಳ, ಅತ್ಯಲ್ಪ ಮೀಸಲು ನಿಧಿ, ನಾನಾ ಬಗೆಯ ಷೇರುಗಳನ್ನು ಹಂಚಿ ಬಂಡವಾಳ ಎತ್ತುವುದು, ಮುಖ್ಯ ಕಾರ್ಯನಿರ್ವಾಹಕ ರೊಂದಿಗೆ ನ್ಯಾಯ ಸಮ್ಮತವಲ್ಲದ ಒಪ್ಪಂದಗಳನ್ನು ಮಾಡಿಕೊಂಡಿರುವುದು ಇವೇ ಮೊದಲಾದ ಬಾಧಾಕಾಂಶಗಳಿಂದಾಗಿ ನಮ್ಮ ಬ್ಯಾಂಕುಗಳು ಸಂಕಷ್ಟದಲ್ಲಿದ್ದವು. ಈ ಕುಂದುಕೊರತೆಗಳಿಂದಾಗಿ ಆಗ ಬ್ಯಾಂಕುಗಳ ದಿವಾಳಿತನ ಅತ್ಯಧಿಕವಾಗಿದ್ದಿತು. ಈ ಕೊರತೆಗಳನ್ನು ನಿವಾರಿಸಲು ಬ್ಯಾಂಕುಗಳು ಸುವ್ಯವಸ್ಥಿತವಾಗಿ ಕಾರ್ಯವೆಸಗುವಂತೆ ಮಾಡಲು ಮತ್ತು ಠೇವಣಿದಾರರ ಹಿತವನ್ನು ಸಂರಕ್ಷಿಸುವ ದೃಷ್ಟಿಯಿಂದ ಈ ಕಾಯಿದೆ ಜಾರಿಗೆ ಬಂದಿತು. ಈ ಪ್ರಸಕ್ತ ಕಾಯಿದೆ ಬಹಳ ವ್ಯಾಪಕವಾಗಿದ್ದು ಬ್ಯಾಂಕಿಂಗ್ ವ್ಯವಹಾರಗಳ ಎಲ್ಲಾ ಅಂಶಗಳಿಗೂ ಇದು ಅನ್ವಯಿಸುತ್ತದೆ. ಆಗ ಈ ಕಾಯಿದೆಯಲ್ಲೂ ಸೂಕ್ತ ತಿದ್ದುಪಡಿಯಾಗುತ್ತಲಿದೆ.

ಭಾರತದ ರಿಸರ್ವ್ ಬ್ಯಾಂಕನ್ನು ರಾಷ್ಟ್ರೀಕರಿಸಿದ ಮೇಲೆ ದೇಶದ ಅತಿದೊಡ್ಡ ವಾಣಿಜ್ಯ ಬ್ಯಾಂಕಾದ ಇಂಪೀರಿಯಲ್ ಬ್ಯಾಂಕನ್ನೂ ಸಹ ರಾಷ್ಟ್ರೀಕರಿಸಲಾಯಿತು. ಏಕೆಂದರೆ ಇಂಪೀರಿಯಲ್ ಬ್ಯಾಂಕಿನ ಆಡಳಿತ ಸೂತ್ರವೂ ಸಹ ವಿದೇಶೀಯರ ಕೈಯಲ್ಲಿದ್ದಿತು. ಈ ಆಡಳಿತ ಸೂತ್ರವನ್ನು ಭಾರತೀಯರು ವಹಿಸಿಕೊಳ್ಳುವಂತೆ ಮಾಡಬೇಕಾಗಿದ್ದರೆ ಅದನ್ನು ರಾಷ್ಟ್ರೀಕರಿಸಿಕೊಳ್ಳಬೇಕಾಗಿದ್ದಿತು. ಬ್ಯಾಂಕ್ ಸಮೀಕ್ಷೆಯು ಹಳ್ಳಿಗಾಡುಗಳಲ್ಲಿ ಆಧುನಿಕ ಬ್ಯಾಂಕಿಂಗ್ ಸೌಕರ್ಯಗಳನ್ನು ಹೆಚ್ಚಾಗಿ ಒದಗಿಸಬೇಕಾದರೆ ಸರಕಾರದ ಅಧೀನದಲ್ಲಿರುವ ಒಂದು ದೊಡ್ಡ ವಾಣಿಜ್ಯ ಬ್ಯಾಂಕಿನ ಆವಶ್ಯಕತೆ ಇದೆ ಎಂದು ಸಲಹೆ ಮಾಡಿತು. ಇದರಿಂದಾಗಿ ಇಂಪೀರಿಯಲ್ ಬ್ಯಾಂಕನ್ನು ಭಾರತ ಸರಕಾರವು ರಾಷ್ಟ್ರೀಕರಣ ಮಾಡಿ ಅದಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ನಾಮಕರಣಮಾಡಿತು.

ರಿಜರ್ವ್ ಬ್ಯಾಂಕಿನ ಹಣದ ಧೋರಣೆ ಇವು ವಾಣಿಜ್ಯ ಬ್ಯಾಂಕುಗಳ ವ್ಯವಹಾರಗಳನ್ನು ಸಾಕಷ್ಟು ನಿಯಂತ್ರಣದಲ್ಲಿ ತಂದಾಗ್ಯೂ ಕೃಷಿ, ಸಣ್ಣ ಕೈಗಾರಿಕೆ, ಸಣ್ಣ ಕೈಗಾರಿಕೆ, ಗುಡಿಕೈಗಾರಿಕೆ, ಪುಡಿಕೈಗಾರಿಕೆ ಮತ್ತು ರಫ್ತು ವ್ಯಾಪಾರಕ್ಕೆ ದೊರಕಬಹುದಾದ ಸಾಲದ ಮೊತ್ತ ದೊರೆಯಲಿಲ್ಲ. ಬ್ಯಾಂಕುಗಳ ನಿರ್ದೇಶಕ ಮಂಡಳಿಗಳಲ್ಲಿ ಉದ್ದಿಮೆದಾರರು ಮತ್ತು ದೊಡ್ಡ ವ್ಯಾಪಾರಿಗಳೇ ಹೆಚ್ಚಾಗಿದ್ದುದರಿಂದ ಬ್ಯಾಂಕುಗಳ ಸಾಲ ಅವರ ಹಿತಾಸಕ್ತಿಗಳನ್ನು ಪೂರೈಸುವುದಕ್ಕೆ ಮಾತ್ರಾ ಉಪಯೋಗವಾಗುತ್ತಿತ್ತು. ಇದೇ ನೀತಿ, ಧೋರಣೆ ಮುಂದುವರಿದರೆ ಆರ್ಥಿಕ ವ್ಯವಸ್ಥೆಯ ಕೆಲವೇ ಕ್ಷೇತ್ರಗಳಲ್ಲಿ ಆರ್ಥಿಕ ಶಕ್ತಿ ಕೇಂದ್ರೀಕೃತವಾಗಿ ಸಮಾಜಕ್ಕೆ ಅನ್ಯಾಯವಾಗುವುದರಲ್ಲಿ ನಿಃಸಂಶಯ. ಪ್ರಜಾಸತ್ತಾತ್ಮಕ ಸಮಾಜವಾದದ ಚೌಕಟ್ಟಿನಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸಲು ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳ ಚಟುವಟಿಕೆಗಳನ್ನು ನಿಯಂತ್ರಿಸುವುದಲ್ಲದೆ ಆರ್ಥಿಕ ಶಕ್ತಿಯ ಕೇಂದ್ರೀಕರಣವನ್ನು ತಡೆದು ಸಂಪನ್ಮೂಲಗಳ ದುರುಪಯೋಗವಾಗದಂತೆ ಧೋರಣೆಯನ್ನು ರೂಪಿಸಬೇಕಾಗುತ್ತದೆ. ಸಾಮಾಜಿಕ ನಿಯಂತ್ರಣ ಧೋರಣೆಯಿಂದ ಬ್ಯಾಂಕುಗಳ ಆಡಳಿತದಲ್ಲಿ ಎಲ್ಲಾ ಕ್ಷೇತ್ರಗಳಿಗೆ ಪ್ರಾತಿನಿಧ್ಯ ದೊರೆತಂತಾಗುತ್ತದೆ. ಬ್ಯಾಂಕುಗಳ ರಾಷ್ಟ್ರೀಕರಣಕ್ಕೆ ಇದೊಂದು ಪರ್ಯಾಯವಾದ ಮಾರ್ಗವೆಂದು ತಿಳಿದು ಸರ್ಕಾರವು ಬ್ಯಾಂಕಿಂಗ್ ನಿಂಯತ್ರಣ ಕಾಯಿದೆಗೆ ತಿದ್ದುಪಡಿ ಮಾಡಿತು. ಅದರ ಉದ್ದೇಶ ಹೀಗಿದ್ದಿತು.

೧. ಬ್ಯಾಂಕಿನ ವ್ಯವಹಾರ ಎಲ್ಲಾ ಉದ್ಯೋಗ ದಂಧೆಗಳಿಗೆ ಪ್ರಯೋಜನಕಾರಿಯಾಗುವಂತೆ ನೋಡಿಕೊಳ್ಳುವುದು.

೨. ಸಮಾಜದ ಹಿತವನ್ನು ಮುಂದಿಟ್ಟುಕೊಂಡು ಬ್ಯಾಂಕುಗಳು ತಮ್ಮ ವ್ಯವಹಾರಗಳನ್ನು ನಿರ್ವಹಿಸುವಂತೆ ಅವುಗಳನ್ನು ಪ್ರೋತ್ಸಾಹಿಸುವುದು.

೩. ಬ್ಯಾಂಕುಗಳು ಗ್ರಾಮಾಂತರ ಪ್ರದೇಶಗಳಲ್ಲಿ ತಮ್ಮ ಶಾಖೆಯನ್ನು ತೆರೆಯುವಂತೆ ನೋಡಿಕೊಳ್ಳುವುದು

೪. ಕೃಷಿ, ಸಣ್ಣ ಉದ್ದಿಮೆ, ಕರಕುಶಲ ವಸ್ತುಗಳ ತಯಾರಿಕೆ, ಮಾರಾಟ, ವ್ಯವಹಾರಗಳಿಗೆ ತಕ್ಕ ಪ್ರಮಾಣದಲ್ಲಿ ಸಾಲ ದೊರೆಯುವಂತೆ ಮಾಡುವುದು.

೫. ರಾಷ್ಟ್ರದ ಪಂಚವಾರ್ಷಿಕ ಯೋಜನೆಯಲ್ಲಿ ನಿರೂಪಿಸುವ ರೀತಿಯಲ್ಲಿ ಬಂಡವಾಳ ಹೂಡಿಕೆಗೆ ಇವು ಅನುವು ಮಾಡಿಕೊಡುತ್ತದೆ.

೬. ಇವು ಷೇರುದಾರರ ಲಾಭದೃಷ್ಟಿಯನ್ನು ಬದಿಗೊತ್ತಿ ವೆಚ್ಚಕ್ಕಿಂತ ಸಾಮಾಜಿಕ ಗುರಿಗಳ ಕಡೆಗೆ ಹೆಚ್ಚಿನ ಲಕ್ಷ್ಯ ನೀಡುತ್ತದೆ.

೭. ಖಾಸಗೀ ಬ್ಯಾಂಕುಗಳು ಭಾರೀ ಕೈಗಾರಿಕೋದ್ಯಮಿಗಳ ಕೈಗೊಂಬೆಗಳಾಗಿ ಜನಸಾಮಾನ್ಯರ ಹಣದ ದುರ್ವಿನಿಯೋಗವಾಗುತ್ತಿದ್ದುದನ್ನು ತಪ್ಪಿಸುವುದು, ರಾಷ್ಟ್ರೀಕರಣದ ಉದ್ದೇಶಗಳಲ್ಲೊಂದಾಗಿದೆ. ಸಂಪತ್ತು ಕೆಲವರಲ್ಲಿ ಮಾತ್ರಾ ಕೇಂದ್ರೀ ಕೃತವಾಗದಂತೆ ವರಮಾನಗಳಲ್ಲಿ ಅಂತರವೇರ್ಪಡದಂತೆ ಮಾಡುವುದಾಗಿದೆ.

೮. ಭಾರತದ ಪ್ರಗತಿಗೆ ರಫ್ತು ವ್ಯಾಪಾರವೂ ಬಹು ಮುಖ್ಯವಾಗಿದೆ. ರಫ್ತು ವ್ಯಾಪಾರವನ್ನು ವೃದ್ಧಿ ಪಡಿಸುವುದರಿಂದ ನಮ್ಮ ದೇಶಕ್ಕೆ ಹೆಚ್ಚು ವಿದೇಶೀ ವಿನಿಮಯದ ಸಂಪಾದನೆಯಾಗುತ್ತದೆ. ಇದರಿಂದ ಆರ್ಥಿಕಾಭಿವೃದ್ಧಿಗೆ ಆವಶ್ಯಕವಾದ ಪದಾರ್ಥಗಳನ್ನು ಇತರ ದೇಶಗಳಿಂದ ಕೊಳ್ಳುವುದು ಸಾಧ್ಯವಾಗುತ್ತದೆ. ಗೃಹನಿರ್ಮಾಣ ಕಾರ್ಯದಿಂದ ಅನೇಕರ ಜೀವನ ಸುಧಾರಿಸುತ್ತದೆ. ಹಲವರಿಗೆ ಉದ್ಯೋಗ ಲಭಿಸುತ್ತದೆ. ಇತರ ಕೈಗಾರಿಕೆಗಳಿಗೂ ಉತ್ತೇಜನ ನೀಡಿದಂತಾಗುತ್ತದೆ. ವಿದೇಶೀ ವಾಣಿಜ್ಯ, ವಿದೇಶೀ

ಪ್ರವಾಸೋದ್ಯಮ, ರಹದಾರಿ, ಮೊದಲಾದ ವಿಶಿಷ್ಟ ಸೌಲಭ್ಯಗಳನ್ನೂ, ಸೇವೆಗಳನ್ನು ಪರಸ್ಪರ ದೊರಕಿಸಿಕೊಡಲು ಸಹಾಯ ಮಾಡುತ್ತದೆ.

ಬ್ಯಾಂಕುಗಳ ರಾಷ್ಟ್ರೀಕರಣದಿಂದ ದೇಶದ ಸಂಕಷ್ಟಗಳೆಲ್ಲಾ ದೂರವಾಗಿ ಆರ್ಥಿಕ ಪ್ರಗತಿ ಸಾಧಿಸುವುದೆಂಬ ಅತಿಯಾದ ಆಶಾವಾದ ತಳೆಯುವ ಅವಶ್ಯವಿಲ್ಲ. ಆದರೆ ಲಾಭವೇ ಮುಖ್ಯವೆಂದು ಪರಿಗಣಿಸದೆ, ದಕ್ಷತೆ, ಸೇವೆಗಳಿಗೆ ಅಗ್ರಮಾನ್ಯತೆ ನೀಡಿ ಬ್ಯಾಂಕಿಂಗ್ ಉದ್ಯಮವನ್ನು ದೇಶದಲ್ಲೆಲ್ಲಾ ವಿಸ್ತರಿಸಿ ಕ್ರಮೇಣ ರಾಷ್ಟ್ರದ ಹಿತ ಸಾಧಿಸುವುದೇ ರಾಷ್ಟ್ರೀಕರಣದ ಮಹೋದ್ದೇಶ. ದೇಶದ ಜನರಲ್ಲಿರುವ ಉಳಿತಾಯವನ್ನು ಸಂಗ್ರಹಿಸಿ ಅದು ಪ್ರಗತಿಪರ ಕಾರ್ಯಗಳಿಗೆ ಅಧಿಕಾಧಿಕವಾಗಿ ಒದಗುವಂತೆ ಮಾಡುವುದರಲ್ಲಿ ಬ್ಯಾಂಕುಗಳು ಮಾಡುತ್ತಿವೆ. ಆಗ ರಾಷ್ಟ್ರೀಕರಣದ ಕ್ರಮ ಹೆಚ್ಚು ಸಾರ್ಥಕವಾಗುತ್ತದೆ.

ಕೃಷಿ

ಭಾರತ ಕೃಷಿ ಪ್ರಧಾನವಾದ ದೇಶ. ಇದು ಅತ್ಯಂತ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ಮುಖ್ಯ ಉದ್ಯೋಗ. ಭಾರತದ ಜನಸಂಖ್ಯೆಯ ಪ್ರತಿಶತ ೭೦ ರಷ್ಟು ಜನ ಒಕ್ಕಲುತನದಲ್ಲಿ ತೊಡಗಿದ್ದಾರೆ. ರಾಷ್ಟ್ರೀಯ ವರಮಾನದಲ್ಲಿ ಪ್ರತಿ ಶತ ೪೪ ರಷ್ಟು ಆದಾಯ ಒಕ್ಕಲುತನದಿಂದ ಬರುತ್ತದೆ. ಭಾರತದ ಬಹುಸಂಖ್ಯೆ ಉದ್ದಿಮೆಗಳು ಕೃಷಿಯನ್ನು ಅವಲಂಬಿಸಿವೆ. ವಿದೇಶೀ ವ್ಯಾಪರದಲ್ಲೂ ಒಕ್ಕಲುತನದ್ದೇ ಪ್ರಧಾನ ಪಾತ್ರ. ಅಂದರೆ ನಮ್ಮ ದೇಶದ ಬಹು ಸಂಖ್ಯೆ ನಿರ್ಯಾತ ವಸ್ತುಗಳು ಕೃಷಿ ರಂಗದಿಂದ ಬರುತ್ತವೆ. ಕೃಷಿಯು ದೇಶದಲ್ಲಿ ಶಾಂತಿ, ಸುವ್ಯವಸ್ಥೆಗಳು ನೆಲೆಸಲು ಸಹಕಾರಿಯಾಗಿದೆ. ಹೀಗೆ ನಾನಾ ವಿಧದಲ್ಲಿ ಒಕ್ಕಲುತನ ಭಾರತದ ಆರ್ಥಿಕ ವ್ಯವಸ್ಥೆಯ ಬೆನ್ನೆಲಬು.

ಭಾರತದ ಅರ್ಥ ವ್ಯವಸ್ಥೆಯಲ್ಲಿ ಕೃಷಿ ಅತ್ಯಂತ ಪ್ರಮುಖ ಮತ್ತು ವ್ಯಾಪಕ ಕ್ಷೇತ್ರವಾಗಿದೆ. ಈ ಕ್ಷೇತ್ರ ಹಲವಾರು ಸಮಸ್ಯೆಗಳನ್ನು ಒಳಗೊಂಡಿದೆ. ಈ ಕ್ಷೇತ್ರದ ಬೆಳವಣಿಗೆಯಲ್ಲಿ ಅನೇಕ ಕಾರ್ಯಕ್ರಮಗಳು ಯಶಸ್ವಿಯಾಗಿವೆ. ಕೆಲವು ಸೋತಿವೆ.

ಸ್ವಾತಂತ್ರ್ಯ ಪೂರ್ವದಲ್ಲಿ ಕೃಷಿ ಸಂಬಂಧವಾದ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದಿತು. ಯಂತ್ರಗಳನ್ನು ಬಳಸಲು ಪತ್ರಿಕೆಗಳಲ್ಲಿ ಪ್ರಚಾರ ನಡೆಯುತ್ತಿದ್ದಿತು. ಕೃಷಿ ಸಾಲದ ಭಾರವನ್ನಿಳಿಸುವ ಕೆಲವು ಕಾಯಿದೆಗಳಾದವು,

ಗ್ರಾಮೀಣ ಸಹಕಾರಿ ಸಂಘಗಳನ್ನು ರಚಿಸಲಾಯಿತು. ಕೆಲವು ನೀರಾವರಿ ಯೋಜನೆಗಳು ಕಾರ್ಯಗತವಾಗಿದ್ದವು. ಗ್ರಾಮೀಣ ಜನತೆಯೂ ಯಾಂತ್ರೀಕರಣ ಮತ್ತು ಹೊಸ ವಿಧಾನಗಳಿಗೆ ಕೂಡಲೇ ಮನವೊಲಿಯುವ ರೀತಿಯಲ್ಲಿರಲಿಲ್ಲ. ಸರ್ಕಾರಕ್ಕೂ ತೀವ್ರ ಉತ್ಕಟ ಉದ್ದೇಶಗಳಾಗಲಿ ಪ್ರಯತ್ನಗಳಾಗಲಿ ಬೇಕಿರಲಿಲ್ಲ. ಈ ಕಾರಣಗಳಿಂದ ಕೃಷಿ ಕ್ಷೇತ್ರದಲ್ಲಿ ಬೆಳವಣಿಗೆ ಆಗಿರಲಿಲ್ಲ. ಆದ್ದರಿಂದ ಕೃಷಿಯ ಸ್ಥಿತಿ ಅತ್ಯಂತ ಹೀನಮಟ್ಟಕ್ಕೆ ಇಳಿದಿತ್ತು.

ಹಿಂದೆ ಕೃಷಿಯನ್ನು ಕುಟುಂಬದ ಅಗತ್ಯಗಳನ್ನು ಬೆಳೆದುಕೊಳ್ಳಲು ಮಾತ್ರಾ ಕೈಗೊಳ್ಳಲಾಗುತ್ತಿದ್ದಿತು. ಮನೆ ಮಂದಿಗಾಗುವಷ್ಟು ಕಾಳುಕಡ್ಡಿ ಬೆಳೆದರೆ ಸಾಕೆಂಬ ಭಾವನೆಯಿದ್ದಿತು. ಹೆಚ್ಚು ಬೆಳೆದು ಮಾರಬೇಕೆಂಬ ಆಸೆಯೂ ಇರಲಿಲ್ಲ. ಕೃಷಿ ಕ್ಷೇತ್ರದ ಉತ್ಪಾದಕತೆ ತುಂಬಾ ಕಡಿಮೆ ಇದ್ದಿತು. ಭೂ ಹಿಡುವಳಿ ಅನಾರ್ಥಿಕವಾಗಿದ್ದಿತು. ಛಿದ್ರ ಹಾಗೂ ಚೆಲ್ಲಾಪಿಲ್ಲಿಯಾಗಿದ್ದ ಭೂ ಹಿಡುವಳಿ ಸಾಮಾನ್ಯವಾಗಿದ್ದಿತು. ಬೇಸಾಯಗಾರ ಒಡೆಯನಲ್ಲ. ಒಡೆಯ ಬೇಸಾಯಗಾರನಲ್ಲ ಎಂಬ ಸ್ಥಿತಿಯಿದ್ದು ಅವರಿಬ್ಬರ ನಡುವೆ ಭೂಮಿ ಸೊರಗಿತು. ಇಲ್ಲವೇ ಅತೀ ಶೋಷಣೆಗೆ ಒಳಗಾಯಿತು. ಭೂ ಹಿಡುವಳಿಗೆ ಮಿತಿಯಿಲ್ಲವಾಗಿ ಜಮೀನ್ದಾರಿ, ರೈತವಾರಿ ಪದ್ಧತಿಗಳು ವಿಜೃಂಭಿಸುತ್ತಿದ್ದವು, ಗೇಣಿದಾರರೂ ಶೋಷಣೆಗೆ ಒಳಪಟ್ಟಿದ್ದರು.

ನೀರಾವರಿ ಸೌಲಭ್ಯ ಸಾಲದಾಗಿತ್ತು. ಬೀಜಗಳು ಉತ್ತಮ ದರ್ಜೆಯ ವಾಗಿರುತ್ತಿರಲಿಲ್ಲ. ಗೊಬ್ಬರಗಳೂ ಸಾಕಷ್ಟು ಪ್ರಮಾಣದಲ್ಲಿ ದೊರೆಯದೇ ರಸಗೊಬ್ಬರದ ಬಳಕೆ ತಿಳಿದಿರಲಿಲ್ಲ. ಕೀಟನಾಶಕದ ಬಳಕೆಯಿರಲಿಲ್ಲ. ಬೇಸಾಯದ ಉಪಕರಣಗಳು ದಕ್ಷವಾಗಿರಲಿಲ್ಲ. ವೈಜ್ಞಾನಿಕ ಕೃಷಿ, ಮಿಶ್ರತಳಿ, ಸಸ್ಯಸಂರಕ್ಷಣೆ, ಧಾನ್ಯ ಸಂಗ್ರಹ ಇವುಗಳ ಬಗ್ಗೆ ರೈತರು ಹೆಚ್ಚಾಗಿ ತಿಳಿದಿದ್ದಿರಲಿಲ್ಲ. ಸಂಪ್ರದಾಯ, ಮೂಢನಂಬಿಕೆಗಳು ರೈತರಲ್ಲಿ ಮನೆಮಾಡಿಕೊಂಡಿದ್ದವು.

ಕೃಷಿಕರಿಗೆ ಸೂಕ್ತ ಸಾಲ ಸೌಲಭ್ಯಗಳು ದೊರೆಯುತ್ತಿರಲಿಲ್ಲ, ಸಾಲ ನೀಡುವ ಸಾಹುಕಾರರು ಬಡ್ಡಿಯ ಚಕ್ರಕ್ಕೆ ರೈತರನ್ನು ಬಲಿಕೊಡುತ್ತಿದ್ದರು. ರಸ್ತೆ, ಸಾರಿಗೆ ವ್ಯವಸ್ಥೆಗಳ ಅಭಾವದಿಂದ ಸರಕು ಉತ್ತಮ ಮಾರುಕಟ್ಟೆಗಳಿಗೆ ತಲಪುವುದು ಕಷ್ಟವಾಗುತ್ತಿತ್ತು. ಉಗ್ರಾಣದ ವ್ಯವಸ್ಥೆಯಿಲ್ಲದೆ ದವಸ ಧಾನ್ಯ ಹಾಳಾಗುತ್ತಿದ್ದವು ಮತ್ತು ಉತ್ತಮ ದರ ಸಿಗುವವರೆಗೂ ಕಾಯಲಾರದೇ ಹೋಗುತ್ತಿದ್ದವು. ರೈತರು

ಅವಸರದಿಂದ ಸುಗ್ಗಿಯ ಸೋವಿ ಬೆಲೆಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಿಬಿಡ ಬೇಕಾಗುತ್ತಿತ್ತು.

ಭಾರತದ ಕೃಷಿರಂಗದ ಉತ್ಪಾದನಾ ಶಕ್ತಿ ಅತ್ಯಂತ ಕನಿಷ್ಠ ಮಟ್ಟದಲ್ಲಿದೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಉತ್ಪಾದನಾ ಶಕ್ತಿ ವೃದ್ಧಿಯಾಗುತ್ತಿದೆಯಾದರೂ ಅನೇಕ ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಹೋಲಿಸಿದಾಗ ಇನ್ನೂ ಕಡಿಮೆಯಾಗಿಯೇ ಇದ್ದುದು ಕಂಡುಬರುತ್ತದೆ. ಇದೊಂದು ಕ್ಲಿಷ್ಟ ಸಮಸ್ಯೆ. ಇದಕ್ಕೆ ಅನೇಕ ಕಾರಣಗಳುಂಟು. ಬಡತನವು ಕೃಷಿಯ ಹಿಂದುಳಿದಿರುವುದಕ್ಕೆ ಮತ್ತು ಕೆಳಮಟ್ಟದ ಉತ್ಪಾದನಾ ಶಕ್ತಿಗೆ ಬಹಳವಾಗಿ ಕಾರಣವಾಗಿದೆ. ಕಡಿಮೆ ಉತ್ಪಾದನೆ, ಕಡಿಮೆ ಮಾರಾಟಕ್ಕೆ ಇರುವ ಉತ್ಪನ್ನ, ಕಡಿಮೆ ಆದಾಯ, ಕಡಿಮೆ ಉಳಿತಾಯ, ಕಡಿಮೆ ಬಂಡವಾಳ ತೊಡಗಿಸುವಿಕೆ ಇವು ಕಡಿಮೆ ಉತ್ಪಾದನಾ ಶಕ್ತಿಯಲ್ಲಿ ಪರಿಸಮಾಪ್ತಿ ಹೊಂದುತ್ತದೆ.

ಭಾರತದ ಕೃಷಿ ಉತ್ಪಾದನೆಯು ಕಡಿಮೆ ಪ್ರಮಾಣದಲ್ಲಿ ಇರುವುದಕ್ಕೆ ಬಡತನವಲ್ಲದೆ ಇನ್ನೂ ಅನೇಕ ಕಾರಣಗಳಿವೆ. ಆ ಕಾರಣಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು.

೧. ನೈಸರ್ಗಿಕ ಕಾರಣಗಳು.
೨. ತಾಂತ್ರಿಕ ಕಾರಣಗಳು.
೩. ಸಂಘಟನಾ ನ್ಯೂನತೆಗಳು.
೪. ಸಾಮಾನ್ಯ ಕಾರಣಗಳು.

ಭಾರತದ ಬೇಸಾಯಕ್ಕೆ ನಿಸರ್ಗವು ಅನೂಕೂಲವಾಗಿಲ್ಲ, ನಿಸರ್ಗದ ಅವಕೃಪೆಯಿಂದಾಗಿ ಕೃಷಿರಂಗದಲ್ಲಿ ಅನೇಕ ಅನಿಶ್ಚಿತತೆಗಳು ತಲೆದೋರಿವೆ. ಭಾರತದ ಕೆಲವು ಭಾಗಗಳಲ್ಲಿ ಮಳೆ ಅತಿ ಹೆಚ್ಚಾಗುತ್ತಿದ್ದರೆ ಇನ್ನು ಕೆಲವು ಭಾಗಗಳಲ್ಲಿ ಮಳೆ ಅತಿ ಕಡಮೆಯಾಗುತ್ತದೆ. ಒಂದು ವರ್ಷ ಅತಿವೃಷ್ಟಿಯಿಂದ ಬೇಸಾಯದ ಉತ್ಪಾದನೆ ಹಾಳಾದರೆ ಮತ್ತೊಂದು ವರ್ಷ ಅನಾವೃಷ್ಟಿಯಿಂದ ಉತ್ಪಾದನೆ ಕಡಿಮೆಯಾಗುತ್ತದೆ. ಕೆಲವು ಕಡೆ ನೆರೆಹಾವಳಿಯ ತೊಂದರೆ ಇದ್ದರೆ ಇನ್ನು ಕೆಲವು ಕಡೆ ಅನಾವೃಷ್ಟಿಯ ತೊಂದರೆ ಇದೆ. ಹೀಗಿರುವುದರಿಂದ ಈ ರಂಗದಲ್ಲಿ ಯಾವ ಯೋಜನೆಗಳೂ ನಿರೀಕ್ಷಿಸಿದ ಫಲವನ್ನು ಕೊಡುತ್ತಿಲ್ಲ.

4

ಕೆಲವು ತಾಂತ್ರಿಕ ಕಾರಣಗಳಿಂದಾಗಿ ಭಾರತದ ಕೃಷಿ ಉತ್ಪತ್ತಿಯು ಕನಿಷ್ಠ ಮಟ್ಟದಲ್ಲಿ ಇದೆ ಎಂದು ಹೇಳಬಹುದು.

ಭಾರತೀಯ ರೈತರು ಹಳೆಯ ಕಾಲದ ಹಾಗೂ ಅಸಮರ್ಪಕರಾದ ಉಪಕರಣಗಳನ್ನೇ ಉಪಯೋಗಿಸುತ್ತಾರೆ. ನಮ್ಮ ರೈತರು ಸಂಪ್ರದಾಯಸ್ಥರು, ಅನಕ್ಷರಸ್ಥರು, ಹಾಗೂ ಆರ್ಥಿಕವಾಗಿ ಹಿಂದುಳಿದವರೂ ಇರುವುದರಿಂದ ಮುಂದುವರೆದ ದೇಶಗಳಲ್ಲಿ ಉಪಯೋಗಿಸುವ ಸಲಕರಣೆಗಳನ್ನು ನಮ್ಮಲ್ಲಿ ಉಪಯೋಗಿಸಲಾಗುತ್ತಿಲ್ಲ. ಇತ್ತೀಚೆಗೆ ತೀರ ಕೆಲವು ಜನ ಕೃಷಿಕರು ಆಧುನಿಕ ಸಲಕರಣೆಗಳನ್ನು ಉಪಯೋಗಿಸುತ್ತಿದ್ದಾರೆ. ಉತ್ಪಾದನೆಯನ್ನು ಹೆಚ್ಚಿಸಲು ಹೊಸ ಪದ್ಧತಿಯ ಉಪಕರಣಗಳು ಹಾಗೂ ರಾಸಾಯನಿಕ ಮತ್ತು ನೈಸರ್ಗಿಕ ಗೊಬ್ಬರಗಳ ಉಪಯೋಗ ಅವಶ್ಯಕವಾಗಿ ಮಾಡಬೇಕು. ಉತ್ತಮ ಬೀಜಗಳ ಉಪಯೋಗ ದಿಂದ ಉತ್ಪಾದನೆ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಆದರೆ ಭಾರತೀಯ ಒಕ್ಕಲಿಗ ಬಂಡವಾಳದ ಕೊರತೆಯಿಂದಾಗಿ ಕಳಪೆ ಬೀಜ, ಉಪಕರಣಗಳನ್ನೇ ತಲೆತಲಾಂತರದಿಂದಲೂ ಉಪಯೋಗಿಸುತ್ತಾ ಬಂದಿದ್ದಾನೆ. ಸುಧಾರಿಸಿದ ಉಪಕರಣ, ರಾಸಾಯುನಿಕ ಗೊಬ್ಬರಗಳ ಉಪಯೋಗ ಮತ್ತು ಸುಧಾರಿಸಿದ ಬೀಜಗಳ ಉಪಯೋಗಕ್ಕೆ ಹಣ ಬೇಕೇ ಬೇಕು. ಹಣದ ಕೊರತೆಯಿಂದ ಕೆಲವು ಜನರು ಇವುಗಳನ್ನೆಲ್ಲಾ ಉಪಯೋಗಿಸು ತ್ತಿಲ್ಲ. ಇನ್ನು ಕೆಲವು ಜನರು ಅಜ್ಞಾನದಿಂದಾಗಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿಲ್ಲ.

ನೀರಾವರಿ ಸೌಲಭ್ಯದ ಕೊರತೆ ಭಾರತದ ಒಕ್ಕಲುತನದ ಮೂಲಭೂತ ಸಮಸ್ಯೆಗಳಲ್ಲೊಂದಾಗಿದೆ. ಬಹು ಸಂಖ್ಯೆ ಬೇಸಾಯಗಾರರು ಮಳೆಯನ್ನೇ ಅವಲಂಬಿಸಿದ್ದಾರೆ. ಸ್ವಲ್ಪ ಜನ ಒಕ್ಕಲಿಗರಿಗೆ ಮಾತ್ರಾ ನೀರಾವರಿಯ ಸೌಲಭ್ಯ ದೊರೆತಿದೆ. ನೀರಿನ ಸೌಕರ್ಯವಿಲ್ಲದೆ. ರಾಸಾಯನಿಕ ಗೊಬ್ಬರದ, ಸುಧಾರಿಸಿದ ಬೀಜದ ಉಪಯೋಗ ಅಸಾಧ್ಯ. ನೀರಾವರಿ ಸೌಲಭ್ಯವಿಲ್ಲದಿರುವುದರಿಂದ ಕೇವಲ ಮಳೆಯನ್ನೇ ನಂಬಿದರೆ ಒಂದು ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ಅದು ಸಹ ನಿಸರ್ಗದ ನಿಯಂತ್ರಣದಲ್ಲಿರುವುದರಿಂದ ಉತ್ಪಾದನೆ ಅನಿಶ್ಚಿತವಾಗಿದೆ.

ಸಾಮಾನ್ಯವಾಗಿ ಭಾರತೀಯ ರೈತರು ನಿರಕ್ಷರಿಗಳು, ಅಜ್ಞಾನಿಗಳು, ಸಂಪ್ರದಾಯಸ್ಥರು. ಅವರ ಮೂಢನಂಬಿಕೆ ಹಾಗೂ ನಿರುಪಯುಕ್ತ ಶ್ರದ್ಧೆಗಳು

ಪ್ರಗತಿಪರ ಕೃಷಿಗೆ ಅಡ್ಡಿಬರುತ್ತಿವೆ. ಕೃಷಿಕರಲ್ಲಿಯೂ ಸಂಘಟನೆ ಇಲ್ಲದಿರುವುದು ಮತ್ತು ಸಹಕಾರದ ಅಭಾವ ಇವು ಅನೇಕ ಪ್ರಗತಿಪರ ಕಾರ್ಯಗಳಿಗೆ ಆತಂಕಕಾರಿಯಾಗಿವೆ.

ನೀರಾವರಿ ಮತ್ತು ನೀರಾವರಿಯ ಸಮಸ್ಯೆಗಳು

ಕೈಗಾರಿಕೆಗೆ ಚಾಲಕ ಶಕ್ತಿ ಎಷ್ಟು ಮುಖ್ಯವೋ ಬೇಸಾಯಕ್ಕೆ ನೀರು ಅಷ್ಟೇ ಮುಖ್ಯ. ನೀರಿಲ್ಲದಿದ್ದರೆ ಬೇಸಾಯವಿಲ್ಲ. ನೀರು ಮಳೆಯಿಂದ ಸಹಜವಾಗಿ ಒದಗಿಬಂದು ಬೆಳೆಗೆ ಯಾವಾಗ ಎಷ್ಟು ಬೇಕೋ ಅಷ್ಟು ದೊರೆಯುತ್ತದೆಂಬುದು ನಮ್ಮ ದೇಶದ ಹವಾಗುಣದ ಕಾರಣದಿಂದ ಸಾಧ್ಯವಿಲ್ಲ. ಮಳೆಯನ್ನು ನೆಚ್ಚು ವಂತಿಲ್ಲ. ಯಾವಾಗ ಎಷ್ಟು, ಎಲ್ಲಿ ಮಳೆಯಾಗುತ್ತದೆಂದು ಹೇಳಲು ಬರುವಂತಿಲ್ಲ. ವರ್ಷದ ಕೆಲವೇ ತಿಂಗಳಲ್ಲಿ ಬೀಳುವ ಮಳೆ ನೀರು ಸಂಗ್ರಹಿತವಾಗಿದ್ದರೆ ಮಾತ್ರಾ ಇತರ ತಿಂಗಳುಗಳಲ್ಲಿ ನೀರು ಒದಗಿ ಬರುತ್ತದೆ.

ಮಳೆ ಸಾಲದ ಮತ್ತು ಅನಿಶ್ಚಿತ ಮಳೆಯಿರುವ ಪ್ರದೇಶದಲ್ಲಿ ಕೆರೆ, ಕಟ್ಟೆ, ಕೊಳ, ಬಾವಿ, ಅಣೆಕಟ್ಟೆ, ಕೊಳವೆ ಬಾವಿ ಮುಂತಾದ ವಿಧಾನಗಳಿಂದ ಬೇಸಾಯಕ್ಕೆ ನೀರನ್ನು ಒದಗಿಸುವುದಕ್ಕೆ ನೀರಾವರಿ ಎನ್ನುತ್ತೇವೆ. ನೀರಾವರಿಯೊಡನೆ ನೀರಿನ ಈ ಬಗೆಯ ಬಳಕೆಯು ಇತರ ಹಲವು ಉಪಯೋಗಗಳನ್ನು ಪ್ರಾಸಂಗಿಕವಾಗಿ ಒದಗಿಸಿಕೊಡುತ್ತದೆ. ನೀರಾವರಿಯೊಂದಿಗೆ ಅದರಲ್ಲೂ ನದಿ ನೀರಾವರಿಯೋಜನೆಯೊಂದಿಗೆ ವಿವಿದೋದ್ದೇಶ ಉಪಯೋಗಗಳನ್ನು ಪಡೆಯಬಹುದಾಗಿದೆ. ಇತರ ಉದ್ದೇಶಗಳೆಂದರೆ ನೆರೆ ನಿಯಂತ್ರಣ, ಜಲಸಾರಿಗೆ, ಮೀನುಗಾರಿಕೆ, ವಿದ್ಯುತ್ ಉತ್ಪಾದನೆ, ಭೂ ಸವೆತ ತಡೆಯುವುದು, ಭೂಸಾರ ಸಂರಕ್ಷಣೆ, ಮನೋರಂಜನೆ ಆರೋಗ್ಯ ಧಾಮಗಳ ನಿರ್ಮಾಣ ಇತ್ಯಾದಿ.

೧. ಭಾರತದಲ್ಲಿ ಮಳೆ ಅನಿಶ್ಚಿತ. ಅದು ಬರುವ ಸಮಯ ಅನಿಶ್ಚಿತ. ಬರುವ ಪ್ರಮಾಣ ಅನಿಶ್ಚಿತ. ಬರುವ ಪ್ರದೇಶ ಅನಿಶ್ಚಿತ. ಆದರೆ ನೀರು ಇಲ್ಲದೆ ಬೇಸಾಯ ಅಸಾಧ್ಯ. ಈ ಅನಿಶ್ಚಿತ ಸಂಗತಿಯನ್ನಾಧರಿಸಿ ನಡೆಸುವ ಬೇಸಾಯೋದ್ಯಮ ನಿಜಕ್ಕೂ ಒಂದು ರೀತಿಯ ಜೂಜು ಎಂದರೆ ತಪ್ಪಲ್ಲ. ಕೆಲವೊಮ್ಮೆ ಅತಿವೃಷ್ಟಿಯಾಗಿ ಪ್ರವಾಹಗಳು ಸಂಭವಿಸುತ್ತದೆ. ಕೆಲವೊಮ್ಮೆ ಅನಾವೃಷ್ಟಿಯಿಂದಾಗಿ ಬರ ಸಂಭವಿಸಬಹುದು. ಎರಡರ ಪರಿಣಾಮವೂ

ಪ್ರಾಣಹಾನಿ, ಬೆಳೆ ನಷ್ಟ, ದನಕರುಗಳಿಗೆ ಜೀವ ಭಯ ಮುಂತಾದ ನಷ್ಟು ಸಂಭವಗಳು. ಈ ಅನಿಶ್ಚಿತ ಮಳೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕೃಷಿಗೆ ಅನುಕೂಲವಾಗುವಂತೆ ಮಾಡಿಕೊಳ್ಳಲು ನೀರಾವರಿ ಅಗತ್ಯವಿದೆ.

೨. ಮಳೆಯು ಕೇವಲ ಒಂದೆರಡು ತಿಂಗಳು ಸುರಿದು ಉಳಿತ ತಿಂಗಳುಗಳಲ್ಲಿ ಮಳೆ ಬೀಳುವುದೇ ಇಲ್ಲ. ಕಾಲದಿಂದ ಕಾಲಕ್ಕೆ ಇರುವ ಈ ವ್ಯತ್ಯಾಸವನ್ನು ನಿವಾರಿಸಲು ನೀರಾವರಿ ಬೇಕಾಗುತ್ತದೆ.

೩. ಮಳೆಯ ನೀರು ಮಾತ್ರವೇ ಎಲ್ಲಾ ಬೆಳೆಗಳಿಗೂ ಸಾಲುವುದಿಲ್ಲ. ಕೆಲವು ಬೆಳೆಗಳಿಗೆ ಅಧಿಕ ನೀರು ಬೇಕಾಗುತ್ತದೆ. ಇದಕ್ಕಾಗಿ ನೀರಾವರಿಯ ಅಗತ್ಯವಿದೆ.

೪. ಭೂ ಸವೆತವನ್ನು ತಡೆಗಟ್ಟಲು, ಭೂ ಸಾರ ಸಂರಕ್ಷಣೆ ಮಾಡಲು ನೀರಾವರಿ ಅಗತ್ಯವಾಗಿದೆ.

೫. ಅತಿ ಪ್ರವಾಹವನ್ನೆಬ್ಬಿಸುವ ನದಿಗಳ ಪ್ರವಾಹವನ್ನು ಇಳಿಸಲು ನೀರಾವರಿ ಯೋಜನೆಗಳು ಅಗತ್ಯ. ಉದಾಹರಣೆಗೆ ಬ್ರಹ್ಮಪುತ್ರಾನದಿ, ದಾಮೋದರ ನದಿ, ಗೋದಾವರಿ ಮುಂತಾದ ನದಿಗಳು ಪ್ರತಿವರ್ಷ ತುಂಬಿ ಹರಿದು ನೆರೆಯನ್ನುಂಟು ಮಾಡುತ್ತವೆ. ನೆರೆಯ ಹಾವಳಿಯನ್ನು ಕಡಿಮೆ ಮಾಡಲು ಅಣೆಕಟ್ಟನ್ನು ಕಟ್ಟಿ ನೀರು ಹರಿಯುವ ದಿಕ್ಕನ್ನು ಬದಲಿಸಬೇಕು.

೬. ಅಂತರ್ಜಲ ಮೂಲಗಳನ್ನು ಸೂಕ್ತವಾಗಿ ಬಳಸಿಕೊಳ್ಳಲು ನೀರಾವರಿಯ ಅಗತ್ಯವಿದೆ.

ನೀರಾವರಿಯ ವಿಧಾನಗಳು ಅಥವಾ ನೀರಾವರಿಗೆ ನೀರಿನ ಮೂಲಗಳು

ನೀರಾವರಿಯಲ್ಲಿ ಸಾಮಾನ್ಯವಾಗಿ ನಾಲ್ಕು ವಿಧಾನಗಳಿವೆ.

೧. ಕೆರೆಗಳು, ಸರೋವರಗಳು

೨. ಬಾವಿಗಳು

೩. ಕಾಲುವೆಗಳು

೪. ತುಂತುರು ನೀರಾವರಿ

ಕೆರೆಗಳು ಮತ್ತು ಸರೋವರಗಳು ಇವು ಸಾಮಾನ್ಯವಾಗಿ ಪ್ರಾಕೃತಿಕ ಸನ್ನಿವೇಶದಿಂದ ರೂಪುಗೊಂಡ, ಮಳೆಯ ನೀರು ಸಹಜವಾಗಿ ಹರಿದು ಬಂದು ಸಂಗ್ರಹವಾಗುವ ತಗ್ಗಾದ ಪ್ರದೇಶಗಳು. ಈ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು

ಒಡ್ಡು ಇಲ್ಲವೆ ಏರಿಯನ್ನು ಕಟ್ಟಿಕೊಳ್ಳಲಾಗುತ್ತದೆ. ಹೆಚ್ಚುವರಿ ಸಂಗ್ರಹವಾದ ನೀರು ಹರಿದುಹೋಗಲು ಕೋಡಿಯನ್ನು, ಉಳಿದಿರುವ ನೀರನ್ನು ಹಾಳತವಾಗಿ ಬಳಸಿಕೊಳ್ಳಲು ತೂಬುಗಳನ್ನು ನಿರ್ಮಿಸಲಾಗುತ್ತದೆ. ಕೆರೆಗಳನ್ನು ಗ್ರಾಮಗಳಲ್ಲಿ ಸ್ಥಳೀಯ ಸಂಸ್ಥೆಗಳು ಇಲ್ಲವೆ ರಾಜ್ಯ ಸರ್ಕಾರಗಳು ನಿರ್ಮಿಸುತ್ತವೆ. ಸಣ್ಣ ಪುಟ್ಟ ಖಾಸಗಿ ಒಡೆತನದ ಕೆರೆಗಳೂ ಇರುತ್ತವೆ.

ಕೆರೆಗಳಿಂದ ನೀರಾವರಿ ಸೌಲಭ್ಯ ಪಡೆಯುವುದು ಭಾರತದಲ್ಲಿ ಬಹಳ ಹಿಂದಿನಿಂದಲೂ ನಡೆದು ಬಂದಿದೆ. ನೀರಾವರಿ ಸೌಲಭ್ಯ ಪಡೆದ ಜಮೀನಿನಲ್ಲಿ ಇಂದು ಶೇ. ೧೮ ರಷ್ಟನ್ನು ಕೆರೆಗಳು ಒದಗಿಸುವ ನೀರಾವರಿಯಾಗಿದೆ. ನಮ್ಮ ದೇಶದಲ್ಲಿ ಕೆರೆ ನೀರಾವರಿ ಸಾಮಾನ್ಯವಾಗಿ ಹೆಚ್ಚಾಗಿರುವ ರಾಜ್ಯಗಳೆಂದರೆ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಒರಿಸ್ಸಾ ಮತ್ತು ಮಧ್ಯಪ್ರದೇಶ.

ಕೆರೆಗಳು ಕೆಲವು ಮಿತಿಗಳನ್ನು ಹೊಂದಿದೆ. ಮಳೆ ಬಾರದಿದ್ದಲ್ಲಿ ಕೆರೆ ತುಂಬುವುದಿಲ್ಲ. ಕೆರೆಯ ನೀರು ಬೇಸಿಗೆ ಪೂರ್ತಿ ಸಾಲದೇ ಹೋಗಬಹುದು. ಕೆರೆಗಳಲ್ಲಿ ಪದೇ ಪದೇ ಹೂಳು ತುಂಬಿ, ಅದನ್ನೆತ್ತುವ ಅಗತ್ಯ ಬೀಳುತ್ತದೆ. ಕೆಲವೊಮ್ಮೆ ಇದ್ದಕ್ಕಿದ್ದಂತೆ ಕೆರೆಯು ಹೆಚ್ಚಾಗಿ ಬಿದ್ದ ಮಳೆಯಿಂದ ಏರಿ ಒಡೆದು ಹಾನಿಯುಂಟಾಗುವ ಸಂಭವವೂ ಇರುತ್ತದೆ.

ಬಾವಿ ನೀರಾವರಿ ಎಂದರೆ ಅಂತರ್‌ಜಲವನ್ನು ಭೂಮಿಯ ಮೈಲ್ಮೈಗೆ ತಂದು ಅದನ್ನು ಬೇಸಾಯಕ್ಕೆ ಬಳಸುವುದು. ಭಾರತದ ಒಟ್ಟು ನೀರಾವರಿ ಸೌಲಭ್ಯ ಪಡೆದ ಜಮೀನಿನಲ್ಲಿ ಶೇ. ೨೫ ರಷ್ಟು ಬಾವಿಗಳಿಂದ ನೀರಾವರಿ ಪಡೆಯುತ್ತದೆ. ಬಾವಿಗಳು ಏತದ, ಕಪಿಲೆಯ ಬಾವಿಗಳಾಗಬಹುದು. ಗಾಲಿಯ ಬಾವಿಗಳೂ ಆಗಬಹುದು. ಈಗೀಗ ವಿದ್ಯುತ್ ಯಂತ್ರ ಚಾಲಿತ ಕೊಳವೆ ಬಾವಿಗಳು ಜನಪ್ರಿಯವಾಗುತ್ತಿವೆ.

ಬಾವಿಯ ನಿರ್ಮಾಣ ಮತ್ತು ನಿರ್ವಹಣೆ ಖಾಸಗಿಯಾಗಿ ನಡೆಯಬೇಕು. ಸರ್ಕಾರಗಳೂ, ಸಹಕಾರೀ ಸಂಘಗಳೂ, ಬ್ಯಾಂಕುಗಳೂ ಬಾವಿಯ ನಿರ್ಮಾಣಕ್ಕೆ ಸಾಲಗಳನ್ನೊದಗಿಸುತ್ತವೆ. ಬಾವಿ ನೀರಿನ ಉಪಯೋಗವೂ ಖಾಸಗಿಯಾಗಿರುತ್ತದೆ. ಕರ್ನಾಟಕ, ರಾಜಾಸ್ಥಾನ, ಬಿಹಾರ, ಉತ್ತರ ಪ್ರದೇಶ, ಪಂಜಾಬ್, ಮಧ್ಯಪ್ರದೇಶ, ಮತ್ತು ಮಹಾರಾಷ್ಟ್ರಗಳಲ್ಲಿ ಬಾವಿಗಳ ಬಳಕೆ

ಹೆಚ್ಚಾಗಿದೆ. ಕೊಳವೆ ಭಾವಿಗಳು ಅಥವಾ ಬೋರ್‌ವೆಲ್‌ಗಳು ಇಂದು ಹೆಚ್ಚು ಜನಪ್ರಿಯವಾಗುತ್ತಿದೆ. ಆದರೆ ಈ ಭಾವಿಗಳಿಗೆ ಹೆಚ್ಚು ಖರ್ಚು ತಗಲುತ್ತದೆ. ಶ್ರೀಮಂತ ಜನರಿಗೆ ಇದು ಸಾಧ್ಯ. ಈಗೀಗ ಕೃಷಿ ಬ್ಯಾಂಕುಗಳೂ ಬೋರ್‌ವೆಲ್ ಹಾಕಿಸಲು ಆರ್ಥಿಕನೆರವು ನೀಡುತ್ತಿದೆ. ಬೋರ್ ಹಾಕಿಸಿದೆಡೆಗಳಲ್ಲೆಲ್ಲಾ ನೀರು ಬರುವ ಖಾತರಿ ಇಲ್ಲ. ನೀರೆತ್ತಲು ಚಾಲಕಶಕ್ತಿಗಾಗಿ ವಿದ್ಯುತ್ ಅಥವಾ ಡೀಸೆಲ್ ಮೋಟಾರನ್ನೇ ಅವಲಂಬಿಸಬೇಕು. ಭಾವಿ ನೀರಿನಲ್ಲಿ ಮೆಕ್ಕಲು ಮತ್ತಿತರ ಫಲವತ್ತತೆಯ ಗುಣಗಳು ದೊರೆಯುವುದಿಲ್ಲ.

ಕಾಲುವೆ ನೀರಾವರಿ ಸಾರ್ವತ್ರಿಕ ನೀರಾವರಿ ವಿಧಾನ. ಕಾಲುವೆಗಳನ್ನು ನಿರ್ಮಿಸಿ ಅದರ ಮೂಲಕ ಸಕಲರಿಗೂ ನೀರು ಒದಗಿಸುವ ಪ್ರಯತ್ನ ನಡಯುತ್ತಿದೆ. ಭಾರತದಲ್ಲಿ ಒಟ್ಟು ನೀರಾವರಿಯಾಗುವ ಪ್ರದೇಶದಲ್ಲಿ ಶೇ ೫೦% ರಷ್ಟು ಭಾಗ ಕಾಲುವೆಗಳಿಂದ ನೀರಾವರಿಯಾದ ಪ್ರದೇಶವಾಗಿದೆ.

ಕಾಲುವೆಗಳಲ್ಲಿ ಎರಡುವಿಧ. ನದಿಕಾಲುವೆ ಮತ್ತು ಜಲಾಶಯ ಕಾಲುವೆ. ನದಿಗೆ ಅಡ್ಡಗಟ್ಟೆ ಕಟ್ಟಿ ನದಿಯ ನೀರಿನಮಟ್ಟ ಸಾಕಷ್ಟಿರುವಾಗ ಹರಿವ ನೀರಿನಲ್ಲಿ ಜಾಡನ್ನು ಬದಲಿಸಿ ನೀರು ಹಾಯಿಸಿಕೊಳ್ಳುವುದು ನದಿಕಾಲುವೆ ನೀರಾವರಿ. ನದಿಯಲ್ಲಿ ನೀರಿನಮಟ್ಟ ಕಡಿಮೆಯಾದರೆ ಈ ಕಾಲುವೆಗಳಲ್ಲಿಯೂ ನೀರು ಇರುವುದಿಲ್ಲ.

ಇದರಲ್ಲಿಯೂ ಪ್ರವಾಹ ಕಾಲದ ಕಾಲುವೆ ಮತ್ತು ಸರ್ವಋತುಕಾಲುವೆ ಎಂದು ಎರಡುವಿಧ. ಪ್ರವಾಹದ ಕಾಲದ ಕಾಲುವೆಯು ಕೆಲವೇ ತಿಂಗಳುಗಳು ನೀರು ಒದಗಿಸುವ ಕಾಲುವೆ. ಪ್ರವಾಸ ಬಂದು ನೀರಿನ ಮಟ್ಟ ಏರಿದ್ದಾಗ ಮಾತ್ರಾ ಈ ಕಾಲುವೆಗಳಲ್ಲಿ ನೀರು ಹರಿಯುತ್ತದೆ. ಅಬ್ಬರ ಇಳಿದು ನದಿ ನೀರಿನಮಟ್ಟ ಕಡಿಮೆಯಾದಾಗ ಕಾಲುವೆಗಳು ಬತ್ತಿಹೋಗುತ್ತದೆ. ಇಂತಹ ಕಾಲುವೆಗಳು ಪಂಜಾಬ್, ಹರಿಯಾಣ, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿವೆ. ನದಿಗಳಿಗೆ ಅಣೆಕಟ್ಟು ಕಟ್ಟಿ, ಜಲಾಶಯಗಳನ್ನು ರಚಿಸಿ, ನೀರು ಸಂಗ್ರಹವಾಗುವಂತೆ ಮಾಡಿ ವರ್ಷವಿಡೀ ಕಾಲುವೆಗಳಲ್ಲಿ ನೀರು ಹರಿಯುವಂತೆ ಮಾಡುವುದು ಸರ್ವಋತು ಕಾಲುವೆ ನೀರಾವರಿ. ನಮ್ಮ ದೇಶದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ನದಿಗಳು ಕೆಲವು ತಿಂಗಳುಗಳಲ್ಲಿ ಮಾತ್ರಾ ತುಂಬಿ ಹರಿಯುವುದರಿಂದ ಇಂಥ ಕಾಲುವೆಗಳು ಅಗತ್ಯವಾಗಿವೆ.

ನೀರನ್ನು ಪೈಪುಗಳ ಮೂಲಕ ಬೆಳೆಗಳ ನಡುವೆ ಹಾಯಿಸಿ ಪೈಪುಗಳಿಗೆ ತೂತುಗಳನ್ನು ಮಾಡುವುದರ ಮೂಲಕ ಬೆಳೆಗೆ ನೀರು ಹನಿಯುವಂತೆ ಮಾಡುವ ವಿಧಾನವು ತುಂತುರು ನೀರಾವರಿ ಎನಿಸಿಕೊಳ್ಳುತ್ತದೆ. ಈ ವಿಧಾನದಲ್ಲಿ ನೀರು ನೇರವಾಗಿ ಬೆಳೆಗೇ ತಲಪುತ್ತದೆ. ಮಾರ್ಗದಲ್ಲಿ ಹರಿಯುವಾಗ ನೀರು ಒಂದಿನಿತು ಪೋಲಾಗುವುದಿಲ್ಲ. ಪರ್ವತ ಪ್ರದೇಶದಲ್ಲಿ ಈ ನೀರಾವರಿ ಹೆಚ್ಚು ಉಪಯೋಗಕರ. ಕಾಲುವೆಗಳಿಲ್ಲಿ ನೀರು ಮೇಲಕ್ಕೆ ಹರಿಯುವುದಿಲ್ಲವಷ್ಟೇ, ಬೆಟ್ಟದ ಇಳಿಜಾರಿನ ಹಳ್ಳಕೊಳ್ಳಗಳಿಂದ ನೀರನ್ನು ಪಂಪ್ ಮಾಡಿ ಈ ಬಗೆಯ ನೀರಾವರಿ ಎತ್ತರದ ಪ್ರದೇಶ ಗಳಿಗೆ ನೀರನ್ನು ಒದಗಿಸುತ್ತದೆ. ಮಣ್ಣಿನ ಮಡಿಕೆಗಳಿಗೆ ಸಣ್ಣ ತೂತನ್ನು ಮಾಡಿ ಅದನ್ನು ಬೇರಿನ ಬುಡದಲ್ಲಿ ಹೂತು ಅದಕ್ಕೆ ಪ್ರತಿನಿತ್ಯವೂ ನೀರನ್ನು ತುಂಬಿಸಿ ನೀರು ನಿಧಾನವಾಗಿ ಬೇರಿಗಿಳಿಯುವ ಉಪಾಯವನ್ನು ವ್ಯವಸಾಯಗಾರರು ಕಂಡುಹಿಡಿದುಕೊಂಡಿದ್ದಾರೆ.

ದೇಶದ ವ್ಯವಸಾಯವು ಉತ್ತಮ ಮಟ್ಟದಲ್ಲಿದ್ದರೆ ಅದು ಸಮೃದ್ಧಿಯ ಒಂದು ಚಿಹ್ನೆ. ಕೃಷಿಯ ಬೆಳವಣಿಗೆಯಲ್ಲಿ ಗೊಬ್ಬರಗಳ ಪಾತ್ರ ಹಿರಿದು. ಗೊಬ್ಬರ ಸಸ್ಯಗಳ ಅನ್ನ. ಭೂಮಿಗೆ ಕೊಡುವ ಗೊಬ್ಬರವು ಭೂಸತ್ವ ಹೆಚ್ಚಿಸುವುದಕ್ಕೂ, ಹೆಚ್ಚಿಗೆಬೆಳೆ ಬೆಳೆದು ಕೊಳ್ಳುವುದಕ್ಕೂ ನೆರವಾಗುತ್ತದೆ. ಪ್ರತಿವರ್ಷ ಜಮೀನುಗಳಲ್ಲಿ ಬೆಳೆ ಬೆಳೆದುಕೊಳ್ಳುತ್ತೇವೆ. ಈ ಬೆಳೆಗಳು ಭೂಮಿಯಲ್ಲಿನ ಸತ್ವವನ್ನು ಹೀರಿಕೊಂಡು ಬೆಳೆಯುತ್ತದೆ. ಈ ಕೊರತೆಯಾದ ಸತ್ವವನ್ನು ಮರಳಿ ಭೂಮಿಗೆ ಪೂರೈಸುವುದೇ ಗೊಬ್ಬರದ ಕಾರ್ಯ.

ಗೊಬ್ಬರಗಳಲ್ಲಿ ಎರಡು ಬಗೆ. ಒಂದು ನಾಡಗೊಬ್ಬರ ಮತ್ತೊಂದು ರಾಸಾಯನಿಕ ಗೊಬ್ಬರಗಳು. ನಾಡಗೊಬ್ಬರಗಳು ಪೂರಾತನ ಕಾಲದಿಂದಲೂ ಬಳಕೆಯಲ್ಲಿದೆ. ಕೊಟ್ಟಿಗೆ ಗೊಬ್ಬರ, ಕೊಳೆತ ಗೊಬ್ಬರ, ಹಸುರೆಲೆಗೊಬ್ಬರ, ಮಲಮೂತ್ರಗೊಬ್ಬರ, ಮೀನುಗೊಬ್ಬರ ಹಾಗೂ ಎಲುಬು ಮಾಂಸಗಳ ಗೊಬ್ಬರ ಇವುಗಳು ನಾಡಗೊಬ್ಬರಗಳ ಗುಂಪಿಗೆ ಸೇರಿದುವುಗಳಾಗಿವೆ. ರಾಸಾಯನಿಕ ಗೊಬ್ಬರಗಳಲ್ಲಿ ಅಮೋನಿಯಂ ಯೂರಿಯಾ ಸಲ್ಫೇಟ್, ಕ್ಯಾಲ್ಸಿಯಂ, ಅಮೋನಿಯಂ ನೈಟ್ರೇಟ್ ಸೂಪರ್ ಫಾಸ್ಪೇಟ್, ಪೊಟ್ಯಾಷ್, ಇವುಗಳು ರಾಸಾಯನಿಕ ಗೊಬ್ಬರಗಳ ಮಿಶ್ರಣವಾಗಿದೆ.

ಬೆಳೆದ ಬೆಳೆಗಳನ್ನು ಮಾರಲು ಮಾರುಕಟ್ಟೆಗಳಲ್ಲಿ ಮಧ್ಯವರ್ತಿಗಳ

ಪ್ರವೇಶದಿಂದಾಗಿ ರೈತರಿಗೆ ಹಾನಿಯುಂಟಾಗುತ್ತದೆ. ಇವರು ರೈತರ ಬೆಳೆಗಳನ್ನು ಅತಿಕಡಿಮೆ ಬೆಲೆಗೆ ಕೊಂಡು ಗಿರಾಕಿಗಳಿಗೆ ಅತಿಹೆಚ್ಚಿನ ಬೆಲೆ ಮಾರಿ ಮಧ್ಯದಲ್ಲಿ ಲಾಭಗಳಿಸುತ್ತಾರೆ.

ಈಗ ನಿಯಂತ್ರಿತ ಮಾರುಕಟ್ಟೆಗಳಲ್ಲಿ ಒಂದೇ ರೀತಿಯ ದರ, ತೂಕ, ಅಳತೆ ಎಲ್ಲವನ್ನೂ ನಿಷ್ಕರ್ಷೆಮಾಡಿರುತ್ತಾರೆ. ಇದರಿಂದಾಗಿ ರೈತರಿಗಾಗುವ ಮೋಸ, ಅನ್ಯಾಯಗಳು ಕಡಿಮೆಯಾಗಿ ಅವರ ವಸ್ತುಗಳಿಗೆ ಯೋಗ್ಯವಾದ ಹಾಗೂ ನ್ಯಾಯುವಾದ ಬೆಲೆಯು ಸಿಗುತ್ತದೆ. ಸಾರಿಗೆ ಸೌಲಭ್ಯಗಳೂ ಹೆಚ್ಚುತ್ತಿರುವುದರಿಂದ ಉತ್ಪನ್ನಗಳನ್ನು ಸಲೀಸಾಗಿ ತಂದು ಮಾರಾಟ ಮಾಡಿಕೊಳ್ಳಬಹುದು. ಕೆಲವು ನಿಯಂತ್ರಿತ ಮಾರುಕಟ್ಟೆ ಹಾಗೂ ಸಹಕಾರೀ ಮಾರುಕಟ್ಟೆಗಳಲ್ಲಿ ರೈತರಿಗೆ ವಸತಿ ಸೌಕರ್ಯವೂ ಬ್ಯಾಂಕಿನ ಸಹಾಯವೂ ದೊರೆಯುತ್ತದೆ.

ವಿಶ್ವಬ್ಯಾಂಕ್ (World Bank)

ಪ್ರಥಮ ಮಹಾಯುದ್ಧವು ರಾಷ್ಟ್ರಸಂಘ (League of Nations)ದ ಸ್ಥಾಪನೆಗೆ ಕಾರಣವಾದರೆ ದ್ವಿತೀಯ ಮಹಾಯುದ್ಧವು ವಿಶ್ವಸಂಸ್ಥೆ ಅಥವಾ ಸಂಯುಕ್ತ ರಾಷ್ಟ್ರಸಂಘ (The United Nations Organization)ದ ಸ್ಥಾಪನೆಗೆ ಕಾರಣವಾಯಿತು. ವಿಶ್ವಸಂಸ್ಥೆಯ ಮಹಾನ್ ಗುರಿಗಳಲ್ಲಿ ಅಂತರರಾಷ್ಟ್ರೀಯಾ ಆರ್ಥಿಕ ಸಮಸ್ಯೆಯನ್ನು ಬಗೆಹರಿಸುವುದೂ ಸಹ ಒಂದಾಗಿದ್ದು ಇದಕ್ಕಾಗಿ ವಿಶ್ವಬ್ಯಾಂಕನ್ನು ಸ್ಥಾಪಿಸಲಾಗಿದೆ. ವಿಶ್ವದಾದ್ಯಂತ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯವನ್ನು ಸಾಧಿಸುವುದು ಈ ಬ್ಯಾಂಕಿನ ಉದ್ದೇಶ. ಈ ಬ್ಯಾಂಕ್ ಕಾರ್ಯಮಂಡಳಿಯೂ ೧೯೬೫ರಲ್ಲಿ ಸ್ಥಾಪನೆಯಾಗಿ ವರ್ಷಕ್ಕೆ ಎರಡು ಬಾರಿ ಸಭೆ ಸೇರುತ್ತದೆ.

ಜಗತ್ತಿನ ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಿ ಅವುಗಳ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಲೆತ್ನಿಸಿದೆ. ವಿಶ್ವಬ್ಯಾಂಕ್ ಹಾಗೆಯೇ ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ಅವುಗಳ ಯೋಜನೆಗಳಿಗೆ ಹಣ ಒದಗಿಸುತ್ತಿದೆ. ಉದಾಹರಣೆಗೆ ಭಾರತದ ಪಂಚವಾರ್ಷಿಕ ಯೋಜನೆಗೆ.

ಹೀಗೆ ವಿಶ್ವಬ್ಯಾಂಕಿನ ನೆರವಿನಿಂದ ಭಾರತದ ಅನೇಕ ಯೋಜನೆಗಳು ರೂಪುಗೊಳ್ಳುತ್ತಿವೆ.

ಬ್ಯಾಂಕುಗಳ ಸುಧಾರಣೆ

ಶಾಖೋಪಶಾಖೆಗಳಾಗಿ ಬೆಳೆದಿರುವ ಬ್ಯಾಂಕುಗಳಿಗೆ ಕಾಯಕಲ್ಪ ಅಗತ್ಯವಾಗಿದೆ. ಕಟ್ಟು ಕಟ್ಟಳೆಗಳ ಉಸಿರು ಕಟ್ಟಿಸುವ ವ್ಯವಸ್ಥೆಯಿಂದ ಆರ್ಥಿಕ ಚಟುವಟಿಕೆಗಳನ್ನು ಮುಕ್ತಗೊಳಿಸಿ ಸುಸೂತ್ರವಾಗುವಂತೆ ಮಾಡಿ ವಿಶ್ವವ್ಯಾಪಿ ಮಾರುಕಟ್ಟೆಯತ್ತ ನಮ್ಮ ಮುಖವನ್ನು ತಿರುಗಿಸುವ ಸುಧಾರಣೆಯ ಹಾದಿಯಲ್ಲಿ ನಮ್ಮ ದೇಶ ಮೊದಲ ಮಜಲನ್ನು ಮುಗಿಸಿ ಎರಡನೆಯ ಮಜಲಿನತ್ತ ಕಣ್ಣು ಹಾಯಿಸತೊಡಗಿದೆ.

ಆರ್ಥಿಕ ಉದಾರೀಕರಣದಲ್ಲಿ ಮೊದಲು ಎನ್ನಬಹುದಾದದ್ದೆಂದರೆ ಹಣಕಾಸು ವಲಯದ ಮೇಲಣ ದಿಗ್ಬಂಧನಗಳ ತೆರವು. ಹಣಕಾಸು ಸಂಸ್ಥೆಗಳಿಗೆ ಪುಟಿಯುವ ಸ್ವಾತಂತ್ರ್ಯ ಭೂಮಂಡಲ ವ್ಯಾಪಿ ವ್ಯವಸ್ಥೆಯ ನರಮಂಡಲವೆಂದರೆ ಹಣಕಾಸು ವಹಿವಾಟುಗಳ ಚಲನವಲನಗಳ ಮುಕ್ತ ವಾತಾವರಣವೇ. ಎಲ್ಲಾ ಎಲ್ಲೆ ಕಟ್ಟುಗಳನ್ನು ಮೀರಿ ನಿಧಿಗಳು ಹರಿಯುವ ಅವಕಾಶವಿದ್ದಾಗ ಅದರ ಜೊತೆ ಜೊತೆಗೆ ತಿಳಿವು ಮಾಹಿತಿ, ಇದೂ ಕೂಡಾ ಸಲೀಸಾಗಿ ವ್ಯಾಪಿಸುವುದು ಸಾಧ್ಯವಾದಾಗ ಭೂಮಂಡಲೀಕರಣ ತನ್ನ ಪರಮಾವಧಿ ವಿಕಸನ ಹೊಂದಿದಂತೆ.

ಈ ವಲಯದ ಪ್ರಧಾನ ವಿಭಾಗವೆಂದರೆ ಬ್ಯಾಂಕಿಂಗ್ ವ್ಯವಸ್ಥೆ, ಇದು ಮುಕ್ತವಾಗಿ ವ್ಯವಹಾರ ನಡೆಸಲು ಅಗತ್ಯವಾದ ಪರಿಸರ ಸೃಷ್ಟಿ ಅತ್ಯಂತ ಮುಖ್ಯ. ಸರ್ಕಾರದ ಒಡೆತನಕ್ಕೆ ಒಳಗಾಗಿ, ಬೆತ್ತಹಿಡಿದು ನಿಂತ ರಾಜಕಾರಣಿಗಳು ಹೇಳಿದಂತೆ ಎದ್ದುಕುಳಿತು ಕಸರತ್ತು ಮಾಡಬೇಕಾಗಿ ಬಂದ ಬ್ಯಾಂಕುಗಳು ಸಾವಿರಾರು ಶಾಖೋಪಶಾಖೆಗಳಿಂದ ಕೂಡಿ ದೇಶದಲ್ಲೆಲ್ಲಾ ಹಬ್ಬಿರುವುದಾದರೂ ಇವುಗಳಿಂದ ಅನೇಕ ಒಳ್ಳೆಯ ಕೆಲಸಗಳಾದರೂ ಅಲ್ಲಿ ಲ್ಲಿ ನ್ಯೂನತೆಗಳು ಎದ್ದೇ ಇದ್ದವು. ಸರ್ಕಾರದ ಇಡೀ ನೀತಿಯೇ ಪುನರ್ವಿಮರ್ಶೆ ಹಾಗೂ ಪುನರ್ವ್ಯವಸ್ಥೆಗೆ ಒಳಪಟ್ಟಾಗ ಬ್ಯಾಂಕಿಂಗ್ ಸುಧಾರಣೆಗೆ ಆದ್ಯತೆ ದೊರೆಕುವಂತೆ ಆದದ್ದು ಸಹಜವೇ. ಬ್ಯಾಂಕುಗಳ ಜಡ್ಡು, ಜಡತೆ ತೊಡೆಯದೆ ಸುಧಾರಣೆ ಮುಂದುವರಿಯಲಾರದೆಂಬುದರ ಅರಿವಾಯಿತು.

ಆಗ ನೇಮಕಗೊಂಡ ನರಸಿಂಹಂ ಸಮಿತಿ ಬ್ಯಾಂಕುಗಳ ಕಾಯಿಲೆಗಳನ್ನೆಲ್ಲಾ ಪಟ್ಟಿಮಾಡಿತು. ರೋಗವನ್ನು ವಾಸಿಮಾಡಲು ಏನೇನು ಚಿಕಿತ್ಸೆಗಳನ್ನು ಮಾಡಬೇಕೆಂಬು ದನ್ನು ಸೂಚಿಸಿತು. ಅಂತೆಯೇ ರಿಸರ್ವ್ ಬ್ಯಾಂಕು ಈ ಸಲಹೆಗಳಲ್ಲಿ ಹಲವನ್ನು ಒಂದೊಂದಾಗಿ ಜಾರಿಗೆ ತರುತ್ತಿದೆ. ಅದಕ್ಕೆ ಅಷ್ಟೊಂದು ಗಮನ ಸಂದಿಲ್ಲವೆಂಬುದೂ ನಿಜವೇ. ದೇಶದಲ್ಲಿರುವ ಬ್ಯಾಂಕುಗಳ ಸಂಖ್ಯೆಯನ್ನು ವೈಜ್ಞಾನಿಕವಾಗಿ ನಿರ್ಧರಿಸುವ ಅವುಗಳ ಪುನರ್ರಚನೆ ಮಾಡಿ ಎಲ್ಲಾ ಬ್ಯಾಂಕುಗಳೂ ಎಲ್ಲಾ ಹಂತಗಳಲ್ಲೂ ಹಾಗೂ ಎಲ್ಲ ಬಗೆಯ ವ್ಯವಹಾರಗಳನ್ನೂ ಮಾಡುವ ಬದಲು ಕೆಲಕೆಲವು ಹಂತಗಳನ್ನು ಹಾಗೂ ಕೆಲಕೆಲವು ವ್ಯವಹಾರಗಳನ್ನು ಕೆಲಕೆಲವಕ್ಕೆ ಹಂಚಿಕೊಡುವ ವಿಚಾರ ಅಷ್ಟು ಸುಲಭವಲ್ಲ. ಅಭಿವೃದ್ಧಿ ಬ್ಯಾಂಕಿಂಗ್, ವಾಣಿಜ್ಯ ಬ್ಯಾಂಕಿಂಗ್, ದೀರ್ಘಕಾಲಿಕ ಹಾಗೂ ಅಲ್ಪ ಕಾಲಿಕ, ಉದರಿ ವ್ಯವಹಾರ-ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಬ್ಯಾಂಕುಗಳನ್ನು ವಿಂಗಡಿಸುವ ಬದಲು ಸಾರ್ವತ್ರಿಕ ಬ್ಯಾಂಕಿಂಗ್ ವ್ಯವಸ್ಥೆಯ ವಿಚಾರವೂ ಈಗ ಪ್ರಧಾನವಾಗಿ ಚರ್ಚೆಯಾಗುತ್ತಿದೆ. ಬ್ಯಾಂಕುಗಳ ಖಾಸಗೀಕರಣದ ಪ್ರಶ್ನೆಯೂ ಬಲು ಗಂಭೀರವಾದದ್ದೇ. ಅದೊಂದು ಜೇನು ಗೂಡು. ಕೈಹಾಕಿದರೆ ಜೇನಿಗಿಂತ ಮುಳ್ಳಿನ ರುಚಿಯೇ ಸಿಕ್ಕೀತು. ಆದ್ದರಿಂದ ಎಚ್ಚರಿಕೆ ಅಗತ್ಯ.

ಬ್ಯಾಂಕಿಂಗ್ ವಲಯದಲ್ಲಿ ಸರ್ಕಾರೀ ಬ್ಯಾಂಕುಗಳದು ಬಲು ದೊಡ್ಡಭಾಗ, ಉಳಿದ ಭಾಗ ಖಾಸಗೀ ಒಡೆತನದ ಬ್ಯಾಂಕುಗಳದು. ಖಾಸಗೀ ಬ್ಯಾಂಕುಗಳು ಈಗ ಚೆನ್ನಾಗಿಯೇ ಕೆಲಸಮಾಡುತ್ತಿವೆ. ಇವಲ್ಲದೆ ಈಚೆಗೆ ಪರವಾನಗಿ ಪಡೆದ ಖಾಸಗೀ ವಲಯ ಬ್ಯಾಂಕುಗಳೂ ಉತ್ಸಾಹದಿಂದ ಕೆಲಸಮಾಡುತ್ತಿವೆ. ವಿದೇಶೀ ಮೂಲದ ಬ್ಯಾಂಕುಗಳ ಪ್ರತಿಷ್ಠೆಯ ಪ್ರತೀಕವಾಗಿದೆ. ಗಣಕ ಸೌಲಭ್ಯದ ಸಾಧನಗಳಿಂದ ಸಜ್ಜಾಗಿ ಹಗಲೂ ರಾತ್ರಿ ಗ್ರಾಹಕರ ಸೇವೆಗೆ ಮಾಡುವೆನೆಂಬ ಈ ಬ್ಯಾಂಕುಗಳು ಉದ್ಯಮ ಲೋಕದ ಪ್ರತಿಷ್ಠಿತ ಶ್ರೀಮಂತ ಹಾಗೂ ಚೈತನ್ಯಪೂರ್ಣ ವಲಯವನ್ನು ತಮ್ಮತ್ತ ಸೆಳೆದುಕೊಳ್ಳುತ್ತಿವೆ. ಲಾಭದಾಯಕವಾಗಿ ಕೆಲಸಮಾಡುತ್ತಿವೆ. ಆದರೆ ಬೃಹತ್ ಸರ್ಕಾರಿ ವಲಯದ ಬ್ಯಾಂಕುಗಳು ಜಡವಲಯದ ಹೊರೆ ಹೊತ್ತುಕೊಂಡು ಭಾರೀ ಸಿಬ್ಬಂದಿಯೊಂದಿಗೆ ವಸೂಲಿಗಿಂತ ವಿಲೇವಾರಿಯನ್ನೇ ಹೆಚ್ಚಾಗಿ ನಡೆಸುತ್ತಿದೆ.

ಆರ್ಥಿಕ ಸುಧಾರಣೆಯ ಅಂಗವಾಗಿ ಹಣಕಾಸು ವಲಯದ ಪರಿಷ್ಕರಣದ

ಹೊಣೆ ಹೊತ್ತ ರಿಜರ್ವ್ ಬ್ಯಾಂಕಿನ ಮೇಲ್ವಿಚಾರಣೆಯಿಂದಾಗಿ ನಮ್ಮ ಬೃಹತ್ ಬ್ಯಾಂಕುಗಳು ಕ್ರಮಕ್ರಮವಾಗಿ ಸಲೀಸಾಗಿ ಚಲಿಸಲಾರಂಭಿಸಿವೆ. ಹಳೆಯ ರೋಗಗಳನ್ನು ವಾಸಿಮಾಡಿಕೊಳ್ಳುವ ದಿಕ್ಕಿನಲ್ಲಿ ಮುನ್ನಡೆದಿವೆ. ನಷ್ಟದಲ್ಲಿ ನಡೆಯುತ್ತಿರುವ ಬ್ಯಾಂಕುಗಳು ತಮ್ಮ ಬಂಡವಾಳ ಹೆಚ್ಚಿಸಿಕೊಳ್ಳುತ್ತಿವೆ. ತಮ್ಮ ಸಾಲವಹಿವಾಟು ತತ್ಫಲವಾಗಿ ಹೇರಿಕೊಳ್ಳುವ ಋಣರೂಪಿ ಆಸ್ತಿಗಳಿಗೆ ಒಂದು ನಿಗದಿಯಾದ ಪ್ರಮಾಣದಲ್ಲಿ ಅಥವಾ ಅನುಪಾತದಲ್ಲಿ ಸ್ವಂತ ಬಂಡವಾಳವನ್ನು ವೃದ್ಧಿಪಡಿಸಿಕೊಳ್ಳುತ್ತಿವೆ. ಸರ್ಕಾರವು ಬ್ಯಾಂಕುಗಳ ಕೊರಳಿಗೆ ಬಿಗಿದ ಹಗ್ಗವನ್ನು ಸಡಿಲಗೊಳಿಸುತ್ತಿದೆ. ಠೇವಣಿ ಸಂಗ್ರಹಣೆ, ಸಾಲನೀಡಿಕೆ ಇತ್ಯಾದಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಬೇಡಿಕೆ ಪೂರೈಕೆ ಹಾಗೂ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಬಡ್ಡಿದರಗಳು ಚಲಿಸುತ್ತಿವೆ. ಇವೆಲ್ಲಾ ಸ್ವಾಗತಾರ್ಹ ಪ್ರವೃತ್ತಿಗಳೆ ಬೇಕಾಗಿದೆ.

ಆದರೂ ಸುಧಾರಣೆ ವ್ಯಾಪಕವಾಗಿ ಪರಿಣಮಿಸಿಲ್ಲ. ಹಲವಾರು ತೊಡಕುಗಳು ಉಳಿದಿವೆ. ಸರ್ಕಾರದ ಉದ್ದೇಶಗಳಿಗೆ ಅನುಗುಣವಾಗಿ ನಡೆಸುತ್ತಾ ಬಂದ ಕಲಾಪಗಳ ಫಲವಾಗಿ ಸಂಚಿತವಾದ ಜಡ ಆಸ್ತಿಗಳು, ಆದ್ಯತಾ ವಲಯಗಳಿಗೆ ನೀಡಿದ ಸಾಲ, ಕೈಗಾರಿಕೆಗಳಿಗೆ ಒದಗಿಸಿದ ಸಾಲ, ಸರ್ಕಾರದ ಆದೇಶದಂತೆ ಪೂರೈಸಿದ ನೆರವುಗಳು ನಾನಾ ಬಗೆಯಲ್ಲಿ ಬ್ಯಾಂಕ್ ಸಾಲಗಳು ಏರಿಕೊಳ್ಳುತ್ತಾ ಬರುತ್ತಿವೆ. ಬರಬೇಕಾದ ಬಾಕಿ ಇಷ್ಟು ಎಂದು ಬ್ಯಾಂಕುಗಳು ತಮ್ಮ ಆಸ್ತಿ-ಹೊಣೆಪಟ್ಟಿಯಲ್ಲಿ ಆಸ್ತಿಯ ಅಡಿಯಲ್ಲಿ ತೋರಿಸಿಕೊಳ್ಳುತ್ತಿವೆ. ಅವುಗಳಿಂದ ಬರಬೇಕಾದ ಬಡ್ಡಿಯೂ ಸೇರಿಕೊಂಡು ಆಸ್ತಿ ಬೆಳೆಯುತ್ತಿದೆ. ಬರಬೇಕಾದ ಬಡ್ಡಿಯನ್ನು ಆದಾಯವೆಂದು ಲಾಭ-ನಷ್ಟ ಲೆಕ್ಕದಲ್ಲೂ ತೋರಿಸಿಲಾಗುತ್ತಿದೆ. ಲಾಭವೆಂಬ ಭ್ರಮಾಲೋಕ ಸೃಷ್ಟಿಯಾಗಿದೆ. ಆದರೆ ಇದು ಒಳಗೊಳಗೇ ಬ್ಯಾಂಕಿನ ಸ್ಥಿರತೆಯನ್ನು ಕುಟ್ಟೆ ಹುಳುವಿನಂತೆ ಕೊರೆಯುತ್ತಿದೆ. ಬ್ಯಾಂಕು ಇದ್ದಲ್ಲೇ ಕುಸಿಯುವ ಸ್ಥಿತಿ ಉಂಟಾಗುತ್ತಿದೆ.

ಆದ್ದರಿಂದ ಸಾಲವನ್ನು ಕೊಡುವಾಗ, ತೆಗೆದುಕೊಳ್ಳುವಾಗ, ಭ್ರಮಲೋಕದಲ್ಲಿ ವಿಹರಿಸದೆ ಸತ್ಯಾಸತ್ಯತೆಯನ್ನು ವಿವೇಚಿಸಿ ಮುಂದಡಿಯಿಡ ಬೇಕು. ಬದಲಾಗುತ್ತಿರುವ ಸರ್ಕಾರವು ತಮ್ಮ ಜನಪ್ರಿಯತೆಗಳನ್ನು ಕಾಯ್ದುಕೊಳ್ಳಲು ಬ್ಯಾಂಕ್ ನೀತಿಯನ್ನು ವಿಸ್ತರಿಸುತ್ತಿವೆ. ವಿದೇಶೀ ಬಂಡವಾಳ ಹೂಡಿಕೆಯ

ಉದ್ಯಮಗಳೂ ನೆಲಕಚ್ಚುವ ಹಾದಿಯಲ್ಲಿವೆ. ವಿವಶವಾಗಿ ಕೈ ಚೆಲ್ಲಿ ಕುಳಿತುಕೊಳ್ಳು ವಂತ ವಿಷಚಕ್ರದ ಪರಿಸ್ಥಿತಿಯಲ್ಲಿ ಭಾರತದ ಆರ್ಥಿಕ ಪರಿಸ್ಥಿತಿ ಇದೆ.

ಸಹಕಾರ ಮತ್ತು ಒಕ್ಕಲುತನ

ಸಹಕಾರಿ ಪದ್ಧತಿ ನಮ್ಮದೇಶದಲ್ಲಿ ಸುಮಾರು ಆರು ದಶಕಗಳಿಂದೂ ವಿಶೇಷವಾಗಿ ಕೃಷಿರಂಗದಲ್ಲಿ ಅನೇಕ ಹಂತಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ. ಈ ಪದ್ಧತಿಗೆ ಭಾರತದಂಹ ಪ್ರಜಾಸತ್ತಾತ್ಮಕ ದೇಶದಲ್ಲಿ ಮಹತ್ವದ ಸ್ಥಾನವಿದೆ. ಕೃಷಿ ಅಭಿವೃದ್ಧಿಯ ಅನೇಕ ಸಮಸ್ಯೆಗಳಿಗೆ ಇದು ಪರಿಹಾರ ಮಾರ್ಗವಾಗಬಲ್ಲು ದೆಂದು ನಿರೀಕ್ಷಿಸಲಾಗಿದೆ. ಭಾರತದಲ್ಲಿಯ ಕೃಷಿರಂಗ ಸಹಕಾರಿ ವ್ಯವಸ್ಥೆಯಿಂದ ತುಂಬಾ ಪ್ರಭಾವಿತವಾಗಿದೆ. ವಿಶೇಷತಃ ಕೃಷಿ ಸಾಲ-ಸೌಲಭ್ಯಗಳ ವಲಯದಲ್ಲಿ ಸಹಕಾರೀ ರಂಗ ಗ್ರಾಮೀಣ ಪತ್ತಿನ ಅತಿ ಮುಖ್ಯ ವ್ಯವಸ್ಥಿತ ಪತ್ತಿನ ಪದ್ಧತಿಯಾಗಿ ಪರಿಣಮಿಸಿದೆ.

ಸಹಕಾರಿ ಸಂಘವು ಸದಸ್ಯರ ಸ್ವಯಂ ಪ್ರೇರಣೆಯಿಂದ ರೂಪಿತಗೊಂಡಿದ್ದು ಅದರಲ್ಲಿ ಪ್ರತಿ ಸದಸ್ಯನಿಗೂ ಸಮಾನ ಹಕ್ಕು ಮತ್ತು ಹೊಣೆಗಾರಿಕೆಯುಂಟು. ಇದು ಸದಸ್ಯರ ಪರಸ್ಪರ ಸಹಾಯ ಸಹಕಾರ ಮತ್ತು ಅನುಕೂಲತೆಗಾಗಿ ಇದ್ದು, ಇದು ಖಾಸಗಿ ರಂಗದಂತೆ ಲಾಭಕ್ಕಾಗಿ ರಚಿಸಲ್ಪಟ್ಟಿಲ್ಲ. ವ್ಯಕ್ತಿ ಸಮಷ್ಟಿಗಾಗಿ, ಸಮಷ್ಟಿ ವ್ಯಕ್ತಿಗಾಗಿ ಎಂಬ ತತ್ವದ ಆಧಾರದ ಮೇಲೆ ಇದು ರೂಪುಗೊಂಡಿದೆ.

ಕೃಷಿಕರನ್ನು ಬಡ್ಡಿ ಸಾಲದ ಸಾಹುಕಾರರ ಕಪಿಮುಷ್ಟಿಯಾದ ತಪ್ಪಿಸುವ ಒಂದೇ ಒಂದು ಮಾರ್ಗವೆಂದರೆ ಸಹಕಾರ ಪದ್ಧತಿಯೊಂದು ಪರಿಗಣಿಸಿ ಸರಕಾರವು ಈ ಪದ್ಧತಿಯ ಸಂಘಟನೆ ಹಾಗೂ ಪ್ರಚಾರಕ್ಕೆ ಹೆಚ್ಚಿನ ಮಹತ್ವವನ್ನಿತ್ತಿತು. ೧೯೦೪ರಲ್ಲಿ ಸಹಕಾರೀ ಪತ್ತಿನ ಸಂಘಗಳ ಕಾನೂನನ್ನು ರಚಿಸಿತು. ಇದರಡಿಯಲ್ಲಿ ಗ್ರಾಮಂತರ ಸಹಕಾರೀ ಪತ್ತಿನ ಸಂಘಗಳನ್ನು ಸಂಘಟಿಸಲಾಯಿತು.

ಸಹಕಾರೀ ಸಂಘಗಳು ರೈತರು ಮಧ್ಯವರ್ತಿಗಳಿಂದ ಶೋಷಿಸಲ್ಪಡು ವುದನ್ನು ತಪ್ಪಿಸಿ ಅವರಿಗೆ ಅವರು ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಸಿಗುವಂತೆ ನೋಡಿಕೊಳ್ಳುತ್ತದೆ.

ಸಹಕಾರ

ಮನುಷ್ಯನು ಸಮಾಜ ಜೀವಿ. ನಾಲ್ವರೊಂದಿಗೆ ಕೂಡಿ ಬಾಳುವುದು ಹುಟ್ಟುಗುಣ. ಅವನು ತನ್ನವರ ಕಷ್ಟ-ಸುಖದಲ್ಲಿ ಪಾಲ್ಗೊಳ್ಳುವುದು ಅನುವು ಆಪತ್ತಿನಲ್ಲಿ ಆಸರೆಯಾಗುವುದು ಎಂದಿನಿಂದಲೂ ನಡೆದು ಬಂದಿದೆ.

ವ್ಯಕ್ತಿ ಜೀವನದಲ್ಲಿ, ಕುಟಂಬ ಜೀವನದಲ್ಲಿ, ಸಮಾಜ ಜೀವನದಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಸಹಕಾರ ಇದ್ದೇ ಇದೆ. ಇದು ಸಾಮಾನ್ಯ ಅರ್ಥದಲ್ಲಿನ ಸಹಕಾರ ಯಾರು-ಯಾರಿಗೂ ಹೇಳಿಕೊಟ್ಟುದಲ್ಲ. ತಂತಾನೆ ಹೆಣೆದುಕೊಂಡು ಬಂದುದು.

ಆರ್ಥಿಕ ಜೀವನದಲ್ಲೂ ಸಹಕಾರ ಒಂದಿಲ್ಲೊಂದು ಬಗೆಯಲ್ಲಿ ನಡೆದು ಬಂದುದನ್ನು ಕಾಣಬಹುದು, ಹೊಲಗೆಲಸದಲ್ಲಿ, ಇತರ ಕಸುಬುಗಳಲ್ಲಿ ಪರಸ್ಪರ ಸಹಕರಿಸುವುದು ಹಿಂಸೆಯೂ ರೂಢಿಯಲ್ಲಿತ್ತು. ನಮ್ಮ ದೇಶದಲ್ಲಿ ಎಂದಿನಿಂದಲೂ ನಡೆದು ಬಂದ ಕೂಡೊಕ್ಕಲು ಪದ್ಧತಿ ಇದಕ್ಕೆ ನಿದರ್ಶನ.

ಮೀನುಗಾರರ ಹಾಗೂ ಹೈನುಗಾರರ ಸಹಕಾರೀ ಸಂಘಗಳ ಜನರಿಗೆ ಬೇಕಾದ ಮೀನು ಹಾಗೂ ಹಾಲನ್ನು ಅನುಕ್ರಮವಾಗಿ ಪೂರೈಸುವುದರಲ್ಲಿ ಸಾಕಷ್ಟು ಪ್ರಯೋಜನಕಾರಿಯಾಗಿದೆ.

ತರಕಾರಿ, ಹಣ್ಣು, ಹೂವು ಇವುಗಳ ಸಹಕಾರೀ ಸಂಸ್ಥೆಗಳು ನೇರವಾಗಿ ಗ್ರಾಹಕರಿಗೆ ಒದಗಿಸಿ ದಳ್ಳಾಳಿಗಳ ಹಾವಳಿಯನ್ನು ತಪ್ಪಿಸುತ್ತದೆ.

ಬಳಕೆದಾರರ ಸಹಕಾರೀ ಸಂಘಗಳು ಜನರಿಗೆ ಬೇಕಾದಂತಹ ಒಳ್ಳೆಯ ಗುಣಮಟ್ಟದ ವಸ್ತುಗಳನ್ನು ಬೆಲೆಯಲ್ಲಿ ಪೂರೈಸುವುದರಲ್ಲೂ ಯಶಸ್ವಿಯಾಗಿದೆ.

ಪ್ರಾಥಮಿಕ ಸಾಲ ಸಹಕಾರೀ ಸಂಘಗಳು ಗ್ರಾಮೀಣ ಪ್ರದೇಶಗಳ ಜನರಲ್ಲಿ ಉಳಿತಾಯದ ಅಭ್ಯಾಸವನ್ನು ಹೆಚ್ಚಿಸಿದೆ.

ಸಹಕಾರೀ ಸಂಘಗಳು ಹೀಗೆ ವಿವಿದೋದ್ದೇಶಗಳನ್ನು ಹೊಂದಿದವುಗಳಾಗಿದ್ದು ಸುಲಬಕಂತಿನ ಸಾಲ, ಕಡಿಮೆ ಬಡ್ಡಿದರ, ಮಾರುಕಟ್ಟೆ, ಉತ್ಪಾದನೆಗೆ ಬೇಕಾದತಂಹ ಸಲಕರಣೆಗಳು ಒಂದೇ ಕಡೆಗೆ ಸಿಕ್ಕಿ ಅವರು ಪ್ರಗತಿಶೀಲರಾಗವುದು ಸಾಧ್ಯವಾಗುತ್ತದೆ.

ಕೃಷಿ ಮತ್ತು ಸಹಕಾರ

ವ್ಯವಸಾಯದಲ್ಲಿ ಅಥವಾ ಒಕ್ಕಲುತನದಲ್ಲಿ ಸಹಕಾರವು ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಮೊದಲು ಇದನ್ನು ಕೂಡೊಕ್ಕಲು ಎಂದೇ ಹೇಳುತ್ತಿದ್ದರು. ಅಂದರೆ ಕೂಡಿಯೇ ಕೆಲಸಮಾಡಬೇಕು.

ಒಬ್ಬನಿಗಿಂತ ಇಬ್ಬರು ಲೇಸು. ಏಕೆಂದರೆ ಅವನ ಶ್ರಮಕ್ಕೆ ಉತ್ತಮ ಪ್ರತಿಫಲ ದೊರೆಯುತ್ತದೆ. ವ್ಯವಸಾಯದಲ್ಲಿ ಸಹಕಾರವು ಎಂದಿನಿಂದಲೂ ನಡೆದು ಬಂದಿದೆ, ಮಾನವ ಸಮಾಜದ ಅಸ್ತಿತ್ವದಲ್ಲಿ ಬಂದಾಗಿನಿಂದಲೂ ಸಹಕಾರ ಪ್ರಚಲಿತವಾಗಿದೆ. ಅಂದರೆ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಒಂದುಗೂಡಿ ವೈಯಕ್ತಿಕವಾಗಿ ಸಾಧಿಸಲು ಅಸಾಧ್ಯವಾದ ಗುರಿಯನ್ನು ಸಾಧಿಸಲು ಸುಲಭಮಾಡಿಕೊಂಡಿದ್ದಾರೆ. ಹೀಗೆಯೇ ನಾಲ್ವರು ಜೊತೆಗೂಡಿ ಕೈಗೊಂಡ ಕಾರ್ಯದಿಂದ ಅವರೆಲ್ಲರು ಆರ್ಥಿಕ ಕಲ್ಯಾಣ ಸಾಧಿಸಬಲ್ಲರು. ಸ್ವಯಂ ಪರಿಪೂರ್ಣತೆಯನ್ನೂ ಪಡೆದಿದ್ದಿತು. ತಮಗೆ ಬೇಕಾದ ಆಹಾರ ಪದಾರ್ಥ ಮತ್ತು ಇತರ ಪದಾರ್ಥಗಳನ್ನು ತಾವೇ ಬೆಳೆದುಕೊಳ್ಳುತ್ತಿದ್ದರು. ಕೃಷಿಯ ಕೆಲಸಗಳಲ್ಲಿ ಒಬ್ಬರಿಗೊಬ್ಬರು ನೆರವಾಗುತ್ತಿದ್ದರು. ಬೆಳೆದ ಅಥವಾ ತಯಾರಿಸಿದ ಸಾಮಾನುಗಳನ್ನು ಅಗತ್ಯಕ್ಕೆ ಅನುಕೂಲವಾಗುವಂತೆ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಇದೇ ಸೂತ್ರವನ್ನು ಅವಲಂಬಿಸಿ ಸರ್ಕಾರದವರು ವ್ಯವಸಾಯದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಅನೇಕ ಸಹಕಾರೀ ಸಂಘಗಳನ್ನು ಸ್ಥಾಪಿಸಿದ್ದಾರೆ. ರೈತರಿಗೆ ಆರ್ಥಿಕ ನೆರವನ್ನು ನೀಡಲು ಸಹಕಾರೀ ಬ್ಯಾಂಕುಗಳು, ಇವುಗಳು ರೈತರಿಗೆ ಕಡಿಮೆ ಬಡ್ಡಿಯ ದರದಲ್ಲಿ ಸುಲಭ ಕಂತುಗಳಲ್ಲಿ ಸಾಲವನ್ನು ಒದಗಿಸುವುವು.

ಸಹಕಾರೀ ಸಂಘಗಳು ರೈತರಿಗೆ ಬೇಕಾದಂತಹ ಬಿತ್ತನೆ ಬೀಜಗಳು, ರಾಸಾಯನಿಕ ಗೊಬ್ಬರ, ಕೀಟನಾಶಕ, ಕೃಷಿಯಂತ್ರೋಪಕರಣಗಳನ್ನು ಒದಗಿಸುತ್ತದೆ. ಅದರಿಂದಾಗಿ ದೇಶದ ಕೃಷಿ ಉತ್ಪನ್ನಗಳ ಅಭಿವೃದ್ಧಿಯಾಗಿದೆ. ನಮ್ಮ ದೇಶದಲ್ಲಿ ಹಸಿರು ಕ್ರಾಂತಿಯಾಗಲು ಸಹಕಾರೀ ಸಂಸ್ಥೆಗಳೇ ಕಾರಣ. ಜನರ ಸ್ವಯಂ ಪ್ರೇರಿತ ಸಂಘಶಕ್ತಿಯನ್ನು ರೂಢಿಸುವ ಮತ್ತು ಪ್ರಜಾಸತ್ತಾತ್ಮಕ

ಮೌಲ್ಯಗಳಿಗೆ ಹೊಂದಿಕೊಳ್ಳುವ ಸಹಕಾರ ತತ್ವಕ್ಕೆ ಸರಕಾರವೂ ಪ್ರೋತ್ಸಾಹ ನೀಡುತ್ತದೆ.

ವ್ಯವಸಾಯವು ಒಂದು ಸಮೂಹ ವೃತ್ತಿಯಾಗಿದೆ. ಇದಕ್ಕೆ ಹೆಚ್ಚು ಜನರ ಸಹಾಯ ಸಂಪರ್ಕಗಳು ಬೇಕು. ಉಳುಮೆ, ಬಿತ್ತನೆ, ಕಳೆ ತೆಗೆಯುವುದು, ಔಷಧಿ ಸಿಂಪರಣೆ, ಕುಯ್ಲು, ರಾಶಿ ಮಾಡುವುದು, ಸಾಗಣೆ ಎಲ್ಲವೂ ಜನಗಳು ಹಾಗೂ ಯಂತ್ರಗಳ ಸಹಾಯ ದಿಂದ ನಡೆಯುತ್ತಿದೆ. ಕೃಷಿಗೆ ಪೂರಕವಾಗಿ ದನಕರುಗಳನ್ನು ಸಾಕುವುದು, ಅರಣ್ಯಗಳನ್ನು ನೋಡಿಕೊಳ್ಳುವುದು ಅದರ ಉತ್ಪನ್ನಗಳ ಮಾರಾಟ. ಹೀಗಾಗಿ ಇವುಗಳ ಉಪ ಉತ್ಪಾದನೆಗಳನ್ನು ಪಡೆಯುವುದೂ ಒಂದು ಲಾಭದಾಯಕ ಆದಾಯವಾಗಿದೆ.

ಸಹಕಾರೀ ಸಂಘಗಳು ನಮ್ಮ ದೇಶದ ಜನರಿಗೆ ಸಾಕ್ಷರತೆಯ ಪರಿಣಾಮವನ್ನು ಬೀರುವಲ್ಲಿ ಹಾಗೂ ಅವರಿಗೆ ಶುಚಿತ್ವದ ಬಗೆಗೆ ತಿಳಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಅಂಶವನ್ನು ಮನದಟ್ಟು ಮಾಡುತ್ತಿದೆ. ಅಲ್ಲದೆ 'ಎಲ್ಲರೂ ತನಗಾಗಿ, ತಾನು ಎಲ್ಲರಿಗಾಗಿ' ಎಂಬ ಮೂಲ ಮಂತ್ರವನ್ನೂ ಅನುಷ್ಠಾನಕ್ಕೆ ತರುವಲ್ಲಿ ಸಹಾಯಮಾಡುತ್ತದೆ.

ಹೀಗೆ ಸಹಕಾರೀ ಸಂಘಗಳಿಂದ ವ್ಯವಸಾಯದ ಸರ್ವತೋಮುಖವಾದ ಬೆಳವಣಿಗೆಯಾಗುತ್ತದೆ. ಜನತೆಯಲ್ಲಿ ಸಹಕಾರದ ಪ್ರಜ್ಞೆಮೂಡಬೇಕು. ಸಹಕಾರದ ತತ್ವಗಳನ್ನೂ ಸರಕಾರದಿಂದ ದೊರೆಯುವ ಪ್ರಯೋಜನಗಳನ್ನೂ ಜನ ಅರಿತುಕೊಂಡು ನಡೆಯಬೇಕು. ಸಹಕಾರದ ಮೂಲತತ್ವಗಳು, ಕಾಲ ಬದಲಾದಂತೆ ಮಾರ್ಪಾಡು ಹೊಂದಿದ ತತ್ವಗಳು, ದೇಶ ವಿದೇಶಗಳಲ್ಲಿ ಸಹಕಾರ ನಡೆದುಬಂದು ದಾರಿ ಇವುಗಳ ಸ್ಪಷ್ಟ ಚಿತ್ರಣವಿರಬೇಕು.

ಉಪಸಂಹಾರ

ಹೀಗೆ ಕೃಷಿ, ಬ್ಯಾಂಕಿಂಗ್, ಮತ್ತು ಸಹಕಾರ ಇವುಗಳು ಒಂದಕ್ಕೊಂದು ಸೇರಿಕೊಂಡ ಕೊಂಡಿಗಳಿದ್ದಂತೆ. ಒಂದಕ್ಕೆ ಪೂರಕವಾಗಿ ಬೆಳೆದು ಬಂದಿದೆ.

ಜನರಲ್ಲಿ ಒಗ್ಗಟ್ಟು, ಸಹಕಾರವಿದ್ದರೆ ಕೃಷಿಯ ಉತ್ಪನ್ನವನ್ನು ಹೇರಳವಾಗಿ

ಬೆಳೆಯಬಹುದು. ಕೃಷಿಯ ಉತ್ಪನ್ನ ಉದ್ಯಮಕ್ಕೆ ತೊಡಗಿಸಿದರೆ ವ್ಯಕ್ತಿ, ರಾಷ್ಟ್ರ ಸಂಪದ್ಭರಿತವಾಗುತ್ತದೆ. ಹೀಗೆ ಬೆಳೆ ಬೆಳೆಯಲು ಮಾರಲು, ಕೈಗಾರಿಕ ಉತ್ಪನ್ನಗಳನ್ನು ಬೆಳೆದುಕೊಡಲು ಬ್ಯಾಂಕ್‌ಗಳು ಮುಂದೆ ಬಂದು ಆರ್ಥಿಕ ಸಹಾಯವನ್ನು ಮಾಡಿ ತಮ್ಮ ವ್ಯವಹಾರವನ್ನೂ ಕುದುರಿಸಿಕೊಳ್ಳಬಹುದು.

ಒಂದೊಂದು ಕ್ಷೇತ್ರವೂ ಮತ್ತೊಂದನ್ನು ಅವಲಂಬಿಸಿವೆ. ಇವುಗಳ ಭದ್ರತೆಯಿಂದ, ಪ್ರಾಮಾಣಿಕತೆಯಿಂದ, ಶ್ರದ್ಧೆಯಿಂದ ಕೆಲಸ ಮಾಡಿದರೆ ರಾಷ್ಟ್ರವು ಉನ್ನತಿ ಹೊಂದುವುದರಲ್ಲಿ ಸಂಶಯವೇ ಇಲ್ಲ.



ಕೃಷಿ ಪ್ರಧಾನ ದೇಶವಾಗಿರುವ ಭಾರತದಲ್ಲಿ ವ್ಯವಸಾಯ ಕ್ಷೇತ್ರದ ಹೆಚ್ಚಿನ ಪ್ರಗತಿಗೆ ಸಹಾಯಕವಾಗಲಿ, ಹಸಿರು ಕ್ರಾಂತಿಗೆ ಇಂಬು ನೀಡಲಿ ಎಂಬ ಉದ್ದೇಶದಿಂದಲೇ ಸರ್ಕಾರ ಸಹಕಾರಿ ಬ್ಯಾಂಕುಗಳನ್ನು ಪ್ರಾರಂಭಿಸಿದೆ. ಬ್ಯಾಂಕಿಂಗ್ ಎನ್ನುವ ಶಬ್ಧ ಚಾಲನೆಗೆ ಬರುವುದಕ್ಕೆ ಎಷ್ಟೋ ಮೊದಲಿನಿಂದಲೇ ಸ್ಥಳೀಯರು ತಮ್ಮಲ್ಲಿನ ಬಂಡವಾಳವನ್ನು ಕ್ರೋಢೀಕರಿಸಿ ಸಹಕಾರಿ ಸಂಘಗಳನ್ನು ರಚಿಸಿಕೊಂಡು ರೈತ ಸಮುದಾಯದ ಏಳಿಗೆಗೆ ಪೂರಕವಾಗುವಂತೆ ಆರ್ಥಿಕ ನೆರವನ್ನು ನೀಡುತ್ತಾ ಬಂದಿರುವುದು ಬ್ಯಾಂಕಿಂಗ್ ವ್ಯವಸ್ಥೆಯೇ ಆಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು-೫೬೦ ೦೧೮.